08 ಸೆಪ್ಟೆಂಬರ್ 2025 ಸೋಮವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 179 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629

ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ

ಬ್ರಿಟನ್‌ನ ಲಿವರ್‌ಪೂಲ್‌ನಲ್ಲಿ ನಡೆಯುತ್ತಿರುವ ವಿಶ್ವ ಬಾಕ್ಸಿಂಗ್ ಚಾಂಪಿಯನ್ ಷಿಪ್‌ನಲ್ಲಿ ಪ್ರಿ ಕ್ವಾರ್ಟರ್ ಫೈನಲ್‌ಗೆ ಭಾರತದ ಲಕ್ಷ್ಯ ಚಾಹರ್ ಅವರು ಆಯ್ಕೆಯಾಗಿದ್ದಾರೆ.





ಒತ್ತಡ ನಿವಾರಣೆಗೆ ಬೇಕು ಆಸರೆ-ನಂಬಿಕೆ » 2



ಕತ್ತರಿಘಟ್ಟದಲ್ಲಿ ಅದ್ದೂರಿ ದಂಡಿನ ಜಾತ್ರಾ ಮಹೋತ್ಸವ » 3



ಧಾರ್ಮಿಕ ಆಚರಣೆಗೆ ವೈಜ್ಞಾನಿಕ ಕಾರಣವಿದೆ » 4

# ನ್ಯಾಯ ಸಮ್ಮತ ಚುನಾವಣೆಗೆ ಆದ್ಯತೆ

## ಬ್ಯಾಲೆಟ್ ಪೇಪರ್‌ಗೆ ಅವಕಾಶವಿದೆ | ಮುಖ್ಯ ಚುನಾವಣಾ ಆಯುಕ್ತರ ಸ್ಪಷ್ಟನೆ

• ಪ್ರಜೋದಯ ವರದಿ

**ಬೆಂಗಳೂರು:** ಚುನಾವಣೆ ನಡೆಸುವಾಗ ವೆಚ್ಚ ಮತ್ತು ಸಮಯವನ್ನು ಪರಿಗಣಿಸಬಾರದು. ನ್ಯಾಯಸಮ್ಮತ ಚುನಾವಣೆ ನಡೆಸುವುದಷ್ಟೇ ಆದ್ಯತೆಯಾಗಿರುತ್ತದೆ ಎಂದು ರಾಜ್ಯ ಮುಖ್ಯ ಚುನಾವಣಾ ಆಯುಕ್ತ ಜಿ.ಎಸ್. ಸಂಗ್ರೇಶಿ ಅವರು ಹೇಳಿದರು.

ಕೋಲಾರ ಜಿಲ್ಲೆಯ ಕೋಟಿ ಲಿಂಗೇಶ್ವರ ದೇವಾಲಯ ಹಾಗು ಕೆಜಿಎಫ್ ಚಿನ್ನದ ಗಣಿಗಳ ಪ್ರದೇಶ ವೀಕ್ಷಣೆಗಾಗಿ ಬಂದಿದ್ದ ಅವರು ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇವಿಎಂ ಯಂತ್ರ ಮತ್ತು ಬ್ಯಾಲೆಟ್ ಪೇಪರ್‌ಗಳನ್ನು ಬಳಸಿ ಚುನಾವಣೆ ನಡೆಸಲು ಅವಕಾಶವಿದ್ದು, ಇವೆರಡರಲ್ಲಿ ಯಾವುದರ ಮೂಲಕ ಚುನಾವಣೆ ನಡೆಸಬೇಕೆಂಬುದು ಸರ್ಕಾರದ ವಿವೇಚನೆಗೆ ಬಿಟ್ಟಿದೆ ಎಂದರು.

ಸ್ಥಳೀಯ ಚುನಾವಣೆಗಳ ಮೀಸಲು ಪಟ್ಟಿ, ಕ್ಷೇತ್ರ ವಿಂಗಡಣೆ ಎಲ್ಲವನ್ನೂ ಸರ್ಕಾರ 2026ರ ಜನವರಿ ಅಥವಾ ಫೆಬ್ರವರಿ ಒಳಗೆ ನೀಡಿದರೆ ಸ್ಥಳೀಯ ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ನಗರಸಭೆ ಚುನಾವಣೆಗಳನ್ನು ನಡೆಸಲು ಚುನಾವಣೆ ಆಯೋಗ ಸಿದ್ಧವಿದೆ ಎಂದರು.





**ಬ್ಯಾಲೆಟ್ ಪೇಪರ್‌ಗೆ ಖರ್ಚು ಹೆಚ್ಚು**

ದೇಶದಲ್ಲಿ ಪ್ರಸ್ತುತ ಚುನಾವಣೆ ನಡೆಸುವುದಕ್ಕೆ ಕೇವಲ ಎರಡು ಆಯ್ಕೆಗಳು ಮಾತ್ರ ಇದೆ. ಅವುಗಳಲ್ಲಿ ಬ್ಯಾಲೆಟ್ ಪೇಪರ್ ಬಳಕೆ ಮಾಡಿದರೆ ಖರ್ಚು ಹೆಚ್ಚಾಗುತ್ತದೆ. ಹೆಚ್ಚಿನ ಸಮಯಾವಕಾಶ ಬೇಕಾಗುತ್ತದೆ ಎನ್ನುವುದು ಮುಖ್ಯವಾಗುವುದಿಲ್ಲ. ಸರ್ಕಾರ ಯಾವ ವಿಧಾನದ ಮೂಲಕ ಚುನಾವಣೆ ನಡೆಸಲು ತೀರ್ಮಾನಿಸುತ್ತದೆಯೋ ಆ ವಿಧಾನವನ್ನು ಬಳಸಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲಾಗುತ್ತದೆ ಎಂದು ಹೇಳಿದರು.

ಮುಂದಿನ ದಿನಗಳಲ್ಲಿ ವಿಧಾನಸಭೆ ಮತ್ತು ಲೋಕಸಭಾ ಚುನಾವಣೆಗಳಿಗೂ ಬ್ಯಾಲೆಟ್ ಪೇಪರ್ ಮೂಲಕವೇ ಚುನಾವಣೆ ನಡೆಸಲಾಗುತ್ತದೆಯೇ ಎಂಬುದನ್ನು ಕೇಂದ್ರ ಚುನಾವಣಾ ಆಯೋಗ ಸ್ಪಷ್ಟಪಡಿಸಬೇಕು. ತಮ್ಮ ವ್ಯಾಪ್ತಿಗೆ ಕೇವಲ ಪಂಚಾಯಿತಿ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆ ಬರುತ್ತದೆಂದರು.

**ಸರ್ಕಾರದೊಂದಿಗೆ ಪತ್ರ ವ್ಯವಹಾರ**

ಕ್ಷೇತ್ರ ಪುನರ್ ವಿಂಗಡಣಾ ಕಾರ್ಯ ಇನ್ನು ಸ್ವಲ್ಪ ಬಾಕಿ ಇದೆ. ಮೀಸಲು ಪಟ್ಟಿ ತಯಾರಿಸಬೇಕಾಗಿರುವುದರಿಂದ ಸ್ಥಳೀಯ ಸಂಸ್ಥೆಗಳ ಚುನಾವಣೆ ಮುಂದೂಡಿಕೆಯಾಗಿದೆ. ಈ ಬಗ್ಗೆ ಸರ್ಕಾರದೊಂದಿಗೆ ಪತ್ರ ವ್ಯವಹಾರವನ್ನೂ ಸಹ ನಡೆಸಲಾಗಿದೆ. ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗೆ ಸರ್ಕಾರ ಮೂರು ತಿಂಗಳ ಕಾಲಾವಧಿಯನ್ನು ತೆಗೆದುಕೊಂಡಿದೆ. ಕೆಲವು ಗ್ರಾಮ ಪಂಚಾಯಿತಿಗಳು ಪಟ್ಟಣ ಪಂಚಾಯಿತಿಗಳಾಗಿವೆ. ನಗರಸಭೆ, ಪುರಸಭೆಗಳ ವ್ಯಾಪ್ತಿಗೆ ಒಂದಷ್ಟು ಹಳ್ಳಿಗಳು ಸೇರಿದ್ದರಿಂದ ಮತ್ತೆ ಕ್ಷೇತ್ರ ಪುನರ್ ವಿಂಗಡಣಾ ಕಾರ್ಯ ಮಾಡಬೇಕಾಗಿದೆ. ರಾಜ್ಯದ ಸುಮಾರು 11-12 ಜಿಲ್ಲೆಗಳಲ್ಲಿ ಈ ಪ್ರಯೋಗವಾಗಬೇಕಾಗಿದೆ ಎಂದರು.

» ಮೂರನೇ ಪುಟದಲ್ಲಿ



ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮತಪತ್ರ ಬಳಸುವಂತೆ ಸರ್ಕಾರ ಸೂಚನೆ ನೀಡಿದರೆ ಅದನ್ನು ಪಾಲಿಸಲಾಗುವುದು. ಯಾವ ರೀತಿ ಚುನಾವಣೆ ನಡೆಸಬೇಕು ಎಂಬುದನ್ನು ಸರ್ಕಾರ ನಿರ್ಧಾರ ಮಾಡುತ್ತದೆ.

-ಜಿ.ಎಸ್.ಸಂಗ್ರೇಶಿ, ರಾಜ್ಯ ಮುಖ್ಯ ಚುನಾವಣಾ ಆಯುಕ್ತ

### ಮೂರ್ಖತನದ ಪರಮಾವಧಿ: ಬಿ.ವೈ.ವಿ.



ಇವಿಎಂಗಳ ಮೂಲಕ ನಡೆದ ಚುನಾವಣೆಯಲ್ಲೇ ಗೆದ್ದಿರುವ ಕಾಂಗ್ರೆಸ್ ಈಗ ಅದನ್ನೇ ಪ್ರಶ್ನಿಸುತ್ತಿರುವುದು ಮೂರ್ಖತನದ ಪರಮಾವಧಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಟೀಕಿಸಿದರು.

ಮೋದಿ ಅವರಿಂದ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂಬುದನ್ನು ದೇಶದ ಜನರು ಒಪ್ಪಿದ್ದಾರೆ. ಆದರೆ, ರಾಹುಲ್ ಗಾಂಧಿ ಅವರಿಗೆ ಒಪ್ಪಲಾಗುತ್ತಿಲ್ಲ. ಹೀಗಾಗಿಯೇ ಇವಿಎಂ ಅನ್ನು ದೂರುತ್ತಿದ್ದಾರೆಂದರು.

ರಾಹುಲ್ ಗಾಂಧಿ, ಸಿದ್ದರಾಮಯ್ಯ ಅವರಿಗೆ ಇವಿಎಂ ಕುರಿತು ಅಪನಂಬಿಕೆ ಬಂದಿದ್ದು ಏಕೆ. ಕರ್ನಾಟಕ, ಹಿಮಾಚಲ ಪ್ರದೇಶ ಮತ್ತು ತೆಲಂಗಾಣದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದದ್ದು ಹೇಗೆ. ಆಗ ಇವಿಎಂ ಸಮಸ್ಯೆ ಇರಲಿಲ್ಲವೇ. ಲೋಕಸಭಾ ಚುನಾವಣೆಯಲ್ಲಿ ಸತತ ಸೋಲಿನಿಂದ ಹತಾಶರಾಗಿರುವ ರಾಹುಲ್ ಗಾಂಧಿ ಅವರನ್ನು ಮೆಚ್ಚಿಸಲು ಬ್ಯಾಲಟ್ ಬಳಕೆಗೆ ಕಾಂಗ್ರೆಸ್ ಸರ್ಕಾರ ಮುಂದಾಗಿದೆ ಎಂದು ಪ್ರತಿಕ್ರಿಯಿಸಿದರು.

# ಕೊನೆಗೂ ವಿಧಾನ ಪರಿಷತ್ ಸದಸ್ಯರ ನೇಮಿಸಿದ ಸರ್ಕಾರ

• ಪ್ರಜೋದಯ ವರದಿ

**ಬೆಂಗಳೂರು:** ವಿಧಾನ ಪರಿಷತ್‌ನಲ್ಲಿ ಹಲವು ತಿಂಗಳಿಂದ ಖಾಲಿ ಇದ್ದ ನಾಲ್ಕು ಸದಸ್ಯ ಸ್ಥಾನಗಳಿಗೆ ಆರತಿ ಕೃಷ್ಣ, ರಮೇಶ್ ಬಾಬು, ಎಫ್. ಹೆಚ್.ಜಕ್ಕಪ್ಪನವರ್ ಮತ್ತು ಶಿವಕುಮಾರ್ ಅವರನ್ನು ನಾಮ ನಿರ್ದೇಶನ ಮಾಡಿ ಸರ್ಕಾರ ಭಾನುವಾರ ಅಧಿಕೃತ ಆದೇಶ ಹೊರಡಿಸಿದೆ.

ಏಳು ತಿಂಗಳ ಹಗ್ಗ ಜಗ್ಗಾಟದ ಬಳಿಕ ಕಾಂಗ್ರೆಸ್ ಈ ನಾಲ್ವರನ್ನು ವಿಧಾನ ಪರಿಷತ್‌ಗೆ ನಾಮನಿರ್ದೇಶನ ಮಾಡಿದೆ. ಈ ಸಂಬಂಧ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಗಳ ಸಚಿವಾಲಯ ಪ್ರಕಟಣೆ ಹೊರಡಿಸಿದೆ.

ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ರಮೇಶ್‌ಬಾಬು, ಕರ್ನಾಟಕ ಸರ್ಕಾರದ ಅನಿವಾಸಿ ಭಾರತೀಯ ಸಮಿತಿಯ ಅಧ್ಯಕ್ಷೆ ಆರತಿ ಕೃಷ್ಣ, ಎಐಸಿಸಿ ಪರಿಶಿಷ್ಟ ಜಾತಿ ವಿಭಾಗದ ಪ್ರಧಾನ ಕಾರ್ಯದರ್ಶಿ ಜಕ್ಕಪ್ಪನವರ್, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತರೂ ಆದ ಪತ್ರಕರ್ತ ಮೈಸೂರಿನ ಶಿವಕುಮಾರ್‌ಗೆ ಅವಕಾಶ ಒಲಿದಿದೆ.



ಸರ್ಕಾರದಿಂದ ನಾಮನಿರ್ದೇಶನಗೊಂಡಿದ್ದ ಕಾಂಗ್ರೆಸ್ ಯು.ಬಿ. ವೆಂಕಟೇಶ್ ಮತ್ತು ಪ್ರಕಾಶ್ ಕೆ. ರಾಥೋಡ್ ಅವರ ಅವಧಿ 2024ರ ಅಕ್ಟೋಬರ್‌ನಲ್ಲಿ ಮತ್ತು ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ ಅವರ ಅವಧಿ 2025ರ ಜನವರಿ ವೇಳೆಗೆ ಮುಕ್ತಾಯಗೊಂಡಿತ್ತು. ಉಪ ಚುನಾವಣೆಯಲ್ಲಿ ಸ್ಪರ್ಧಿಸುವ ಉದ್ದೇಶದಿಂದ ಸಿ.ಪಿ. ಯೋಗೇಶ್ವರ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಈ ಸ್ಥಾನಗಳು ಖಾಲಿಯಾಗಿದ್ದವು.

**ಜಾತಿವಾರು ಲೆಕ್ಕಾಚಾರ**

ನಾಮನಿರ್ದೇಶನಗೊಂಡಿರುವ ನಾಲ್ವರ ಪೈಕಿ ಆರತಿ ಕೃಷ್ಣ ಅವರು ಒಕ್ಕಲಿಗ, ರಮೇಶ್ ಬಾಬು ಅವರು ಹಿಂದುಳಿದ ವರ್ಗ, ಜಕ್ಕಪ್ಪನವರ್ ಹಾಗು ಶಿವಕುಮಾರ್ ಅವರು ದಲಿತ ಬಲಗೈ ಸಮುದಾಯಕ್ಕೆ ಸೇರಿದವರು.

## ಚಂದ್ರಗ್ರಹಣ: ಬೇಲೂರು ಚನ್ನಕೇಶವಸ್ವಾಮಿ ದೇವರ ದರ್ಶನ ನಿಷೇಧ

• ಪ್ರಜೋದಯ ವರದಿ



**ಬೇಲೂರು:** ವರ್ಷದ ಕೊನೆಯ ಖಗ್ರಾಸ ಚಂದ್ರ ಗ್ರಹಣ ಹಿನ್ನಲೆಯಲ್ಲಿ ಭಾನುವಾರ ಶ್ರೀ ಚನ್ನಕೇಶವ ಸ್ವಾಮಿ ದೇಗುಲದ ಗರ್ಭ ಗುಡಿಯನ್ನು ಮಧ್ಯಾಹ್ನ 3.30ರಿಂದ ಬಾಗಿಲು ಹಾಕಲಾಯಿತು.

ರಜಾ ದಿನವಾದ ಭಾನುವಾರ ಬೆಳಿಗ್ಗೆಯಿಂದಲೇ ಶ್ರೀ ಚನ್ನಕೇಶವ ಸ್ವಾಮಿ ದೇಗುಲಕ್ಕೆ ಹೆಚ್ಚಿನ ಸಂಖ್ಯೆ ಯಲ್ಲಿ ಪ್ರವಾಸಿಗರು ಮತ್ತು ಭಕ್ತರು ಆಗಮಿಸಿ ದೇವರ ದರ್ಶನದೊಂದಿಗೆ ದೇವಸ್ಥಾನ ವೀಕ್ಷಿಸಿದರು. ಚಂದ್ರ ಗ್ರಹಣ ಹಿನ್ನಲೆಯಲ್ಲಿ ಮಧ್ಯಾಹ್ನ ಪ್ರಧಾನ ಅರ್ಚಕ ಶ್ರೀನಿವಾಸ ಭಟ್ ಹಾಗು ನರಸಿಂಹ ಪ್ರಿಯ ಭಟ್ ಪೂಜಾ ವಿಧಿ ವಿಧಾನಗಳನ್ನು ಪೂರೈಸಿ ದೇವರಿಗೆ ವಿಶೇಷ ಪೂಜೆಯೊಂದಿಗೆ ಮಹಾ ಮಂಗಳಾರತಿ ನೆರವೇರಿಸಿದ ನಂತರ ಮಧ್ಯಾಹ್ನ 3.30ಕ್ಕೆ ಗರ್ಭ ಗುಡಿಯನ್ನು ಬಂದ್ ಮಾಡಿ ಗರ್ಭ ಗುಡಿಯ ಬಾಗಿಲಿಗೆ ಬೀಗ ಹಾಕಿದರು.

ಸೋಮವಾರ ಬೆಳಿಗ್ಗೆ 6.30ಕ್ಕೆ ಎಂದಿನಂತೆ ಬಾಗಿಲು ತೆರೆದು ಶುದ್ಧಿ ಕಾರ್ಯ ನಡೆಸಿದ ನಂತರ ವಿಶೇಷ ಪೂಜೆ ಸಲ್ಲಿಸಿ ಭಕ್ತರಿಗೆ ದೇವರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುವುದು. ಭಾನುವಾರ ವೀಕೆಂಡ್ ಹಿನ್ನಲೆಯಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಿತ್ತು. ಚಂದ್ರ ಗ್ರಹಣದ ಕಾರಣ ಗರ್ಭಗುಡಿ ಬಂದ್ ಮಾಡಿದ್ದರಿಂದ ಪ್ರವಾಸಿಗರು ಹಾಗು ಭಕ್ತರು ಚನ್ನಕೇಶವಸ್ವಾಮಿ ದರ್ಶನ ಸಿಗದೇ ದ್ವಾರ ಬಾಗಿಲಿನಲ್ಲೆ ದೇವರಿಗೆ ಕೈಮುಗಿದು ವಾಪಾಸ್ಸಾದರು.

## ನಾಳೆ ಆರೋಗ್ಯ ಉಚಿತ ತಪಾಸಣಾ ಶಿಬಿರ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಹಿರೀಸಾವೆಯಲ್ಲಿ ಆರಕ್ಷಕ ವೃತ್ತದ ವತಿಯಿಂದ ಭಾರತೀಯ ರೆಡ್ ಕ್ರಾಸ್, ನಾರಾಯಣ ಆಸ್ಪತ್ರೆ, ವಿಸೆಕ್ಯೂರ್ ಕ್ವಿಕ್ ಇನ್ಶೂರೆನ್ಸ್ ಸಂಸ್ಥೆಗಳ ಸಹಯೋಗದಲ್ಲಿ ಸೆ.9ರ ಮಂಗಳವಾರ ಆರೋಗ್ಯ ತಪಾಸಣೆ, ರಕ್ತದಾನ, ಕಾನೂನು ಅರಿವು ಶಿಬಿರ ಏರ್ಪಡಿಸಲಾಗಿದೆ ಎಂದು ಆರಕ್ಷಕ ವೃತ್ತ ನಿರೀಕ್ಷಕ ಎಸ್. ಸಂತೋಷ್ ತಿಳಿಸಿದರು.


ಶಿಬಿರದಲ್ಲಿ ಸಾರ್ವಜನಿಕರ ರಕ್ತದೊತ್ತಡ, ಮಧುಮೇಹ ಸೇರಿ ಹಲವು ರೋಗಗಳನ್ನು ತಜ್ಞ ವೈದ್ಯರು ತಪಾಸಣೆ ನಡೆಸಿ, ಸಲಹೆ ಮತ್ತು ಔಷಧಿ ನೀಡುವರು. ರಕ್ತದಾನಕ್ಕೆ ನೋಂದಾಯಿಸಿದ 25 ಜನರ ವಾಹನಗಳಿಗೆ ವಿಸೆಕ್ಯೂರ್ ಕ್ವಿಕ್ ಇನ್ಶೂರೆನ್ಸ್ ಸಂಸ್ಥೆಯಿಂದ ಉಚಿತವಾಗಿ ವಾಹನ ವಿಮೆ ಮಾಡಿಸಿದ್ದಾರೆ. ರಸ್ತೆ ಸುರಕ್ಷತೆ, ಮಾದಕ ದ್ರವ್ಯ ನಿಷೇಧ, ಪೋಕ್ಸೋ ಕಾಯ್ದೆ ಬಗ್ಗೆ ಹಿರಿಯ ಪೊಲೀಸ್ ಅಧಿಕಾರಿಗಳು ಜನರಿಗೆ ಮಾಹಿತಿ ನೀಡುವ, ಕಾನೂನು ಅರಿವು ಕಾರ್ಯಕ್ರಮ ಏರ್ಪಡಿಸಲಾಗಿದೆ.

# ಸಮ ಸಮಾಜಕ್ಕೆ ಜೀವನ ಮುಡಿಪಿಟ್ಟ ನಾರಾಯಣ ಗುರು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಸಮಾಜದಲ್ಲಿ ಮೇಲು-ಕೀಳು ಬಿಟ್ಟು ಒಂದೇ ಜಾತಿ, ಮತ, ದೈವ ಎಂಬ ಸಂದೇಶ ಸಾರಿದ ಬ್ರಹ್ಮಶ್ರೀ ನಾರಾಯಣಗುರು ಸಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ ಶ್ರೇಷ್ಠ ಸಂತರೆಂದು ಶಾಸಕ ಸಿ.ಎನ್. ಬಾಲಕೃಷ್ಣ ಅವರು ತಿಳಿಸಿದರು.

ಪಟ್ಟಣದ ಮಿನಿ ವಿಧಾನಸೌಧದ ಆವರಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಬ್ರಹ್ಮಶ್ರೀ ನಾರಾಯಣ ಗುರುಗಳ 171ನೇ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಶೋಷಿತರು, ಹಿಂದುಳಿದವರ ಶ್ರೇಯೋಭಿವೃದ್ಧಿಗೆ ನಾರಾಯಣ ಗುರುಗಳ ಹೋರಾಟ ಅವಿಸ್ಮರಣೀಯ. ಶಿಕ್ಷಣದೊಂದಿಗೆ ಸಾಮಾಜಿಕ ಕ್ರಾಂತಿ ಮಾಡುವ ಮೂಲಕ ಶೋಷಿತ, ಹಿಂದುಳಿದ ಸಮಾಜಕ್ಕೆ ಸಮಾನತೆ ಒದಗಿಸಿಕೊಟ್ಟಿದ್ದಾರೆ. ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಪರಿವರ್ತನೆಯ ಹರಿಕಾರರಾಗಿ ಅವರು ಸಮಾಜದ ಒಳಿತಿಗಾಗಿ ದುಡಿದಿದ್ದಾರೆ ಎಂದರು.



ಕೇರಳದ ಬಸವಣ್ಣ ಎಂದೇ ಪ್ರಖ್ಯಾತಿ ಪಡೆದ ನಾರಾಯಣಗುರು ತಮ್ಮ ಜೀವನವನ್ನು ಸಮಾಜಕ್ಕಾಗಿ ಮುಡಿಪಾಗಿಟ್ಟಿದ್ದರು. ತಮ್ಮ ಕಾಲದಲ್ಲಿ ಕೆಳಜಾತಿಯವರ ಮೇಲೆ ಆಗುತ್ತಿದ್ದ ದೌರ್ಜನ್ಯ, ಹೆಣ್ಣು ಮಕ್ಕಳ ಮೇಲೆ ವಿಧಿಸಿದ್ದ ನಿಬಂಧನೆಗಳನ್ನು ಅಹಿಂಸಾತ್ಮಕವಾಗಿ ವಿರೋಧಿಸಿ, ಮಾನವ ಕುಲ ಒಂದೇ ಎಂಬ ಸಿದ್ಧಾಂತವನ್ನು ಸಾರಿದ್ದರು. ಸಮಾಜದಲ್ಲಿರುವ ಅಸಮಾನತೆ ನಿವಾರಿಸಲು ಅವರು ನಡೆಸಿದ ಹೋರಾಟ ವರ್ಣಿಸಲು ಅಸಾಧ್ಯ. ಸಮಾಜದಲ್ಲಿ ಇತ್ತೀಚಿನ ದಿನಗಳಲ್ಲಿ ಜಾತಿ ಜಾತಿಗಳ ನಡುವೆ ಸಾಮರಸ್ಯ ಕೊರತೆಯಾಗುತ್ತಿರುವ ಹಿನ್ನಲೆಯಲ್ಲಿ ಸಾಮಾಜಿಕ ನ್ಯಾಯದ ಸಮಸಮಾಜ ನಿರ್ಮಾಣಕ್ಕೆ ಮುನ್ನುಡಿ ಬರೆದ ಶ್ರೀ ನಾರಾಯಣ ಗುರುಗಳು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲರೂ ಸಾಗೋಣ. ಅವರು ಕಂಡ ಕನಸುಗಳನ್ನು ನಾವೆಲ್ಲರೂ ಕಾರ್ಯರೂಪಕ್ಕೆ ತರಲು ಶ್ರಮಿಸೋಣ ಎಂದರು.

ಸಮಾಜಗಳ ಕಾರ್ಯ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ವಿವಿಧ ಇಲಾಖೆಗಳ ಅಧೀನದಲ್ಲಿ ನಿವೇಶನವನ್ನು ಹಸ್ತಾಂತರಗೊಳಿಸಿದ್ದು ಕಾನೂನು ತೊಡಕಿನಿಂದ ನಿವೇಶನ ಹಂಚಿಕೆ ರದ್ದಾಗಿದೆ. ಮುಂದಿನ ದಿನಗಳಲ್ಲಿ ಎಲ್ಲಾ ಸಮಾಜದವರೊಂದಿಗೆ ಜಿಲ್ಲಾಧಿಕಾರಿ ಅವರನ್ನು ಭೇಟಿ ಮಾಡಿ ನಿವೇಶನ ನೀಡುವ ಉದ್ದೇಶವನ್ನು ಅವರಿಗೆ ಮನವರಿಕೆ ಮಾಡಿ ಎಲ್ಲಾ ಸಮಾಜಗಳ ಕಾರ್ಯ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಕ್ರಮ ಕೈಗೊಳ್ಳಲಾಗುವುದೆಂದು ಭರವಸೆ ನೀಡಿದರು.

ತಹಶೀಲ್ದಾರ್ ಜಿ.ಎಸ್.ಶಂಕರಪ್ಪ ಅವರು ಮಾತನಾಡಿ, ಮೂಢ ನಂಬಿಕೆಗಳೇ ತುಂಬಿ ಹೋಗಿದ್ದ ಕಾಲಘಟ್ಟದಲ್ಲಿ ನಾರಾಯಣ ಗುರು ಸಮಾಜಕ್ಕೆ ಮಾನವೀಯತೆಯ ಸಂದೇಶದೊಂದಿಗೆ ಜಗತ್ತಿಗೆ ಬೆಳಕು ನೀಡಿದ ಮಹಾನ್ ಚೇತನ. ಸಂಘರ್ಷಕ್ಕೆ ಎಡೆಮಾಡಿಕೊಡದೆ ಸುಧಾರಣೆಯ ಹಾದಿಯ ಮೂಲಕ ಸಮಾಜದಲ್ಲಿ ಬದಲಾವಣೆ ತಂದ ಮಹಾನ್ ದಾರ್ಶನಿಕರು. ದೂರದೃಷ್ಟಿಯ ಕಲ್ಪನೆಯೊಂದಿಗೆ ಶಿಕ್ಷಣದ ಮಹತ್ವ ಸಾರಿದವರು. ಸಮಾಜದಲ್ಲಿ ಬೇರೂರಿದ್ದ ಮೌಢ್ಯಗಳನ್ನು ಹೋಗಲಾಡಿಸಲು ಜೀವನವನ್ನೇ ಮುಡಿಪಾಗಿಟ್ಟರು. ದೀನ ದಲಿತರ ಕಷ್ಟ ಕಾರ್ಪಣ್ಯ ಮಹಿಳೆಯರ ಸಂಕಷ್ಟಕ್ಕೆ ಗುರುಗಳ ಜನ್ಮ ಮತ್ತು ಜೀವನದ ಮೂಲಕ ಉತ್ತರ ಸಿಕ್ಕಿದೆ. ಅವರು ಸಮಾಜಕ್ಕೆ ನೀಡಿದ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಸಮಾಜದಲ್ಲಿ ಸಮಾನತೆಯ ತತ್ವವನ್ನು ಸಾಕಾರಗೊಳಿಸೋಣ ಎಂದರು.

ಜಯಂತೋತ್ಸವದಲ್ಲಿ ಟಿಪಿಸಿಎಂಎಸ್‌ನ ಅಧ್ಯಕ್ಷ ಎಂ.ಆರ್.ಅನಿಲ್ ಕುಮಾರ್, ಪುರಸಭಾ ಸದಸ್ಯರಾದ ರಾಮಕೃಷ್ಣ, ಸಿ.ಎಸ್.ಪ್ರಕಾಶ್, ಇತರರಿದ್ದರು.

# ಧರ್ಮಸ್ಥಳ ವಿರುದ್ಧ ಷಡ್ಯಂತ್ರಕ್ಕಾಗಿ ಯಾರೂ ದುಡ್ಡು ಕೊಟ್ಟಿಲ್ಲ

## ಯೂಟ್ಯೂಬರ್ ಅಭಿ ತಂದೆ-ತಾಯಿ ಹೇಳಿಕೆ | ಎಸ್‌ಐಟಿ ವಿಚಾರಣೆಗೆ ಆರೋಪಿ ಹಾಜರು

• ಪ್ರಜೋದಯ ವರದಿ

**ಹಾಸನ:** ಧರ್ಮಸ್ಥಳದಲ್ಲಿ ನೂರಾರು ಶವಗಳ ಹೂತು ಹಾಕಿದ್ದಾರೆಂಬ ಸುದ್ದಿಗಳು ಹರಿದಾಡಿದ್ದರಿಂದ ನನ್ನ ಮಗ ಅಲ್ಲಿಗೆ ಹೋಗಿ ವಿಡಿಯೋ ಮಾಡಿದ್ದ ಹೊರತು ಅವನಿಗೆ ಪೂರ್ಣ ಮಾಹಿತಿ ಇರಲಿಲ್ಲ. ಈ ಕೆಲಸಕ್ಕಾಗಿ ಅವನಿಗೆ ದುಡ್ಡು ಬಂದಿದೆ ಎಂಬುದೆಲ್ಲಾ ಸುಳ್ಳು ಎಂದು ಯೂಟ್ಯೂಬರ್ ಅಭಿಷೇಕ್ ಅವರ ತಂದೆ ಮುದ್ದು ಗೋಪಾಲ್ ಅವರು ಸ್ಪಷ್ಟಪಡಿಸಿದರು.

ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ಮಾಡಿದ ಆರೋಪದಡಿ ಯುನೈಟೆಡ್



ಮಿಡಿಯಾ ಯೂಟ್ಯೂಬ್ ಚಾನೆಲ್‌ನ ಅಭಿಷೇಕ್‌ನನ್ನು ಎಸ್‌ಐಟಿ ಅಧಿಕಾರಿಗಳು ವಿಚಾರಣೆಗಾಗಿ ಕರೆದೊಯ್ದಿದ್ದು, ಈ ಬಗ್ಗೆ ಭಾನುವಾರ ಸುದ್ದಿಗಾರರೊಂದಿಗೆ ಆತನ ಪೋಷಕರು ಮಾತನಾಡಿದರು.

ಸೌಜನ್ಯಪರ ಹೋರಾಟಗಾರರಿಂದ ನನ್ನ ಮಗನಿಗೆ ಲಕ್ಷಾಂತರ ರೂಪಾಯಿ ಹಣ ಬಂದಿದೆ ಎಂಬುದೆಲ್ಲ ಸುಳ್ಳು. ನಾನು ಮೊಬೈಲ್, ಕ್ಯಾಮರಾ ಕೊಡಿಸಿದ್ದೇನೆ. ಹಣದಾಸೆಗಾಗಿ ಅಭಿ ತಪ್ಪು ಕೆಲಸ ಮಾಡುವುದಿಲ್ಲ. ಎಸ್‌ಐಟಿ ತನಿಖೆ ಪಾರದರ್ಶಕವಾಗಿ ನಡೆಯುವ ವಿಶ್ವಾಸವಿದ್ದು, ನನ್ನ ಮಗ ದೋಷ ಮುಕ್ತನಾಗುತ್ತಾನೆ.

-ಹೇಮಲತಾ, ಯೂಟ್ಯೂಬರ್ ಅಭಿ ತಾಯಿ

ಧರ್ಮಸ್ಥಳದಲ್ಲಿ ಏನೇನಾಗಿದೆ ಎಂಬುದರ ಕುರಿತು ನನ್ನ ಮಗ ಅಧ್ಯಯನ ಮಾಡಿರಲಿಲ್ಲ. ಯಾರೋ ಏನೋ ಹೇಳಿದರು ಅಂತ ಅಲ್ಲಿಗೆ ಹೋಗಿದ್ದ. ಅಭಿ ಮೆಕ್ಯಾನಿಕಲ್ ಇಂಜಿನೀಯರಿಂಗ್ ಓದಿ ಊರಲ್ಲೇ ಇದ್ದ. ಕೆ.ಆರ್.ಪೇಟೆಯ ಚಂದನ್‌ಗೌಡ ಕಳೆದ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಿದ್ದಾಗ ವೀಡಿಯೋ ಎಡಿಟಿಂಗ್ ಮಾಡುವುದಕ್ಕಾಗಿ ಕರೆಸಿಕೊಂಡಿದ್ದ.

» ನಾಲ್ಕನೇ ಪುಟದಲ್ಲಿ

## ಇಂದು ರೈತ ಸಂಘದಿಂದ ಪ್ರತಿಭಟನೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಹಿರೀಸಾವೆ ಹೋಬಳಿಯ ರೈತರಿಗೆ ರಸಗೊಬ್ಬರವನ್ನು ಸಮರ್ಪಕವಾಗಿ ವಿತರಣೆ ಮಾಡದ ಹಿನ್ನಲೆಯಲ್ಲಿ ಸೆ.8ರ ಸೋಮವಾರ ರೈತ ಸಂಪರ್ಕ ಕೇಂದ್ರದ ಎದುರು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ಹೆಚ್.ಕೆ.ರಘು ತಿಳಿಸಿದ್ದಾರೆ.

ಹಿರೀಸಾವೆ ಹೋಬಳಿಯಲ್ಲಿ ರಸಗೊಬ್ಬರ,ಯೂರಿಯಾ ಕೊರತೆ ಇದೆ. ಈ ಬಗ್ಗೆ ಕೃಷಿ ಇಲಾಖೆಯ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದರೂ ಸಮಸ್ಯೆ ಬಗೆಹರಿದಿಲ್ಲ. ರೈತ ಸಂಪರ್ಕ ಕೇಂದ್ರದ ಎದುರು ಧರಣಿ ನಡೆಸುವುದಾಗಿ ಅವರು ಹೇಳಿದ್ದಾರೆ.

## ಚುನಾವಣೆಗೆ ಸಂಘಟನಾ ಸಾಮರ್ಥ್ಯ ಮುಖ್ಯವಲ್ಲ: ಡಿ.ಕೆ.ಶಿ.

• ಪ್ರಜೋದಯ ವರದಿ

**ಬೆಂಗಳೂರು :** ಚುನಾವಣೆಗೆ ಹಣ ಮುಖ್ಯವಲ್ಲ, ಸಂಘಟನಾ ಸಾಮರ್ಥ್ಯ ಮುಖ್ಯ. ಹೀಗಾಗಿ, ಬೂತ್ ಮಟ್ಟದಲ್ಲಿ ಪಕ್ಷವನ್ನು ಸಂಘಟಿಸಿ ಎಂದು ಕಾಂಗ್ರೆಸ್ ಕಾರ್ಯಕರ್ತರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸಲಹೆ ನೀಡಿದರು.

ಕೆಪಿಸಿಸಿ ಕಚೇರಿಯಲ್ಲಿ ಭಾನುವಾರ ನಡೆದ ಯುವ ಕಾಂಗ್ರೆಸ್ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಮಾತನಾಡಿದ ಅವರು, ನೀವು ನಾಯಕರುಗಳ ಹಿಂದೆ ಓಡಾಡಿದರೆ ಪ್ರಯೋಜನವಿಲ್ಲ. ಬೂತ್ ಮಟ್ಟದಲ್ಲಿ ಸಾಮರ್ಥ್ಯ ಪ್ರದರ್ಶಿಸಿದರೆ ಮಾತ್ರ ರಾಜಕೀಯದಲ್ಲಿ ಎತ್ತರಕ್ಕೆ ಬೆಳೆಯಲು ಸಾಧ್ಯ ಎಂದರು.

ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆಯವರ ವಿರುದ್ಧ ಹೋರಾಟ ಮಾಡಿದ್ದಕ್ಕೆ ನನಗೆ ಸಾತನೂರು ಕ್ಷೇತ್ರದಿಂದ ಟಿಕೆಟ್ ಸಿಕ್ಕಿತ್ತು. ಏಕೆಂದರೆ, ನನ್ನ ಸಂಘಟನಾ ಸಾಮರ್ಥ್ಯ ಅಷ್ಟು ಚೆನ್ನಾಗಿತ್ತು. ಯುವ ನಾಯಕನಾಗಿ ನಾನು ಪಕ್ಷವನ್ನು ತಳಮಟ್ಟದಿಂದ ಕಟ್ಟಿದ್ದೆ ಎಂದು ಹೇಳಿದರು.

ಪಂಚಾಯತ್‌ರಾಜ್ ಕಾಯ್ದೆಯ 73, 74ನೇ ತಿದ್ದುಪಡಿ ಕಾರಣಕ್ಕೆ ಸ್ಥಳೀಯ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದು ನೂರಾರು ನಾಯಕರು ಹುಟ್ಟಿಕೊಂಡರು. ನಾನು, ರಾಮಲಿಂಗಾರೆಡ್ಡಿ, ಬಿಜೆಪಿಯ ಎಸ್. ಸುರೇಶ್ ಕುಮಾರ್, ವಿ.ಸೋಮಣ್ಣ ಹೀಗೆ ಅನೇಕರು ಸ್ಥಳೀಯ ಸಂಸ್ಥೆಗಳ ಮೂಲಕವೇ ಬೆಳೆದವರು. ಬೆಂಗಳೂರಿನಲ್ಲಿ ನೂತನ ಐದು ಪಾಲಿಕೆಗಳನ್ನು ರಚನೆ ಮಾಡಿರುವ ಕಾರಣಕ್ಕೆ 500ಕ್ಕೂ ಹೆಚ್ಚು ಹೊಸ ನಾಯಕರಿಗೆ ಅವಕಾಶ ಸಿಗಲಿದೆ ಎಂದರು.

ಪಕ್ಷದ ಅನೇಕ ಘಟಕಗಳ ಜವಾಬ್ದಾರಿ ತೆಗೆದುಕೊಂಡವರಿಗೆ ಅತ್ಯುತ್ತಮ ಸ್ಥಾನಗಳನ್ನು ನೀಡಲಾಗಿದೆ. ಗ್ಯಾರಂಟಿ ಸಮಿತಿಯಲ್ಲಿಯೂ ಸ್ಥಾನ ನೀಡಲಾಗಿದೆ ಎಂದ ಅವರು, ಯುವ ಕಾಂಗ್ರೆಸ್ ಸೇರಿ ಪಕ್ಷದ ಎಲ್ಲ ಘಟಕಗಳು ಕೆಲಸ ಮಾಡಿದರೆ 2028ರಲ್ಲಿ ಮತ್ತೆ ಪಕ್ಷ ಅಧಿಕಾರಕ್ಕೆ ಬರುವುದರಲ್ಲಿ ಅನುಮಾನವಿಲ್ಲಎಂದರು.

## ಕಣ್ಣಿಗೆ ಖಾರದ ಪುಡಿ ಎರಚಿ ಹಲ್ಲೆ

• ಪ್ರಜೋದಯ ವರದಿ

**ಹಾಸನ:** ಹಳೆಯ ದ್ವೇಷದಿಂದ ವ್ಯಕ್ತಿಯೊಬ್ಬರ ಕಣ್ಣಿಗೆ ಖಾರದ ಪುಡಿ ಎರಚಿ ಕಬ್ಬಿಣದ ಮೊಳೆ ಗೂಟದಿಂದ ಕುತ್ತಿಗೆಗೆ ಚುಚ್ಚಿ ಕೊಲೆಗೆ ಯತ್ನಿಸಿರುವ ಘಟನೆ ತಾಲ್ಲೂಕಿನ ಕಬ್ಬತ್ತಿ ಗ್ರಾಮದಲ್ಲಿ ಸೆ. 5ರಂದು ನಡೆದಿದೆ.

ಗ್ರಾಮದ ಉಮೇಶ ಎಂಬುವವರ ಮೇಲೆ ರವಿಕುಮಾರ ಹಾಗು ಜಯಣ್ಣ ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ. ಲಾರಿ ಚಾಲಕರಾಗಿರುವ ಉಮೇಶ ಕೆಲಸಕ್ಕೆ ತೆರಳಿದಾಗ ಸೆ. 4 ರಂದು ಮನೆಗೆ ಬಂದ ರವಿಕುಮಾರ ಉಮೇಶ ಅವರ ತಾಯಿ ಜೊತೆ ಜಗಳವಾಡಿ ಬಂದಿದ್ದನು. ಮಾರನೇ ದಿನ ಮನೆಗೆ ಬಂದ ಉಮೇಶ ಅವರು ವಿಚಾರ ಗೊತ್ತಾಗಿ ಪ್ರಶ್ನಿಸಿದಕ್ಕೆ ಏಕಾಏಕಿ ಕಣ್ಣಿಗೆ ಖಾರದ ಪುಡಿ ಎರಚಿ ಕಬ್ಬಿಣದ ಮೊಳೆ ಗೂಟದಿಂದ ಕುತ್ತಿಗೆಯ ಹಿಂಭಾಗಕ್ಕೆ ಚುಚ್ಚಿದ್ದಾರೆ. ಜಯಣ್ಣ ಎಂಬಾತ ಮರದ ಕುರ್ಚಿಯಿಂದ ತಲೆಗೆ ಹೊಡೆದು ಗಂಭೀರ ಗಾಯಗೊಳಿಸಿದ್ದಾನೆ. ಗಾಯಾಳು ಉಮೇಶ ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗೊರೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಎರಡು ವರ್ಷದಿಂದ ನಡೆಯದ ನೇಮಕಾತಿ | ಸ್ಪರ್ಧಾತ್ಮಕ ಪರೀಕ್ಷೆ ತಯಾರಿಗೆ ನಿರಾಸಕ್ತಿ

# ಸ್ಪರ್ಧಾಕಾಂಕ್ಷಿಗಳಿಲ್ಲದೆ ಬಿಕೋ ಎನ್ನುತ್ತಿದೆ ಕೇಂದ್ರ ಗ್ರಂಥಾಲಯ

• ಪ್ರಜೋದಯ ವರದಿ

ಹಾಸನ: ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳಿಂದ ಸದಾ ಗಿಜಿಗುಡುತ್ತಿದ್ದ ನಗರದ ಕೇಂದ್ರ ಗ್ರಂಥಾಲಯ ಈಗ ಓದುವ ವಿದ್ಯಾರ್ಥಿಗಳಿಲ್ಲದೆ ಬಿಕೋ ಎನ್ನುತ್ತಿದೆ.

ಕಳೆದ ಎರಡು ವರ್ಷದಿಂದ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಹುದ್ದೆಗಳಿಗೆ ಅಧಿಸೂಚನೆ ಹೊರಡಿಸದ ಕಾರಣ ಸರ್ಕಾರಿ ಉದ್ಯೋಗಾಕಾಂಕ್ಷಿಗಳು ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುವುದನ್ನೇ ಬಿಟ್ಟಿದ್ದಾರೆ. ಒಳಮೀಸಲಾತಿ ಹಿನ್ನಲೆಯಲ್ಲಿ ರಾಜ್ಯ ಸರ್ಕಾರಿ ಹುದ್ದೆಗಳ ಅಧಿಸೂಚನೆಗೆ ಸರ್ಕಾರ ತಡೆಯೊಡ್ಡಿದ್ದರಿಂದ ನೇಮಕಾತಿ ನಡೆಸಿಲ್ಲ. ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ 2.76 ಲಕ್ಷ ಹುದ್ದೆಗಳು ಖಾಲಿ ಇವೆ. ಆದರೆ, ಒಳಮೀಸಲಾತಿ, ಆರ್ಥಿಕ ಇಲಾಖೆಯಿಂದ ಅನುಮೋದನೆ ದೊರೆಯದಿರುವುದರಿಂದ ನೇಮಕ ಪ್ರಕ್ರಿಯೆಗೆ ವಿಘ್ನ ಎದುರಾಗಿದೆ.

ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳಿಂದ ಈ ಹಿಂದೆ ಗ್ರಂಥಾಲಯ ತುಂಬಿರುತಿತ್ತು. ಕೆಲವೊಮ್ಮೆ ಜಾಗ ಇಲ್ಲದ್ದಕ್ಕೆ ನೆಲದ ಮೇಲೆ ಕೂತು ಓದುತ್ತಿದ್ದರು. ಈಗ ದಿನದಿಂದ ದಿನಕ್ಕೆ ಗ್ರಂಥಾಲಯಕ್ಕೆ ಬರುವವರ ಸಂಖ್ಯೆ ಕಡಿಮೆಯಾಗಿದೆ ಎಂದು ಗ್ರಂಥಾಲಯ ಸಿಬ್ಬಂದಿಯೊಬ್ಬರು ಹೇಳಿದರು.



ನಗರದಲ್ಲಿ ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳ ಅಧ್ಯಯನಕ್ಕಾಗಿ ವಿಶೇಷ ಗ್ರಂಥಾಲಯ ಅಥವಾ ಖಾಸಗಿ ತರಬೇತಿ ಸಂಸ್ಥೆಗಳಾಗಲಿ ಇಲ್ಲ. ಬಹುತೇಕರು ಧಾರವಾಡ ಅಥವಾ ಬೆಂಗಳೂರಿಗೆ ತೆರಳಿ ತರಬೇತಿ ಪಡೆಯುತ್ತಾರೆ. ಅಲ್ಲಿ ಕೋಚಿಂಗ್ ಮುಗಿಸಿಕೊಂಡು ಬಂದು ಹಾಸನದಲ್ಲಿ ಓದು ಮುಂದುವರೆಸುತ್ತಾರೆ. ನಗರದಲ್ಲಿ ಬಾಡಿಗೆ ರೂಮು ಮಾಡಿಕೊಂಡು ಓದುವವರ ಸಂಖ್ಯೆಯೂ ಈ ಹಿಂದಿನ ವರ್ಷಗಳಲ್ಲಿ ಹೆಚ್ಚಾಗಿ ಇತ್ತು. ಕೆಲವರು ಪಾರ್ಟ್‌ಟೈಮ್ ಕೆಲಸ ಮಾಡಿಕೊಂಡು ಸರ್ಕಾರಿ ನೌಕರಿಗಾಗಿ ಹಗಲಿರುಳು ಶ್ರಮಿಸುತ್ತಿದ್ದರು. ಆದರೆ, ಹಾಸನದ ಕೇಂದ್ರ ಗ್ರಂಥಾಲಯ ಈಗ ಓದುಗರಿಲ್ಲದೆ ಬಣಗುಡುತ್ತಿದೆ. ಮುಖ್ಯ ಗ್ರಂಥಾಲಯದಲ್ಲಿ ದಿನ ಪತ್ರಿಕೆ ಓದಲು ವಿಶೇಷ ವ್ಯವಸ್ಥೆ ಮಾಡಿದ್ದರೆ ಪರಾಮರ್ಶನ ಗ್ರಂಥ ವಿಭಾಗದಲ್ಲಿ ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳಿಗೆ ಆಸನದ ವ್ಯವಸ್ಥೆ ಮಾಡಲಾಗಿದೆ. ಕೆಲವು ಸಲ ಅಲ್ಲಿ ಕೂರಲು ಆಸನಗಳು ಸಿಗದೆ ಹೊರಗೆ ಆಗಿರುವ ಕಟ್ಟೆ ಮತ್ತು ಮರಗಳ ಕೆಳಗೆ ಕುಳಿತು ವ್ಯಾಸಂಗ ಮಾಡುತ್ತಿದ್ದರು. ಈಗ ಆ ಪ್ರದೇಶವೆಲ್ಲಾ ಗಿಡಗಂಟಿಗಳಿಂದ ತುಂಬಿದೆ.

**ವಯೋಮಿತಿ ಮೀರುವ ಆತಂಕ**

ಸರ್ಕಾರಿ ನೌಕರಿ ಗಿಟ್ಟಿಸಿಕೊಳ್ಳಬೇಕೆಂಬ ಮಹದಾಸೆಯಿಂದ ವರ್ಷಾನುಗಟ್ಟಲೇ ಪರೀಕ್ಷೆಗೆ ತಯಾರಿ ಮಾಡಿಕೊಂಡಿರುವ ಅಭ್ಯರ್ಥಿಗಳು ಸರ್ಕಾರದ ನಿರ್ಲಕ್ಷ್ಯ ಧೋರಣೆಗೆ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪೊಲೀಸ್ ನೌಕರಿಗಾಗಿ 3 ವರ್ಷಗಳಿಂದ ಓದುತ್ತಿದ್ದೇನೆ. ಹುದ್ದೆಗೆ ಆಯ್ಕೆಯಾಗಲು ವಯೋಮಿತಿ ಮೀರುವ ಚಿಂತೆ ಕಾಡುತ್ತಿದೆ. ಸರ್ಕಾರ ವಿಳಂಬ ಧೋರಣೆ ಕೈಬಿಟ್ಟು ಶೀಘ್ರ ನೇಮಕಾತಿ ಪ್ರಕ್ರಿಯೆ ಆರಂಭಿಸಬೇಕೆಂದು ಚನ್ನರಾಯಪಟ್ಟಣ ತಾಲ್ಲೂಕು ನುಗ್ಗೇಹಳ್ಳಿ ಗ್ರಾಮದ ಮಂಜುನಾಥ್ ಅವರು ಆಗ್ರಹಿಸಿದರು.

**ದಿನಪತ್ರಿಕೆ ಓದಲಷ್ಟೇ ಗ್ರಂಥಾಲಯ**

ವ್ಯಾಸಂಗದ ಉದ್ದೇಶದಿಂದ ಹಳ್ಳಿ ಬಿಟ್ಟು ನಗರ ಸೇರಿದ್ದ ಯುವಕರೆಲ್ಲ ಊರು ಸೇರಿದ್ದಾರೆ. ಇನ್ನು ಕೇಂದ್ರ ಗ್ರಂಥಾಲಯ ಕೇವಲ ದಿನಪತ್ರಿಕೆಗಳನ್ನು ಓದುವುದಕ್ಕಷ್ಟೇ ಸೀಮಿತ ಎನ್ನುವಂತಾಗಿದೆ.

**ವಯೋಮಿತಿ ಸಡಿಲಿಕೆ ಸಂತೋಷ**

ಗ್ರೂಪ್ ಬಿ ಮತ್ತು ಸಿ ವೃಂದದ ಹುದ್ದೆಗಳ ನೇರ ನೇಮಕಾತಿಗಳಲ್ಲಿ ಅಭ್ಯರ್ಥಿಗಳಿಗೆ ನಿಗದಿಪಡಿಸಿರುವ ಗರಿಷ್ಠ ವಯೋಮಿತಿಯಲ್ಲಿ ಎರಡು ವರ್ಷ ಸಡಿಲಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದ್ದು, ಸ್ಪರ್ಧಾಕಾಂಕ್ಷಿಗಳಿಗೆ ತುಸು ನೆಮ್ಮದಿ ತರಿಸಿದೆ.

ಸೆ. 6 ರಿಂದ 2027ರ ಡಿ. 31ರ ವರೆಗೆ ಅರ್ಜಿ ಆಹ್ವಾನಿಸಿ ಹೊರಡಿಸುವ ಎಲ್ಲಾ ನೇರ ನೇಮಕಾತಿ ಅಧಿಸೂಚನೆಗಳಿಗೆ ಈ ಆದೇಶ ಅನ್ವಯ ಆಗಲಿದೆ. ಇಂತಹ ಅವಕಾಶ ಒಂದು ಬಾರಿಗೆ ಸೀಮಿತವಾಗಿರಲಿದೆ. ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವ ಎಲ್ಲಾ ಪ್ರವರ್ಗಗಳ ಅಭ್ಯರ್ಥಿ ಗಳಿಗೆ ಸಂಬಂಧಿಸಿದಂತೆ ಆಯಾ ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಿರುವ ಗರಿಷ್ಠ ವಯೋಮಿತಿಯಲ್ಲಿ ಅವಕಾಶ ಸಿಗಲಿದೆ.

ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಜಾರಿಗೆ ಬರುವವರೆಗೆ, ಮೀಸಲಾತಿ ಅನ್ವಯವಾಗುವ ವೃಂದಗಳ ಹುದ್ದೆಗಳಿಗೆ ನೇಮಕಾತಿ ಅಥವಾ ಬ್ಯಾಕ್ ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಹೊಸತಾಗಿ ಯಾವುದೇ ಅಧಿಸೂಚನೆ ಹೊರಡಿಸದಂತೆ 2024ರ ಅ.28 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಆದೇಶ ಹೊರಡಿಸಿತ್ತು.

## ಅಪರಿಚಿತ ವ್ಯಕ್ತಿ ಶವ ಪತ್ತೆ

• ಪ್ರಜೋದಯ ವರದಿ

**ಹಾಸನ:** ಅಪರಿಚಿತ ವ್ಯಕ್ತಿಯ ಶವ ನಗರದ ಗಂಧದಕೋಠಿ ಆವರಣದ ಬಾಲಕಿಯರ ವಿಭಜಿತ ಸರ್ಕಾರಿ ಪದವಿ ಪೂರ್ವ ಕಾಲೇಜು ಮುಂಭಾಗ ಭಾನುವಾರ ಬೆಳಿಗ್ಗೆ ಪತ್ತೆಯಾಗಿದೆ.



ಕಾಲೇಜು ಗೇಟ್‌ಗೆ ಹೊಂದಿಕೊಂಡಿರುವ ವಿದ್ಯುತ್ ಪರಿ ವರ್ತಕದ ಕೆಳಗೆ ಅಂದಾಜು 50 ರಿಂದ 55 ವಯೋಮಾನದ ವ್ಯಕ್ತಿಯ ಶವ ಕಂಡಿದೆ. ಬೆಳಿಗ್ಗೆ ಕಸ ಗುಡಿಸಲು ಬಂದಿದ್ದ ಪೌರ ಕಾರ್ಮಿಕರು ಮೃತದೇಹ ನೋಡಿ ನಗರ ಠಾಣೆ ಪೊಲೀಸರಿಗೆ ಮಾಹಿತಿ ನೀಡಿದರು.

ವ್ಯಕ್ತಿಯು ತುಂಬು ತೋಳಿನ ಬಿಳಿ ಬಣ್ಣದ ಶರ್ಟ್, ಬಿಳಿ ಪಂಚೆ ಧರಿಸಿ ತಲೆಗೆ ಟವೆಲ್ ಕಟ್ಟಿದ್ದಾರೆ. ಹಣೆಗೆ ಕುಂಕುಮ ಧರಿಸಿದ್ದು, ಬಲಗೈಯಲ್ಲಿ ರಾಘವೇಂದ್ರ, ಶಶಿಕಲಾ ಹಾಗು ಎಡಗೈಯಲ್ಲಿ ಸುನಂದ ಎಂದು ಹಚ್ಚೆ ಹಾಕಿಸಿಕೊಂಡಿದ್ದಾರೆ. ವ್ಯಕ್ತಿಯ ವಾರಸುದಾರರಿದ್ದರೆ ನಗರ ಪೊಲೀಸ್ ಠಾಣೆ ದೂರವಾಣಿ ಸಂ. 08172-268334, 9480804745 ಸಂಪರ್ಕಿಸಲು ತಿಳಿಸಿದೆ.

CMYK CMYK CMYK CMYK

# ಒತ್ತಡ ನಿವಾರಣೆಗೆ ಬೇಕು ಆಸರೆ-ನಂಬಿಕೆ

ಇತ್ತೀಚೆಗೆ ಸ್ನೇಹಿತರೊಬ್ಬರು ಆತಂಕದಲ್ಲಿದ್ದಂತೆ ಸದಾ ಸಪ್ಪಗಿರುತ್ತಿದ್ದರು. ಒಂದು ನಮೂನೆಯ ಒತ್ತಡದಲ್ಲಿದ್ದಂತೆ. ಮೊದಲಿದ್ದ ಮಾತು, ನಗು, ತಮಾಷೆಗಳೆಲ್ಲವೂ ಮರೆಯಾಗಿದ್ದವು. ಒಮ್ಮೆ ಸಿಕ್ಕಿದ್ದಾಗ, ಯಾಕೆ ಏನಾದರೂ ಸಮಸ್ಯೆನಾ? ನೀವು ಮೊದಲಿನಂಗಿಲ್ಲ ಎಂದು ಕೇಳಿದೆ. ಮೊದಮೊದಲಿಗೆ ಹೇಳಿಕೊಳ್ಳಲು ಹಿಂಜರಿದವರು ಒತ್ತಾಯಿಸಿದ ಮೇಲೆ ಅವರಿಗಿದ್ದ ಒಂದಷ್ಟು ಸಮಸ್ಯೆಗಳನ್ನು ಹೇಳಿಕೊಂಡರು. ವ್ಯಾಪಾರ ನಷ್ಟಕ್ಕೆ ಬಿದ್ದು ಆದಾಯಗಳು ಕಮ್ಮಿಯಾಗಿದ್ದವು, ಆದರೆ ಪೂರೈಸಲೇಬೇಕಿದ್ದ ಜವಾಬ್ದಾರಿಗಳು ಬೆನ್ನು ಬಿಡುತ್ತಿರಲಿಲ್ಲ. ಆರ್ಥಿಕ ಒತ್ತಡಗಳು ಅವರನ್ನು ಹೈರಾಣಾಗಿಸಿದ್ದವು. ಜೊತೆಗೆ, ಅವರ ಸಮಸ್ಯೆಗಳನ್ನು ಕೇಳಲು ಕಿವಿಗಳಿರಲಿಲ್ಲ, ಮನೆಯಲ್ಲಿನ ಜನರಿಗೆ ಇವರ ಸಮಸ್ಯೆಗಳು ಅರ್ಥವಾಗುವಷ್ಟು ಪ್ರಬುದ್ಧತೆಯಿರಲಿಲ್ಲ, ಅದಲ್ಲದೇ ಅವರಿಗೂ ಸಹ ಮಾತ್ರ ಆದ್ಯತೆಯಾಗಿದ್ದರಿಂದ ಇವನು ಎಲ್ಲಿಂದಾದರೂ ತರಲಿ ದುಡೀತಿಲ್ವಾ... ಎಂಬ ಮನಸ್ಥಿತಿ. ಅವರೇನೂ ಕೆಟ್ಟವರಲ್ಲ ಆದರೆ ಬಹುತೇಕ ಮಧ್ಯಮವರ್ಗದ ಆರ್ಥಿಕ ಅವ ಲಂಬಿತರ ಮನಸ್ಥಿತಿಯದು. ಇತ್ತೀಚೆಗೆ ಇವರಿಗೆ ಒತ್ತಡವನ್ನು ಭರಿಸಲು ಕಷ್ಟವಾಗಲಾರಂಭಿಸಿತ್ತು.

ಅವರ ವ್ಯಥೆಯನ್ನು ಕೇಳಿದ ನಂತರ ಇವರಿಗೆ ಯಾವುದೇ ಸಲಹೆ ನೀಡಿದರೂ ಕೂಡಾ, ನನ್ನನ್ನು ಪುಗಸಟ್ಟೆ ಅಡ್ವೈಸ್ ಕೊಟ್ಟು ಹೋದ ಮುಠಾಳ ನನ್ಮಗ ಎಂದು ಖಂಡಿತಾ ಬೈದುಕೊಳ್ಳುತ್ತಾರೆನಿಸಿ ಸುಮ್ಮನಾದೆ, ಆದರೆ ಮತ್ತೊಬ್ಬ ಸ್ನೇಹಿತರು ಮಾತ್ರ, ಯಾವುದಾದರೂ ಸೈಕಿಯಾಟ್ರಿಸ್ಟ್ ಬಳಿ ಸಲಹೆ ತೆಗೆದುಕೊಳ್ಳಿ ಅಂದರು. ಅವರತ್ತ ಹೋದಮೇಲೆ, ಸೈಕಿಯಾಟ್ರಿಸ್ಟ್ ಏನು ಆರ್ಥಿಕ ಸಮಸ್ಯೆಯನ್ನು ಬಗೆಹರಿಸುತ್ತಾರಾ? ಇವನಿಗೊಂತರಾ... ಎಂದು ಬೈದರು.

ಇದೊಂದು ಉದಾಹರಣೆಯಷ್ಟೇ..

ನನಗನಿಸುವ ಮಟ್ಟಿಗೆ, ಇಂದು ಮಾನಸಿಕ ಒತ್ತಡಗಳನ್ನೆದುರಿಸುತ್ತಿರುವ ಬಹುಪಾಲು ಮಂದಿಯ ಒತ್ತಡದ ಮೂಲ ಆರ್ಥಿಕ ಸಮಸ್ಯೆಯೇ ಆಗಿದೆ. ನಾನು ಈ ಸಮಸ್ಯೆ, ಒತ್ತಡ ಗಳನ್ನೆಲ್ಲಾ ಎದುರಿಸಿದವನೇ ಆಗಿರುವುದರಿಂದ ಯಾರದ್ದಾದರೂ ಈ ಸಮಸ್ಯೆಗೆ ಸಿಲುಕಿದವರ ಪರಿಸ್ಥಿತಿ ಬಹುಬೇಗ ಅರ್ಥವಾಗಿಬಿಡುತ್ತದೆ.

ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ಮುಂದೇನು ಎಂಬ ದಾರಿಯು ಅಸ್ಪಷ್ಟವಾಗಿಬಿಡುತ್ತದಲ್ಲಾ... ಅದು ನೀಡುವ ಯಮಯಾತನೆ ಅನುಭವಿಸಿದವರಿಗೆ ಮಾತ್ರ ಗೊತ್ತು. ಇಂಥಹ ಸಂದರ್ಭಗಳಲ್ಲಿ ಸುತ್ತಲಿನವರು ತಲೆಗೊಂದು ಕೊಡುವ ಸಲಹೆಗಳು ನಮ್ಮನ್ನು ಇನ್ನಷ್ಟು ಕಿರಿಕಿರಿಗೆ ದೂಡುತ್ತವೆ. ಒತ್ತಡಕ್ಕೆ ಸಿಲುಕಿದವರಿಗೆ ಬೇಕಿರುವುದು ಅವರ ಸಮಸ್ಯೆಗಳಿಂದ ಹೊರಬರಲು ನೆರವೇ ಹೊರತು ನಂದೂ ಒಂದಿರಲಿ ಎಂಬ ಸಲಹೆಗಳೋ ಅಥವಾ ಅನುಕಂಪವೋ ಅಲ್ಲ. ಇತ್ತೀಚೆಗೆ ನನ್ನ ಅಕ್ಕ ಒಬ್ಬಳು, ನನ್ನ ಪರಿಚಯದ ಹುಡುಗಿಯೊಬ್ಬಳು ತುಂಬಾ ಸಮಸ್ಯೆಯಲ್ಲಿದ್ದಾಳೆ ಇದರಿಂದಾಗಿ ಆಗಾಗ ಡಿಪ್ರೆಷನ್ನಿಗೆ ಹೋಗುತ್ತಾಳೆ ನೀನೊಂದ್ಸಾರಿ ಮಾತಾಡ್ತೀಯಾ? ಎಂದು ಕೇಳಿದ್ದಳು. ಸರಿ ಎಂದು ಆ ಹುಡುಗಿಯೊಂದಿಗೆ ಮಾತನಾಡಿದಾಗ ತಕ್ಷಣ ನನಗೆ ತಿಳಿದಿದ್ದೆಂದರೆ ಚಿಕ್ಕ ವಯಸ್ಸಿಗೆ ಗಂಡನನ್ನು ಕಳೆದುಕೊಂಡಿದ್ದ ಅವಳಿಗೆ ಸರಿಯಾದ ಉದ್ಯೋಗವಿರಲಿಲ್ಲ, ಚಿಕ್ಕ ಮಗುವಿಗೆ ಆರೋಗ್ಯ ಸಮಸ್ಯೆಯಿತ್ತು. ಮಗುವಿಗೆ ಚಿಕಿತ್ಸೆ ಕೊಡಿಸಲು ಹಣ, ದೈನಂದಿನ ಬದುಕು ಸಾಗಿ ಸಲು ಉದ್ಯೋಗ ಇವೆಲ್ಲಾ ಸಮಸ್ಯೆಗಳು ಕಿತ್ತು ತಿನ್ನುತ್ತಿದ್ದವು. ಈ ಸಮಸ್ಯೆಗಳಿಂದೆಲ್ಲಾ ಹೊರ ಬರುವ ದಾರಿ ತಿಳಿಯದೇ ಕಂಗಾಲಾಗಿ ಅದು ವಿಪರೀತಕ್ಕೆ ಹೋಗಿತ್ತು. ನಾನು ತಕ್ಷಣಕ್ಕೆ ಅವಳನ್ನು ಕೇಳಿದ್ದು, ನಿಂಗೊಂದು ಉದ್ಯೋಗ ಮತ್ತು ಮಗುವಿಗೆ ಚಿಕಿತ್ಸೆಗೆ ಸಹಾಯ ಸಿಕ್ಕರೆ ಸಾಕಲ್ಲವಾ ಎಂದು. ಅವಳಿಗೆ ಬೇಕಿದ್ದುದೂ ಅದೇ ಆಗಿತ್ತು. ಹೌದು ಸರ್ ಅಂದಳು. ನಾವು ಮಾಡ್ತೀವಿ ಚಿಂತೆ ಬಿಡು ಎಂದೆ. ಅಕ್ಕ ಅವಳ ಅಂಗಡಿಯಲ್ಲಿ ಕೆಲಸ ಕೊಟ್ಟಳು, ಉಡುಪಿಯ ಹಿರಿಯ ವೈದ್ಯ ರಾದ ಪಿವಿ ಭಂಡಾರಿಯವರು ತಾಯಿ ಮಗು ಇಬ್ಬರಿಗೂ ಉಚಿತವಾಗಿ ಚಿಕಿತ್ಸೆ ಕೊಟ್ಟರು. ಆಕೆ ನಿಧಾನಕ್ಕೆ ಸುಧಾರಿಸುತ್ತಾ ಬಂದಳು.

ಅವಳಿಗೆ ಬೇಕಿದ್ದುದು ಅನುಕಂಪ ಅಥವಾ ಪುಗಸಟ್ಟೆ ಸಲಹೆಯಲ್ಲ, ನೆರವು.



ಬಹುತೇಕರಿಗೆ ಬೇಕಿರುವುದು ಕೂಡಾ ಕಷ್ಟಕಾಲದಲ್ಲಿ ನೆರವೇ ಹೊರತು ಅನುಕಂಪವಲ್ಲ. ಜೊತೆಗೆ ಈ ಆಧುನಿಕ ಯುಗ ಯಾವ ಮಟ್ಟಿಗೆ ನಿರ್ದಯಿ ಅಂದರೆ, ಒಟ್ಟು ಕುಟುಂಬಗಳು ಒಡೆದು ಹೋಳಾಗಿವೆ. ಮಾತನಾಡಲು ಜನರೇ ಇಲ್ಲ. ಎಂಬ ಪರಿಕಲ್ಪನೆ ಇವತ್ತು ಮನುಷ್ಯನ ಶಕ್ತಿ ಸಾಮರ್ಥ್ಯಗಳನ್ನು ಕೆಡವಿಕೊಂಡು ಬಡಿದು ಹಾಕುತ್ತಿದೆ. ಇಂದು ಗಂಡ-ಹೆಂಡತಿ ಒಟ್ಟಿಗಿರುವುದೇ ಜಾಯಿಂಟ್ ಫ್ಯಾಮಿಲಿ ಎನ್ನುವ ಹಂತಕ್ಕೆ ಕುಟುಂಬ ವ್ಯವಸ್ಥೆ ಬಂದು ನಿಂತಿರುವ ಹೊತ್ತಿನಲ್ಲಿ ಸಮಸ್ಯೆಗಳನ್ನು ಕೇಳಲು ಕಿವಿಗಳೇ ಇಲ್ಲ, ಕಷ್ಟ ಅಂದರೆ ಚಾಚಲು ಕೈಗಳಿಲ್ಲ. ಜೊತೆಗೆ ತರಹೇವಾರಿ ಒತ್ತಡಗಳು ಬೇರೆ. ಸ್ನೇಹಿತರೊಂದಿಗೆ, ಪರಿಚಯದವರೊಂದಿಗೆ ನಮ್ಮ ವೈಯಕ್ತಿಕ ವಿಚಾರಗಳನ್ನು ಹಂಚಿಕೊಂಡ ಮರುಕ್ಷಣವೇ ಅದು ವೈರಸ್ ನಂತೆ ಕಿವಿಯಿಂದ ಕಿವಿಗೆ ಹರಡಿ ಕಷ್ಟ ಹೇಳಿಕೊಂಡವನು ಹಗ್ಗ ಹುಡುಕುವ ಮಟ್ಟಿಗೆ ಅಪನಂಬಿಕೆಯು ನಮ್ಮನ್ನಾಳುತ್ತಿದೆ. ಇದು ಪ್ರಸ್ತುತ ವರ್ತಮಾನದ ನೈತಿಕ ಪತನ. ಇಂದು ಮನುಷ್ಯನೊಬ್ಬನ ಸೋಲು ಅನ್ನಿಸಿಕೊಳ್ಳುವ ಮಟ್ಟಿಗೆ ನಮ್ಮವರೇ ಅಸೂಕ್ಷ್ಮರಾಗಿದ್ದಾರೆ.

ಈ ಸಂದರ್ಭದಲ್ಲಿ ಹಳೆಯದೊಂದು ಘಟನೆ ನೆನಪಾಗುತ್ತದೆ. ಐದಾರು ವರ್ಷಗಳ ಹಿಂದೆ ರಾತ್ರಿ ಸುಮಾರು ಹತ್ತು ಗಂಟೆಯ ಹೊತ್ತಿಗೆ ರಾಜಾಜಿನಗರದ ರಸ್ತೆಯೊಂದರಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ, ಬಾಗಿಲು ಮುಚ್ಚಿದ ದೇವಸ್ಥಾನದೆದುರು ಮಹಿಳೆಯೊಬ್ಬರು ಮಂಡಿಯಲ್ಲಿ ಕೂತು ದೇವರೊಂದಿಗೆ ಸಂಭಾಷಿಸುತ್ತಿದ್ದರು. ಅವರೇನು ಹೇಳುತ್ತಿದ್ದರೆಂದು ಕೇಳದೇ ಹೋದರೂ ಅವರು ದೇವರೊಂದಿಗೆ ತಮ್ಮ ಕಷ್ಟವನ್ನು ಹೇಳಿಕೊಳ್ಳುತ್ತಿದ್ದಾರೆಂಬುದು ಮಾತ್ರ ಅರ್ಥವಾಯಿತು. ಅವರಿಗೆ ತನ್ನ ಸಮಸ್ಯೆಗಳನ್ನು ಕೇಳಲು ದೇವರನ್ನು ಹೊರತುಪಡಿಸಿ ಯಾರೂ ಯೋಗ್ಯರಲ್ಲ ಎನಿಸಿರಬಹುದಾದ ಸಂಗತಿಯು ಮನುಷ್ಯ ಸಮಾಜದ ಅಧಃಪತನ.

ಈ ಒತ್ತಡದ ಬದುಕಿನಲ್ಲಿ ಇಂದು ಅತ್ಯಗತ್ಯವಾಗಿರುವುದು ಪರಸ್ಪರ ಆಸರೆ ಮತ್ತು ನಂಬಿಕೆ. ಹೀಗಿರುವಾಗ ನಾವು ನಮ್ಮ ಕೈಲಾದಷ್ಟು ಕಿವಿಗಳನ್ನು ತೆರೆದಿಡಬೇಕಾದ ಜರೂರಿದೆ. ಆದರೆ, ದುರಂತವೆಂದರೆ ನಾವು ಮತ್ತೊಬ್ಬರ ಕಷ್ಟ, ಸಮಸ್ಯೆ, ಅಸಹಾಯಕತೆಗಳನ್ನು ಊರಿಗೆಲ್ಲಾ ಹಂಚಿ ವಿಕೃತ ಆನಂದ ಪಡುವ ಹೊಲಸು ಬಾಯಾಗಿರುವುದು.

**- ಕಾರ್ತಿಕ್‌ಅದಿತ್ಯ, ಬೆಳಗೋಡು**

# ಮೆಟ್ರೋ ಎಂಬ ಕ್ಯಾನ್ವಾಸ್ ಪಯಣದಲಿ



ಹಾಸನದಲ್ಲಿ ಎಲ್ಲಿ ಮೆಟ್ರೋ ಅಂತ ಯೋಚಿಸ್ತಿದಿರಾ? ಖಂಡಿತಾ ಇಲ್ಲ. ಇದು ಬೆಂಗಳೂರು ನಮ್ಮ ಮೆಟ್ರೋನೇ. ಈ ಸಲ ದ್ವಿತೀಯ ಪಿಯುಸಿ ಮೌಲ್ಯ ಮಾಪನಕ್ಕೆ ತೆರಳಿದಾಗ ಮೌಲ್ಯ ಮಾಪನ ಕೇಂದ್ರಕ್ಕೂ, ಉಳಿದುಕೊಂಡಿದ್ದ ಜಾಗಕ್ಕೂ ಮೆಟ್ರೋ ಪ್ರಯಾಣ ಸುಲಭ ಎಂದು ಇದನ್ನು ಆಯ್ಕೆ ಮಾಡಿಕೊಂಡೆ. ಮೊದಲೇ ಫೋನ್‌ನಲ್ಲಿ ನಮ್ಮ ಮೆಟ್ರೋ ಆ್ಯಪ್ ಡೌನ್ಲೋಡ್ ಮಾಡಿಕೊಂಡಿದ್ದರಿಂದ ಟಿಕೆಟ್ ಕೌಂಟರ್‌ಗೆ ಹೋಗಿ ಬಿಲ್ಲೆಗಳನ್ನು (ಟೋಕನ್) ತೆಗೆದುಕೊಳ್ಳುವ ಅವಶ್ಯಕತೆ ಇರಲಿಲ್ಲ. ಮುಂಚೆ ಕೆಲವೊಮ್ಮೆ ಮೆಟ್ರೋದಲ್ಲಿ ಓಡಾಡಿದ ಅನುಭವವಿದ್ದರೂ ಪ್ರತಿದಿನದ ಪಯಣದ ಹೊಸತನಕ್ಕೆ ಹುರುಪಿನಿಂದಲೇ ಹೊರಟ್ಟಿದಾಯ್ತು. ಕಣ್ಣುಗಳು ಕುತೂಹಲದಿಂದ ವೀಕ್ಷಿಸುತ್ತಾ ಬಂದ ಮೆಟ್ರೋದೊಳಗೆ ತೂರಿಕೊಂಡಿದ್ದಾಯ್ತು. ಗಾಜಿನ ಬಾಗಿಲಿಗೆ ತಲೆಯಾನಿಸಿ ಫೋನಿನಲ್ಲಿ ಮಾತನಾಡುವ ಯುವಕ ಯುವತಿಯರು, ಇಯರ್ ಫೋನ್ ಬ್ಲೂಟೂಥ್ ಕಿವಿಗೆ ಸಿಕ್ಕಿಸಿ ಧ್ಯಾನಸ್ಥ ಸ್ಥಿತಿಯಲ್ಲಿರುವ ಎಷ್ಟೋ ಮಂದಿ, ಸಣ್ಣಮಕ್ಕಳ ಒಂದಿಷ್ಟು ಮಾತುಗಳು, ಸಿಕ್ಕಿರೋ ಸೀಟಿನಲ್ಲಿ ಆರಾಮಾಗಿ ಕುಳಿತು ಫೋನ್ನಲ್ಲಿ ಸ್ಕ್ರೋಲ್ ಮಾಡುತ್ತಾ ಕುಳಿತವರು... ಬಹುತೇಕ ಫೋನಿನಲ್ಲಿ ಮುಳುಗಿದವರೆ ಬಹಳ ಮಂದಿ. ಒಂದು ಕೈಯಲ್ಲಿ ರಾಡ್ ಹಿಡಿದು ಗಾಜಿನಿಂದ ಆ ಕಡೆ ಈ ಕಡೆ ಕಾಣುವ ದೃಶ್ಯಗಳನ್ನು ಕಣ್ತುಂಬಿಕೊಳ್ಳುವ ಧಾವಂತ ನನಗೆ! ಹಾವಿನಂತೆ ಹಾದುಹೋಗಿರುವ ಫ್ಲೈಓವರ್ ಗಳು, ಬಿಲ್ಡಿಂಗ್‌ಗಳ ನೆತ್ತಿಗಳು, ಹೆಚ್ಚಾಗಿ ಮುದನೀಡಿದ್ದು ನಾನು ಹೋದಾಗ ಅಲ್ಲಲ್ಲಿ ಅರಳಿನಿಂತ ಗುಲ್ ಮೊಹರ್ ಮರಗಳ ತುದಿಗಳು. ಚೈತ್ರಕಾಲವಾಗಿದ್ದರಿಂದ ಹೂವರಳಿಸಿ ನಿಂತ ಮರದ ನೆತ್ತಿಯ ಭಾಗ ಬಿಲ್ಡಿಂಗ್‌ಗಳು ಮರೆಯಾದ ತಕ್ಷಣ ಹಳದಿ, ಕೆಂಪು, ಕಿತ್ತಲೆ, ನೀಲಿ ಬಣ್ಣದ ಹೂವುಗಳಿಂದ ಅಲಂಕೃತವಾದ ಮರದ ನೆತ್ತಿಗಳು ಎಷ್ಟು ನೋಡಿದರೂ ನೋಡಬೇಕೆನಿಸುವಂತೆ, ಪೇಟಿಂಗ್ ಕ್ಯಾನ್ವಾಸ್ ಬರೆದಿಟ್ಟಂತೆ ನೋಡುವಾಗ ಮುದನೀಡುವಂತಹ ದೃಶ್ಯಗಳು!

ಮೆಟ್ರೋ ಒಳಗಿನ ಛಾವಣಿಯ ಮೇಲೆ ಕನ್ನಡದ ಸಾಹಿತಿಗಳನ್ನು, ಕರ್ನಾಟಕದ ಪ್ರವಾಸಿ ಸ್ಥಳಗಳನ್ನು, ಸ್ವಾತಂತ್ರ್ಯ ಹೋರಾಟಗಾರರನ್ನು ಪರಿಚಯಿಸುವ ಪುಟ್ಟ ಪರದೆ. ಅಲ್ಲೇ ಸ್ವಲ್ಪ ಅಂತರದಲ್ಲಿ ಜಾಹೀರಾತುಗಳನ್ನು ತೂಗುಹಾಕಿದಾರಲ್ಲ, ಫನ್ ವರ್ಲ್ಡ್, ಕೆಎಫ್ಸಿ ಇವೆಲ್ಲ ಮೆಟ್ರೋ ಸ್ಟೇಶನ್ನಿಂದ ಸ್ವಲ್ಪ ದೂರವಷ್ಟೇ. ಅದೋ ಎಲ್ಲಾ ಬೋಗಿಗಳಿಗಿಂತ ಮುಂದೆ ಮಹಿಳಾ ಬೋಗಿ! ಟ್ರೈನ್ ಹೊರಟಾಗ ಟಕ್ ಎಂದು ಟೇಪು ಬಿದ್ದು ಮಹಿಳಾ ಬೋಗಿಯನ್ನು ಇತರ ಬೋಗಿಗಳಿಂದ ಪ್ರತ್ಯೇಕಿಸುತ್ತಲ್ಲ. ಮೆಟ್ರೋ ಪ್ರಯಾಣದಲ್ಲಿ ಏನು ಮಾಡಬಾರದು? ಹೇಗೆ ನಡೆದುಕೊಳ್ಳಬೇಕು ಎನ್ನುವ ಸೂಚನೆಗಳು ಪುಟ್ಟ ಪರದೆಯಲ್ಲಿ ಬರುತ್ತಲೇ ಇರುತ್ತದೆ. ಟ್ರೈನ್ ನಿಲ್ಲುವಾಗಲೂ, ಹೊರಟಾಗಲೂ ನಿಲ್ಲುವ ನಿಲ್ದಾಣ, ಮುಂದಿನ ನಿಲ್ದಾಣವನ್ನು ತಿಳಿಸುವ ಸುಮಧುರ ಧ್ವನಿಗಳು. ಯಾವ ಕಡೆ ಇಳಿಯಬೇಕು ಎನ್ನುವ ಅದೇ ಮಧುರ ಧ್ವನಿ f r l b b b r rf d b ಬಾಗಿಲುಗಳು ಎಡಕ್ಕೆ/ಬಲಕ್ಕೆ ತೆರೆಯುತ್ತವೆ. ಇಳಿಯು ವಾಗ ಅಂತರವಿರಲಿ ಮೆಟ್ರೋ ನಿಲ್ದಾಣ ದಲ್ಲಿ ಲೈನ್ ದಾಟಿ ಮುಂದೆ ಹೋಗದಂತೆ ತಡೆಯುವ ಸಿಬ್ಬಂದಿ. ಇಳಿದ ನಂತರ ಟೋಕನ್ ಗಳನ್ನು ಅದಕ್ಕಾಗಿ ನಿಗದಿಪಡಿಸಿದ ಗುಂಡಿಯಲ್ಲಿ ಬೀಳಿಸಿದ ನಂತರವೇ ಹೊರಗಿನ ಬಾಗಿಲುಗಳು ತೆರೆಯುತ್ತವೆ ಅಥವಾ ನಿಮ್ಮ ಟಿಕೆಟ್‌ನ್ನು ಸ್ಕ್ಯಾನ್ ಮಾಡಿ ಹೊರ ಬರಬಹುದು.

**ಮೆಟ್ರೋ ಹುಟ್ಟಿನ ಬಗ್ಗೆ**

ನಮ್ಮ ಮೆಟ್ರೋ ಅಂದರೆ ಬೆಂಗಳೂರು ಮೆಟ್ರೋ ನಗರದ ಸಾರಿಗೆ ವ್ಯವಸ್ಥೆಯನ್ನು ಸುಧಾರಿ ಸಲು ಮತ್ತು ಜನರಿಗೆ ಸುಲಭವಾಗಿ ಪ್ರಯಾಣಿಸಲು ಒಂದು ಮಹತ್ವಾಕಾಂಕ್ಷೆಯ ಯೋಜನೆ. 2003ರಲ್ಲಿ ದೆಹಲಿ ಮೆಟ್ರೋ ರೈಲು ಕಾರ್ಪೋರೇಶನ್ ಲಿಮಿಟೆಡ್ ನಮ್ಮ ಮೆಟ್ರೋದ ಮೊದಲ ಹಂತದ ಯೋಜನೆಯನ್ನು ಸಿದ್ದಪಡಿಸಿತು. 2006ರಲ್ಲಿ ಅಂದಿನ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರು ಈ ಯೋಜನೆಗೆ ಅಡಿಪಾಯ ಹಾಕಿದರು. 2007ರ ಏಪ್ರಿಲ್ 15ರಂದು ಬೈಯ್ಯಪ್ಪನಹಳ್ಳಿ ಮತ್ತು ಮಹಾತ್ಮ ಗಾಂಧಿ ರಸ್ತೆ ನಡುವಿನ ನೇರಳೆ ಮಾರ್ಗದ ಮೊದಲ ಭಾಗವನ್ನು ಪ್ರಾರಂಭಿಸಲಾಯಿತು. ಆಕ್ಟೋಬರ್ 20, 2011ರಂದು ಸಾರ್ವಜನಿಕರಿಗೆ ಮುಕ್ತ ಗೊಳಿಸಲಾಯಿತು. ಯೋಜನೆಯ ಮೊದಲ ಹಂತದ ಮಾರ್ಗ 42.3 ಕಿ.ಮೀ ಇದ್ದು 8.8 ಕಿಮೀ ಭೂಗತ ಮಾರ್ಗವಾಗಿದ್ದು ಉಳಿದಿದ್ದು ನೆಲದ ಮೇಲಿನ ಭಾಗವಾಗಿದೆ. ಪ್ರಸ್ತುತ ಹಸಿರು, ನೇರಳೆ ಮತ್ತೆ ಹಳದಿ ಮಾರ್ಗಗಳು ಕಾರ್ಯನಿರ್ವಹಿಸುತ್ತಿದ್ದು ಸದ್ಯದಲ್ಲೇ ಗುಲಾಬಿ, ನೀಲಿ ಮಾರ್ಗಗಳು ಕಾರ್ಯನಿರ್ವಹಿಸುತ್ತವೆಂದು ಸರ್ಕಾರ ತಿಳಿಸಿದೆ.

ಬೆಂಗಳೂರು ಮೆಟ್ರೋ ರೈಲು ಕಾರ್ಪೋರೇಶನ್ ಲಿಮಿಟೆಡ್ ನಮ್ಮ ಮೆಟ್ರೋ ಜಾಲವನ್ನು ನಿರ್ಮಿಸುವ, ನಿರ್ವಹಿಸುವ ಮತ್ತು ವಿಸ್ತರಿಸುವ ಸಂಸ್ಥೆಯಾಗಿದೆ. ಸೇವೆಗಳು ಪ್ರತಿದಿನ 5.00 ಮತ್ತು 24.00 ನಡುವೆ ಕಾರ್ಯ ನಿರ್ವಹಿಸುತ್ತವೆ. ರೈಲುಗಳ ನಡುವೆ 5 ರಿಂದ 15 ನಿಮಿಷಗಳ ಅಂತರವಿರುತ್ತದೆ. ಆರಂಭದಲ್ಲಿ ಮೂರು ಬೋಗಿಗಳೊಂದಿಗೆ ಶುರುವಾದ ಮೆಟ್ರೋ ಪ್ರಯಾಣ ಈಗ ಆರು ಬೋಗಿಗಳಾಗಿವೆ. ಮೂರನೇ ರೈಲಿನ ಮೂಲಕ 750 ನೇರ ಪ್ರವಾಹದಿಂದ ವಿದ್ಯುತ್ ಸರಬರಾಜು ಮಾಡಲಾಗುತ್ತದೆ. ಸದ್ಯ ಲಕ್ಷಾಂತರ ಜನರು ಪ್ರತಿನಿತ್ಯ ಓಡಾಟಕ್ಕೆ ನಮ್ಮ ಮೆಟ್ರೋ ಬಳಸುತ್ತಿದ್ದಾರೆ. ಮಾರ್ಗಗಳ ವಿಸ್ತರಣೆಯಿಂದ ಇದು ಮುಂದಿನ ದಿನಗಳಲ್ಲಿ 12 ರಿಂದ 14 ಲಕ್ಷಕ್ಕೆ ಏರಿಕೆಯಾಗುವ ಸಾಧ್ಯತೆ ಇದೆ.

ಮೆಟ್ರೋ ಪ್ರಯಾಣ ಶೀಘ್ರ ಪ್ರಯಾಣಕ್ಕೆ ಒಂದು ಅದ್ಭುತ ವ್ಯವಸ್ಥೆಯಾಗಿದೆ. ಮಾತನಾಡದೆ ಫೋನಿನಲ್ಲಿ ಮುಳುಗಿಯೊ ಅಥವಾ ಗಾಜಿನ ಕಿಟಕಿಯಾಚೆ ಕಾಣುವ ದೃಶ್ಯಗಳನ್ನು ಧ್ಯಾನಸ್ಥ ಸ್ಥಿತಿಯಲ್ಲಿ ಕಣ್ತುಂಬಿಕೊಳ್ಳುವುದೊ ಎಂಬುದು ನಮಗೆ ಬಿಟ್ಟಿದ್ದು...

**-ನಾಗಮಣಿ ಬಿ.ಜೆ.** ಉಪನ್ಯಾಸಕರು, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಹಾಸನ.

# ಕದ




ಕೆಲಸದ ನಿಮಿತ್ತ ಊರು ಬಿಡುವವನಿದ್ದ ಮಗ. ಅಪ್ಪ ಪಕ್ಕದಲ್ಲಿ ಕುಳಿತು ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ರು. ಇಷ್ಟು ವರ್ಷದವರೆಗೆ ಪ್ರತಿದಿನವೂ ತಪ್ಪುಗಳನ್ನೇ ಹೇಳಿ ಹೇಳಿ ತಂದೆಯ ಬಗ್ಗೆ ಒಂಥರಾ ಜಿಗುಪ್ಸೆ ಮಗನಿಗೂ ಉಂಟಾಗಿತ್ತು. ಆದರೆ ಇವತ್ತು ಕೆಲಸದ ನಿಮಿತ್ತ ದೂರ ದೂರಿಗೆ ಹೊರಡಲೇಬೇಕು ತಂದೆಯ ಮಾತನ್ನು ಕೇಳಿಸಿಕೊಳ್ಳಲೇಬೇಕು. ಆದರೆ ಇವತ್ತು ಅಪ್ಪ ತಪ್ಪಿನ ಬಗ್ಗೆ ಮಾತನಾಡಲೇ ಇಲ್ಲ. ಅಪ್ಪ ಹೇಳಿದ್ದು ಇಷ್ಟೆ ನೋಡು ಮಗ ನಿನ್ನ ಎದೆಯೊಳಗೆ ಮನಸಿನೊಳಗೆ ಕದವನ್ನು ಹಾಕಿಕೊಂಡು ಜೋಪಾನವಾಗಿ ಬದುಕಲಾರಂಭಿಸು. ಎದೆಯೊಳಗೆ ಮನಸೊಳಗೆ ಯಾರು ಬರುವವರಿದ್ದರೂ ಕದವನ್ನ ತಟ್ಟಿ ಒಳ ಬರಬೇಕು. ಹಾಗೆ ಒಳಬರುವವರನ್ನ ನಿನಗೆ ಅಗತ್ಯವಿದ್ದರೆ ಮಾತ್ರ ಒಳ ಬಿಡು. ಇಲ್ಲವಾದರೆ ಅಲ್ಲೇ ಮಾತಾಡಿ ವಾಪಾಸು ಕಳುಹಿಸು. ನಿನ್ನ ಎದೆಯೊಳಗೆ ಮನಸೊಳಗೆ ನಿನ್ನ ಬದುಕಿಗೆ ಪೂರಕವಾಗುವವರು ಮಾತ್ರ ಮನೆ ಮಾಡಬೇಕು. ಅಂತಹವರಿಗೆ ಮಾತ್ರ ಅಲ್ಲಿ ಸ್ಥಳಾವಕಾಶ ಇರಬೇಕು. ಅದರ ಹೊರತಾಗಿ ನಿನ್ನನ್ನ ಕೆಳಗಿಳಿಸುವವರು ನೋವುಂಟು ಮಾಡುವವರು ನಿನಗೆ ಅಗತ್ಯವಿಲ್ಲದವರನ್ನ ಕದದಿಂದ ಹೊರಗಿಟ್ಟು ಗಟ್ಟಿಯಾದ ಕದವನ್ನು ಹಾಕಿಕೊಂಡು ಬಿಡು. ಇಷ್ಟಿದ್ದರೆ ಸಾಕು ನಿನಗೆ ಯಾವತ್ತೂ ಸೋಲಾ ಗುವುದಿಲ್ಲ. ಎಲ್ಲವೂ ಒಳಿತಾಗುತ್ತದೆ .ಇಷ್ಟು ದಿನದವರೆಗೂ ತಂದೆಯಾಡುತ್ತಿದ್ದ ಮಾತು ಬೇರೆ ಈಗ ಬೇರೆ ಆದರೂ ಪರವಾಗಿಲ್ಲ ತಂದೆ ಬದುಕಿಗೆ ದಾರಿ ಹೇಳುವವರು ಅಂತಂದುಕೊಂಡು ಎಲ್ಲವನ್ನು ಕೇಳಿ ಪರಿಚಯವಿಲ್ಲದ ಊರಿಗೆ ಹೊರಟುಬಿಟ್ಟ ಅಪ್ಪನ ಮಾತು ಕಿವಿಯೊಳಗೆ ಗಟ್ಟಿಯಾಗಿತ್ತು.

**-ಧೀರಜ್ ಬೆಳ್ಳಾರೆ**

# ಪುಷ್ಪಗಿರಿ ಬೆಟ್ಟಕ್ಕೆ ಚಾರಣದ ಸಾಹಸ ಕಥನ

ಹಾಸನ ತಾಲ್ಲೂಕು ಮುಟ್ಟನಹಳ್ಳಿಯ ಲೇಖಕರಾದ ತ್ಯಾಗರಾಜ್ ಮತ್ತು ತಂಡ ಪ್ರಸಿದ್ಧ ಚಾರಣಕ್ಕೆ ಹೆಸರುವಾಸಿಯಾದ ಪುಷ್ಪಗಿರಿ ಬೆಟ್ಟಕ್ಕೆ ಚಾರಣಕ್ಕೆ ಹೋಗಿ ಬಂದ ಸಾಹಸ ಕಥನವನ್ನು ಸ್ವಾರಸ್ಯಕರವಾಗಿ ಮಿನಿ ಕಾದಂಬರಿ ಸ್ವರೂಪದಲ್ಲಿ ಓದಿಸಿಕೊಂಡು ಹೋಗುವಂತೆ ಬಣ್ಣಿಸಿದ್ದಾರೆ. ಕುಮಾರ ಪರ್ವತ ಚಾರಣ ಮಾಮೂಲಿ ವ್ಯಕ್ತಿಗಳಿಗೆ ಅದೊಂದು ದಿಗಿಲು. ಹವ್ಯಾಸಿ ಚಾರಣಿ ಗರಿಗೆ ಅದೊಂದು ವಿಶಿಷ್ಟ ಅನುಭವ. ಇಂತಹ ಚಾರಣದ ಅನುಭವವನ್ನು ಬರಹಕ್ಕಿಳಿಸುವುದು ಒಂದು ಕೌಶಲ್ಯವೇ ಸರಿ. ಆಧುನಿಕತೆ, ಲೋಕಜ್ಞಾನ ಬೆಳೆದಂತೆ ಬರಹವೂ ಕೂಡ ಹೊಸತು ಕಂಡುಕೊಳ್ಳುತ್ತಿದೆ. ನಾವು ಕುವೆಂಪು ಅವರ ಮಲೆಗಳಲ್ಲಿ ಮದುಮಗಳು, ಕಾನೂರು ಹೆಗ್ಗಡತಿ ಕಾದಂಬರಿಗಳನ್ನು ಓದುವಾಗ ಮಲೆನಾಡಿನ ಜನಜೀವನ ಹಾಗೂ ಪರಿಸರದಲ್ಲಿ ತೆರೆದು ಕೊಂಡಂತೆ ಇಲ್ಲಿಯ ಚಾರಣದಲ್ಲಿ ದಟ್ಟ ಅರಣ್ಯ ಪರಿಸರ ಪಿಕ್ನಿಕ್ ಕಥನದಲ್ಲಿ ರೂಪುಗೊಳ್ಳುತ್ತದೆ.

ಇತ್ತೀಚಿನ ದಿನಗಳಲ್ಲಿ ಪ್ರಸಿದ್ಧ ದೇವಸ್ಥಾನ, ಪ್ರವಾಸಿ ತಾಣ, ಪುಣ್ಯ ಕ್ಷೇತ್ರಗಳಿಗೆ ಭೇಟಿ ನೀಡುವ ಅನುಭವವನ್ನು ಪತ್ರಿಕೆಗಳಲ್ಲಿ ಆಗಿಂದಾಗ್ಗೆ ಬರೆಯುತ್ತಿರುತ್ತೇನೆ. ಆಗುಂಬೆ ಎಸ್. ನಟರಾಜ್ ರಂತಹ ಲೇಖಕರು ಬರೆದ ತಮ್ಮ ಪ್ರವಾಸಾನುಭವವನ್ನು ಜೊತೆಗೆ ಆ ಸ್ಥಳದ ಐತಿ ಹಾಸಿಕ ಹಿನ್ನೋಟದ ಜೊತೆಗೆ ಸುದೀರ್ಘವಾಗಿ ಬರೆದ ಪುಸ್ತಕಗಳನ್ನು ಓದುತ್ತಿದ್ದೇನೆ. ಯೂಟ್ಯೂಬ್‌ನಂತಹ ದೃಶ್ಯ ಮಾಧ್ಯಮಗಳಲ್ಲಿ ಕ್ಯಾಮರಾ, ಮೊಬೈಲ್‌ಗಳಲ್ಲಿ ವಿಡಿಯೋ ಮಾಡಿ ಪ್ರಸಿದ್ಧ ತಾಣಗಳನ್ನು ಕಣ್ಣ ಮುಂದೆಯೇ ಕಟ್ಟಿಕೊಡುವುದನ್ನು ಇತ್ತೀಚಿನ ದಿನಗಳಲ್ಲಿ ನೋಡುತ್ತಿದ್ದೇನೆ. ಈ ದಿಸೆಯಲ್ಲಿ ಚಾರಣ ಹೊರಟ ಲೇಖಕರು ತ್ಯಾಗರಾಜ್ ಮತ್ತು ಆರು ಮಂದಿಯ ತಂಡ ಮಂಜಿನ ದಾರಿಯಲ್ಲಿ ಬೆಟ್ಟ ಹತ್ತಿ ಇಳಿದು ಬಂದ ಚಾರಣದ ಸಾಹಸ ಕಥೆ ಸಹಜ ಬರವಣಿಗೆಯಲ್ಲಿ ನಿರೂಪಿತವಾಗಿದೆ.




ಹಾಗೆಯೇ ತಮ್ಮ ಪ್ರತಿ ಹೆಜ್ಜೆಯನ್ನು ದಾಖಲಿಸುತ್ತಾ ಸಾಗುವ ಚಾರಣದ ಅನುಭವ ಲೇಖಕರ ಬರಹ ಶೈಲಿಯಿಂದ ಓದುಗರಿಗೂ ಬೋರಾಗದೆ ಓದಿಸಿಕೊಂಡು ಹೋಗುತ್ತದೆ. ಎಲ್ಲೋ ನಾವೇ ಆ ಪಯಣದಲ್ಲಿ ಭಾಗಿಯಾದಂತೆ ಕಣ್ಮುಂದೆ ದೃಶ್ಯ ಗೋಚರಿಸುತ್ತದೆ. ಕಡೆ ಯಲ್ಲಿ ಒಂದು ನಿತ್ಯ ಹರಿದ್ವರ್ಣದ ಕಾಡಿನ ಪಯಣವು ಹಚ್ಚ ಹಸಿರಾಗಿ ಮನದಲ್ಲಿ ಉಳಿದು ಬಿಡುತ್ತದೆ. ಲೇಖಕರ ಮೊದಲ ಕಂತಾದ ಈ ಪುಸ್ತಕ 44 ಪುಟಗಳ ವಿಸ್ತಾರದಲ್ಲಿ ಹರಡಿಕೊಂಡಿದೆ ಹಾಗೂ ಚಾರಣದ ಸರಣಿಗಳು ಭಾಗ-1 ಎಂದೇ ಹೆಸರಿಡಲಾಗಿದೆ. ಅಲ್ಲದೆ ಇನ್ನು ಮುಂದೆಯೂ ಸಹ ಲೇಖಕರು ಹೊಸ ಹೊಸ ಪ್ರದೇಶಗಳಿಗೆ ಚಾರಣ ಮಾಡಿದ ಅನುಭವ ದಾಖಲಿಸಿ ಕೃತಿ ರೂಪದಲ್ಲಿ ಪ್ರಕಟಿಸುವ ಇಂಗಿತ ಅಭಿವ್ಯಕವಾಗಿದೆ. ಲೇಖಕರು ಹಲವಾರು ಸಾಹಸ ಚಾರಣಗಳನ್ನು ಮಾಡಿರುವ ಅನುಭವ ದಟ್ಟವಾದಂತಿದೆ. ಈ ಲೇಖನವು ಮುಂದೆ ಈ ಪ್ರದೇಶದಲ್ಲಿ ಚಾರಣ ಮಾಡುವ ಸಾಹಸಿಗರಿಗೆ ಮಾರ್ಗದರ್ಶಿ ಗೈಡ್ ಆಗುವುದು ನಿಶ್ಚಿತ. ಪ್ರಸ್ತುತ ಈ ಕೃತಿಯ ಪುಷ್ಪಗಿರಿ ಬೆಟ್ಟಕ್ಕೆ ಚಾರಣ ಮಾಡುವವರಿಗೆ ಉಪಯುಕ್ತವಾಗಿದೆ. ಹಾಗೆಯೇ ಒಮ್ಮೆ ಓದಿಸಿಕೊಳ್ಳುವ ಸದಭಿರುಚಿಯ ಕೃತಿಯಾಗಿದೆ.

**-ಗೊರೂರು ಅನಂತರಾಜು, ಹಾಸನ**



# ರಾಯರ ನೆಲೆಯಾದ ಮಂತ್ರಾಲಯ



ಭಾರತದ ದಕ್ಷಿಣದಲ್ಲಿರುವ ರಾಜ್ಯ ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಒಂದು ಸಣ್ಣ ಪಟ್ಟಣ ಮಂತ್ರಾಲಯ. ತುಂಗಭದ್ರಾ ನದಿಯ ದಂಡೆಯ ಮೇಲೆ ಸ್ಥಾಪಿತವಾಗಿರುವ ಈ ಪಟ್ಟಣ ಕರ್ನಾಟಕದ ಜೊತೆ ತನ್ನ ಗಡಿಯನ್ನು ಹಂಚಿಕೊಂಡಿದೆ. ಇದನ್ನು ಜನಪ್ರಿಯವಾಗಿ ಮಂಚಾಲೆ ಎಂತಲೂ ಕರೆಯುವುದುಂಟು, ಗುರು ರಾಘವೇಂದ್ರ ಸ್ವಾಮಿಯಿಂದ ರೂಪಿಸಲ್ಪಟ್ಟ ವೃಂದಾವನವಿರುವುದರಿಂದ ಈ ಪಟ್ಟಣವು ತೆಲುಗರಲ್ಲಿ ಅತ್ಯಂತ ಜನಪ್ರಿಯವಾಗಿದೆ.

ಪರಮ ಪೂಜ್ಯ ಗುರುಗಳು, ಶ್ರೀ ಮಧ್ವಾಚಾರ್ಯರ ಅನುಯಾಯಿಗಳಾಗಿದ್ದು ಮಧ್ವ ಪಂಥ ಪಾಲಕರಾಗಿದ್ದರು. ಗುರು ರಾಘವೇಂದ್ರ ಕಳೆದ 339 ವರ್ಷಗಳ ಕಾಲ ದಕ್ಷಿಣದ ಈ ವೃಂದಾವನದಲ್ಲಿ ವಾಸಿಸುತ್ತಿದ್ದು ಸ್ವಾಮಿ ಮುಂದಿನ 361 ವರ್ಷಗಳ ಕಾಲ ಈ ಸ್ಥಳದಲ್ಲೇ ಇರುವರೆಂಬ ನಂಬಿಕೆ ಇಲ್ಲಿನ ಸ್ಥಳೀಯರಿಗಿದೆ. ಗುರುಗಳು ವೃಂದಾವನ ಪ್ರವೇಶಿಸಿದ ಸಂದರ್ಭದಲ್ಲಿ ತಾವು ಇನ್ನು 700 ವರ್ಷಗಳ ಕಾಲ ಈ ಸ್ಥಳದಲ್ಲೇ ವಾಸಿಸುವುದಾಗಿ ಪ್ರಕಟಿಸಿದ್ದರು ಎಂತಲೂ ನಂಬಲಾಗುತ್ತದೆ. ಈ ಕಾರಣಕ್ಕಾಗಿ, ಮಂತ್ರಾಲಯವು ದೇಶದ ಹಿಂದೂಗಳ ಪವಿತ್ರ ಪಟ್ಟಣವೆಂದು ಪರಿಗಣಿಸಲಾಗಿದೆ.

ಮಂತ್ರಾಲಯದಲ್ಲಿ ಆಸಕ್ತಿ ಹುಟ್ಟಿಸುವಂತಹ ಸ್ಥಳಗಳೆಂದರೆ, ಶ್ರೀ ಗುರು ರಾಘವೇಂದ್ರ ಸ್ವಾಮಿ ದೇವಸ್ಥಾನ, ಭಿಕ್ಷಾಲಯ ಮತ್ತು ಪಂಚಮುಖಿ ಆಂಜನೇಯ ದೇವಸ್ಥಾನ. ಮಂತ್ರಾಲಯದಲ್ಲಿ ವಿಮಾನ ನಿಲ್ದಾಣವಿಲ್ಲ. ಆದರೆ ರಸ್ತೆ ಮತ್ತು ರೈಲುಗಳ ಮೂಲಕ ಸುಲಭವಾಗಿ ಇಲ್ಲಿಗೆ ಬರಬಹುದು. ರೈಲ್ವೆ ನಿಲ್ದಾಣವು ನಗರದ ಕೇಂದ್ರದಿಂದ ಸುಮಾರು 16 ಕಿ.ಮಿ. ದೂರದಲ್ಲಿದೆ. ಮಂತ್ರಾಲಯ ತಲುಪಲು ಅನೇಕ ಸರ್ಕಾರಿ ಬಸ್ಸುಗಳು ಹಾಗೂ ಖಾಸಗಿ ಬಸ್ಸುಗಳ ವ್ಯವಸ್ಥೆಯೂ ಇದೆ.

ಪಟ್ಟಣವು ತನ್ನ ಭೌಗೋಳಿಕ ಸ್ಥಾನದಿಂದಾಗಿ ಉಷ್ಣವಲಯದ ಹವಾಗುಣವನ್ನು ಹೊಂದಿದ್ದು ಬಹಳ ಬಿಸಿ ಮತ್ತು ಶುಷ್ಕ ಬೇಸಿಗೆಯನ್ನೂ ಮತ್ತು ಅಷ್ಟೇನೂ ಚಳಿ ಇಲ್ಲದ ಚಳಿಗಾಲವನ್ನು ಅನು ಭವಿಸುತ್ತದೆ. ಮಂಚಾಲೆ ಎಂತಲೂ ಕರೆಯಲ್ಪಡುವ ಮಂತ್ರಾಲಯವು ಆಂಧ್ರದ ಕರ್ನೂಲ್ ಜಿಲ್ಲೆಯಲ್ಲಿ ತುಂಗಾ ನದಿ ತಟದ ಮೇಲೆ ನೆಲೆಸಿದೆ. ಗುರು ರಾಘವೇಂದ್ರರ ಬೃಂದಾವನವಿರುವ ಈ ಕ್ಷೇತ್ರವು ಪ್ರತಿ ವರ್ಷವೂ ಲಕ್ಷಾಂತರ ಭಕ್ತರನ್ನು ಸೆಳೆಯುತ್ತದೆ. ಶ್ರೀ ಗುರು ರಾಘವೇಂದ್ರರು ದ್ವೈತ ಪಂತದ ಸಂಸ್ಥಾಪಕರಾದ ಶ್ರೀ ಮಧ್ವಾಚಾರ್ಯರ ಅನುಯಾಯಿಯಾಗಿದ್ದು, ಅದರ ಪರಿಪಾಲಕರಾಗಿದ್ದರು. ಪುಣ್ಯ ತುಂಗಭದ್ರಾ ನದಿ ದಂಡೆಯಲ್ಲಿ ಬೃಂದಾವನಸ್ಥರಾದ ಶ್ರೀ ರಾಘವೇಂದ್ರ ಸ್ವಾಮಿಗಳ ಮೂಲ ಬೃಂದಾವನ ಸ್ಥಳ. ಇದು ಭಕ್ತರಿಗೆ ಕೇಳಿದ್ದನ್ನು ಕೊಡುವ ಬೃಂದಾವನ ಸ್ಥಳ. ಅತಿ ಪವಿತ್ರ ತಾಣ. ಇಲ್ಲಿ ಮಾಡುವ ಬೃಂದಾವನ ಪ್ರದಕ್ಷಿಣೆ ನಮನ, ಸ್ತುತಿ, ಮೃತ್ತಿಕಾ ತೀರ್ಥ ಸೇವನೆಗಳಿಂದ ಭೂತಪ್ರೇತ ಪಿಶಾಚಾದಿ ಪೀಡೆಗಳು ದೂರವಾಗುತ್ತವೆ. ಅನೇಕರಿಗೆ ಭವಿಷ್ಯದ ಸೂಚನೆಯೂ ಸಿಕ್ಕಿದೆ.

ಇಲ್ಲಿನ ಮಂಚಾಲಮ್ಮನ ಗುಡಿ, ಮೂಲರಾಮನ ದರ್ಶನ ಸರ್ವ ಪಾಪಹರ, ಇಲ್ಲಿ ರಾಘವೇಂದ್ರ ಸ್ವಾಮಿಗಳ ಮಠ ಹಾಗೂ ಬೃಂದಾವನವಿದೆ. ರಾಘವೇಂದ್ರ ಗುರು ಸಾರ್ವಭೌಮರು ಮಧ್ವಮತ ಸಂಪ್ರದಾಯವನ್ನು ಅವಲಂಬಿಸಿ ಸಶರೀರರಾಗಿ ಇಲ್ಲಿ ಬೃಂದಾವನ ಸ್ಥರಾದರು (ಕ್ರಿ.ಶ. 1671 ಶ್ರಾವಣ ಬಹುಳ ಬಿದಿಗೆ ಗುರುವಾರ) ಎನ್ನಲಾಗಿದೆ. ಇವರನ್ನು ಗುರು ಸಾರ್ವಭೌಮರು, ರಾಯರು, ಮಂತ್ರಾಲಯ ಪ್ರಭುಗಳು ಎಂದೂ ಕರೆಯುತ್ತಾರೆ. ರಾಯರ ಬೃಂದಾವನದ ಎಡಗಡೆ ವಾದೀಂದ್ರರ ಬೃಂದಾವನವಿದೆ. ಮಠದ ಆವರಣದಲ್ಲಿ ಸುಧರ್ಮೇಂದ್ರ, ತೀರ್ಥಸ್ವಾಮಿಗಳ ಮತ್ತು ಸುವೃತೀಂದ್ರ ತೀರ್ಥಸ್ವಾಮಿಗಳವರ ಬೃಂದಾ ವನಗಳೂ ಇವೆ. ರಾಘವೇಂದ್ರಸ್ವಾಮಿಗಳ ಬೃಂದಾವನದ ಎದುರಿಗೆ ವಾಯುದೇವರ ವಿಗ್ರಹ ಇದೆ. ಮಠದ ಹೊರಗಡೆ ಎಡಭಾಗದಲ್ಲಿ ಮಂಚಾಲಾಂಬಿಕೆಯ ದೇವಸ್ಥಾನವಿದೆ. ಈ ಗ್ರಾಮ ರಾಯರ ನೆಲಸುವಿಕೆಯಿಂದ ಪುಣ್ಯಕ್ಷೇತ್ರ ಎನಿಸಿದೆ.

ಇಲ್ಲಿಗೆ ಸಹಸ್ರಾರು ಯಾತ್ರಿಕರು ಬರುತ್ತಾರೆ. ಭಕ್ತಾದಿಗಳು ತುಂಗಭದ್ರಾ ನದಿಯಲ್ಲಿ ಮಿಂದು ರಾಯರ ಸೇವೆಗೈದು ತಮ್ಮ ಇಷ್ಟಾರ್ಥಗಳನ್ನು ಪಡೆಯುತ್ತಾರೆ. ಪೂಜ್ಯಾಯ ರಾಘವೇಂದ್ರಾಯ ಸತ್ಯ ಧರ್ಮ ರತಾಯಚ । ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನುವೇ ಬನ್ನಿ.. ಶ್ರೀ ಗುರು ರಾಘವೇಂದ್ರ ಸ್ವಾಮಿಗಳ ದರ್ಶನ ಮಾಡಲು, ಮಂತ್ರಾಲಯಕ್ಕೆ....

**-ರಮೇಶ ನಾಯ್ಕ, ಉಪ್ಪುಂದ, ಬೈಂದೂರು**

# ಮನೆಯಲ್ಲಿ ಪುಟಾಣಿ ಸಸಿಗಳ ಕೃಷಿ

## ತಿಂಗಳಿಗೆ ರೂ. 5 ಲಕ್ಷ ಆದಾಯ

ಕೇರಳದ ಅಜಯ್ ಗೋಪಿನಾಥ್ ತಮ್ಮ ಮನೆಯ 100 ಚದರಡಿ ಕೋಣೆಯಲ್ಲಿ ಷೆಲ್ಫ್-ಗಳಲ್ಲಿಟ್ಟ ಪ್ಲಾಸ್ಟಿಕ್ ಟ್ರೇಗಳಲ್ಲಿ ಪುಟಾಣಿ ತರಕಾರಿ ಸಸಿಗಳನ್ನು ಬೆಳೆದು, ದಿನದಿನವೂ ಸುಮಾರು 10 ಕಿಗ್ರಾ ಮಾರಾಟ ಮಾಡಿ, ತಿಂಗಳಿಗೆ ರೂ. 5 ಲಕ್ಷಕ್ಕಿಂತ ಅಧಿಕ ಆದಾಯ ಗಳಿಸುತ್ತಿದ್ದಾರೆ! ಅವರು ಎರ್ನಾಕುಲಂನ ಚಿತ್ತೂರಿನ ಮುರಲಿಕದವರು.

ಇದೆಲ್ಲ ಶುರುವಾದದ್ದು ಬೆಂಗಳೂರಿನ ಹೋಟೆಲಿನಲ್ಲಿ ಊಟಕ್ಕೆ ಬಡಿಸಿದ್ದ ಇಂತಹ ಪುಟಾಣಿ ತರಕಾರಿ ಸಸಿಗಳನ್ನು ಅವರೊಮ್ಮೆ ತಿಂದಾಗ. ಅನಂತರ ಇಂತಹ ಸಸಿಗಳ ಬಗ್ಗೆ ಅವರಿಂದ ಮಾಹಿತಿಶೋಧ ಶುರು. ಇವು ಬೀಜ ಮೊಳೆತ ನಂತರ ಕೇವಲ ಒಂದು ವಾರ ಬೆಳೆದ ಪುಟಾಣಿ ಸಸಿಗಳು ಪೋಷಕಾಂಶ ತುಂಬಿದ ಇವನ್ನು ಸೂಪರ್ ಫುಡ್ ಎಂದು ಕರೆಯುತ್ತಾರೆಂದು ತಿಳಿದಾಗ ಅವರಿಗೆ ಅಚ್ಚರಿ.

ಅನಂತರ ತಮ್ಮ ಸಿಟಿಬ್ಯಾಂಕ್ ಉದ್ಯೋಗ ತೊರೆದ ಅಜಯ್ ಗೋಪಿನಾಥ್ ಈ ಪುಟಾಣಿ ಸಸಿಗಳನ್ನು ಮನೆಯಲ್ಲೇ ಬೆಳೆಯಲು ನಿರ್ಧರಿಸಿದರು. 2018ರ ಸುಮಾರಿನಲ್ಲಿ ನಾನು ಇವನ್ನು ಕೋಣೆಯೊಂದರಲ್ಲಿ ಪ್ರಾಯೋಗಿಕವಾಗಿ ಬೆಳೆಸಲು ಶುರು ಮಾಡಿದೆ. ಇವುಗಳ ಕೃಷಿ ಬಗ್ಗೆ ಮಾಹಿತಿ ಸಂಗ್ರಹಿಸುತ್ತಾ, ಪ್ರಯೋಗ ಗಳನ್ನು ಮಾಡುತ್ತಾ ಇವನ್ನು ಬೆಳೆಸೋದು ಹೇಗೆಂದು ತಿಳಿದುಕೊಳ್ಳಲು ಎರಡು ವರುಷಗಳೇ ತಗಲಿದವು. ಅನಂತರ ಮಾರಾಟಕ್ಕಾಗಿ ಇವನ್ನು ಬೆಳೆಸಲು ಆರಂಭಿಸಿದೆ ಎನ್ನುತ್ತಾರೆ.

ಅಜಯ್ ಗೋಪಿನಾಥರ (ವಯಸ್ಸು 53) ಮೊದಲ ಪ್ರಯತ್ನ ಯೂ-ಟ್ಯೂಬಿನ ಟ್ಯುಟೋರಿಯಲ್‌ಗಳನ್ನು ನೋಡಿ, ಹೆಸರು ಕಾಳುಗಳನ್ನು ಟಿಶ್ಯೂ ಪೇಪರಿ ನಲ್ಲಿ ಬಿತ್ತಿ ಬೆಳೆಯಲು ಪ್ರಯತ್ನಿಸಿದ್ದು. ಆದರೆ ಪುಟಾಣಿ ಸಸಿಗಳು ಚೆನ್ನಾಗಿ ಬೆಳೆಯಲಿಲ್ಲ. ಆ ಟ್ಯುಟೋರಿಯಲ್‌ಗಳು ಇವನ್ನು ಬೆಳೆಸುವ ಸರಿಯಾದ ವಿಧಾನವನ್ನು ತಿಳಿಸುತ್ತಿಲ್ಲ ಎಂದು ಅವರಿಗೆ ಅರಿವಾಯಿತು.

ಅನಂತರ ತಮ್ಮ ಯುನೈಟೆಡ್ ಕಿಂಗ್‌ಡಮ್‌ನ (ಬ್ರಿಟನ್) ಗೆಳೆಯನೊಬ್ಬನ ಮೂಲಕ ಪುಟಾಣಿ ಸಸಿಗಳ ಕೃಷಿಯಲ್ಲಿ ಪರಿಣತನಾದ ಕೃಷಿಕನೊಬ್ಬನನ್ನು ಸಂಪರ್ಕಿಸಿದರು. ಆ ಪರಿಣತರು ಗುಟ್ಟೊಂದನ್ನು ಇವರಿಗೆ ತಿಳಿಸಿದರು. ಎಲ್ಲಾ ಬೀಜಗಳು ಪುಟಾಣಿ ಸಸಿಗಳನ್ನು ಬೆಳೆಸಲು ಸೂಕ್ತವಲ್ಲ, ಇದಕ್ಕೆ ಹೈಬ್ರಿಡ್ ಅಲ್ಲದ, ಯಾವುದೇ ರಾಸಾಯನಿಕ ಬಳಸದ ಮತ್ತು ಜೈವಿಕವಾಗಿ ಮಾರ್ಪಾಡು ಆಗಿಲ್ಲದ ಬೀಜಗಳು ಮಾತ್ರ ಸೂಕ್ತ.



ಅಂತಹ ಬೀಜಗಳನ್ನು ಬೆಂಗಳೂರು, ಪುಣೆ ಮತ್ತು ಚತ್ತಿಸ್‌ಘರ್‌ನಿಂದ ತರಿಸಿಕೊಂಡು ಪುಟಾಣಿ ಸಸಿಗಳನ್ನು ಬೆಳೆಸತೊಡಗಿದರು ಅಜಯ್ ಗೋಪಿನಾಥ್. ಆ ಬೀಜಗಳು ದುಬಾರಿ. ಆದರೆ ಅವುಗಳ ಫಸಲು ಬಂದಾಗ ನಮಗೆ ಉತ್ತಮ ಆದಾಯ ಸಿಗುತ್ತದೆ ಎನ್ನುತ್ತಾರೆ ಅವರು. ಆ ಬೀಜಗಳ ಬೆಲೆ ಕಿಲೋಗ್ರಾಮಿಗೆ ಸುಮಾರು ರೂ.600/-. ಆರಂಭದಲ್ಲಿ ನಾನು ಎರಡು ಟ್ರೇಗಳಲ್ಲಿ ಪುಟಾಣಿ ಸಸಿಗಳನ್ನು ಬೆಳೆಸಿದ್ದೆ. ನನಗೆ ಅವನ್ನು ಮಾರಾಟ ಮಾಡುವ ಉದ್ದೇಶ ಇರಲೇ ಇಲ್ಲ. ಅವನ್ನು ನನ್ನ ಗೆಳೆಯರಿಗೆ ಹಂಚಿದೆ. ಅವರೆಲ್ಲರೂ ಅವುಗಳ ರುಚಿ ಮತ್ತು ಗುಣಮಟ್ಟ ಮೆಚ್ಚಿಕೊಂಡರು. ಆಗ ನನಗೆ ಇವನ್ನು ಮಾರಾಟ ಮಾಡಬಹುದೆಂದು ಅನಿಸಿತು ಎಂದು ಆರಂಭದ ದಿನಗಳನ್ನು ನೆನಪು ಮಾಡಿಕೊಳ್ಳುತ್ತಾರೆ ಅವರು. ಹೀಗೆ 2020ರಲ್ಲಿ ಮನೆಯಲ್ಲೇ ವಾಣಿಜ್ಯ ಮಟ್ಟದಲ್ಲಿ ಪುಟಾಣಿ ಸಸಿಗಳನ್ನು ಬೆಳೆಸಲು ಶುರುವಿಟ್ಟರು ಅಜಯ್ ಗೋಪಿನಾಥ್.

ಪ್ರಪಂಚದಲ್ಲಿ ಆಹಾರಕ್ಕಾಗಿ 150 ವಿಧದ ತರಕಾರಿ ಮತ್ತು ಹಸುರು ಸೊಪ್ಪುಗಳ ಪುಟಾಣಿ ಸಸಿಗಳನ್ನು ಬೆಳೆಸಲಾಗುತ್ತಿದೆ. ಅಜಯ್ ಗೋಪಿನಾಥ್ ಬೆಳೆಸು ತ್ತಿರುವುದು 15 ವಿಧದ ಪುಟಾಣಿ ಸಸಿಗಳನ್ನು ಮಾತ್ರ: ಕೆಂಪು, ಬಿಳಿ ಮತ್ತು ಹಸುರು ಸಾಸಿವೆ, ಸೂರ್ಯಕಾಂತಿ, ಕೆಂಪು ಮೂಲಂಗಿ ಮತ್ತು ಚೈನೀಸ್ ರೋಸ್ ಮೂಲಂಗಿ, ಕಾರ್ನ್, ಬೊಕ್-ಚೊಯ್ (ಸಸ್ಯ ಶಾಸ್ತ್ರೀಯ ಹೆಸರು: ಬ್ರಾಸ್ಸಿಕ ರಪ) ಇತ್ಯಾದಿ. ಮೂಲಂಗಿ, ಸಾಸಿವೆ ಮತ್ತು ಸೂರ್ಯಕಾಂತಿಯ ಪುಟಾಣಿ ಸಸಿಗಳಿಗೆ ಬಹಳ ಬೇಡಿಕೆಯಿದೆ.

### ಪುಟಾಣಿ ಸಸಿಗಳ ಪೋಷಕಾಂಶಗಳು

- ಈ ಪುಟಾಣಿ ಸಸಿಗಳನ್ನು ಬೆಳೆಸಿದರೆ, ಅವುಗಳಿಂದ ಸಿಗುವ ತರಕಾರಿಗಳಲ್ಲಿ ಇರುವುದಕ್ಕಿಂತಲೂ ಜಾಸ್ತಿ ಪೋಷಕಾಂಶಗಳು ಪುಟಾಣಿ ಸಸಿಗಳಲ್ಲೇ ಇರುತ್ತವೆ. ಉದಾಹರಣೆಗೆ, 25 ಗ್ರಾಮ್ ಕೆಂಪು-ಎಲೆಕೋಸಿನ ಪುಟಾಣಿ ಸಸಿಗಳಲ್ಲಿ ಒಂದು ಕಿಲೋಗ್ರಾಮ್ ಕೆಂಪು-ಎಲೆಕೋಸಿನಲ್ಲಿ ಇರುವುದಕ್ಕಿಂತ ಜಾಸ್ತಿ ಪೋಷಕಾಂಶಗಳು ಇರುತ್ತವೆ ಎನ್ನುತ್ತಾರೆ ಅಜಯ್.
- ಅಧ್ಯಯನಗಳ ಅನುಸಾರ ಪುಟಾಣಿ ಸಸಿಗಳು ವಿಟಮಿನ್-ಸಿ, ವಿಟಮಿನ್-ಕೆ ಮತ್ತು ವಿಟಮಿನ್-ಬಿ-12 ಇವುಗಳ ಉತ್ತಮ ಆಕರಗಳು. ಜೊತೆಗೆ ಇವು ಪೊಟಾಷಿಯಮ್, ಮೆಗ್ನೇಷಿಯಮ್, ಕಬ್ಬಿಣ ಮತ್ತು ಸತು - ಈ ಖನಿಜಗಳ ಹಾಗೂ ಆಂಟಿ-ಓಕ್ಸಿ ಡೆಂಟ್‌ಗಳ ಸಮೃದ್ಧ ಆಕರಗಳು.
- ಪುಟಾಣಿ ಸಸಿಗಳ ಕಾಂಡ ಮತ್ತು ಎಲೆಗಳನ್ನು ಹಸಿಯಾಗಿಯೇ ತಿನ್ನಬೇಕು. ಅವನ್ನು ಬೇಯಿಸಲೇ ಬಾರದು. ಯಾಕೆಂದರೆ ಬೇಯಿಸಿದರೆ ಅವುಗಳಲ್ಲಿರುವ ಪೋಷಕಾಂಶಗಳು ನಾಶವಾಗುತ್ತವೆ. ಹಾಗಾಗಿ ಅವನ್ನು ಹಸಿಯಾಗಿ ಅಥವಾ ಸಲಾಡ್ ಜೊತೆ ಸೇರಿಸಿ ತಿನ್ನಬೇಕು ಎಂದು ತಿಳಿಸುತ್ತಾರೆ ಅಜಯ್ ಗೋಪಿನಾಥ್.
- ಪುಟಾಣಿ ಸಸಿಗಳು ಪೋಷಕಾಂಶಗಳ ಸಮೃದ್ಧ ಆಕರಗಳು ಎಂಬುದನ್ನು ಬಹಳಷ್ಟು ಜನರು ತಿಳಿದೇ ಇಲ್ಲ. ಅವು ಫೈವ್-ಸ್ಟಾರ್ ಹೋಟೆಲುಗಳಲ್ಲಿ ಮಾತ್ರ ಸಿಗುವ ಆಹಾರ ಎಂದು ಭಾವಿಸುವವರೇ ಜಾಸ್ತಿ. ಇನ್ನಾದರೂ ಪುಟಾಣಿ ಸಸಿಗಳು ದುಬಾರಿಯಲ್ಲ ಮತ್ತು ಅವನ್ನು ಬೆಳೆಸುವುದು ಕಷ್ಟದ ಕೆಲಸವಲ್ಲ ಎಂದು ಜನರು ತಿಳಿದುಕೊಳ್ಳಬೇಕು. ಹೆಚ್ಚೆಚ್ಚು ಜನರು ಇವನ್ನು ಬೆಳೆಸಿ, ಮಾರಾಟ ಮಾಡಲು ಪ್ರಾರಂಭಿಸಿದರೆ ಜನಸಾಮಾನ್ಯರಿಗೆ ಪೋಷಕಾಂಶಭರಿತ ಆಹಾರ ಸಿಗಲು ಸಾಧ್ಯ ಎಂಬುದು ಅಜಯ್ ಗೋಪಿನಾಥರ ಆಶಯ.

**ಪುಟಾಣಿ ಸಸಿಗಳನ್ನು ಬೆಳೆಸುವುದು ಹೇಗೆ?**

ಅಜಯ್ ಗೋಪಿನಾಥ್ ಪುಟಾಣಿ ಸಸಿ ಬೆಳೆಸುವ 100 ಚದರಡಿಯ ಎರಡು ಹವಾ ನಿಯಂತ್ರಿತ ಕೋಣೆಗಳಲ್ಲಿ ಯಾವಾಗಲೂ 25 ಡಿಗ್ರಿ ಸೆಲ್ಷಿಯಸ್‌ಗಿಂತ ಕಡಿಮೆ ಉಷ್ಣತೆ ಮತ್ತು ಶೇ.40 - 60 ತೇವಾಂಶ ಇರುವಂತೆ ವ್ಯವಸ್ಥೆ ಮಾಡಿದ್ದಾರೆ. ಅಲ್ಲಿ ಫುಡ್-ಗ್ರೇಡ್ ಪ್ಲಾಸ್ಟಿಕ್ ಟ್ರೇಗಳಲ್ಲಿ ಕೋಕೋಪೀಟ್‌ನಲ್ಲಿ ಬೀಜಗಳನ್ನು ಬಿತ್ತಿ ಪುಟಾಣಿ ಸಸಿಗಳ ಕೃಷಿ. ಯಾವುದೇ ಗೊಬ್ಬರ ಅಥವಾ ರಾಸಾಯನಿಕ ಗೊಬ್ಬರ ಬಳಸುವುದಿಲ್ಲ.

ಎರಡು ಹಂತಗಳ ಈ ಟ್ರೇಗಳ ಕೆಳಹಂತದಲ್ಲಿ ನೀರು ಇರುತ್ತದೆ. ಮೇಲಿನ ಹಂತದಲ್ಲಿ ಬಿತ್ತಿದ ಬೀಜಗಳು ಮೊಳೆತಾಗ ಕೆಳಕ್ಕೆ ಇಳಿಯುವ ಬೇರುಗಳಿಗೆ ಕೆಳ ಹಂತದಿಂದ ನೀರು ಲಭ್ಯ. ಬೀಜಗಳನ್ನು ಬಿತ್ತಿದ ನಂತರ ಅವನ್ನು ಮುಚ್ಚಿ, ಮಂದ ಬೆಳಕಿನಲ್ಲಿಟ್ಟು ಫ್ಯಾನ್‌ಗಳನ್ನು ಚಾಲೂ ಮಾಡಿ, ಚೆನ್ನಾಗಿ ಗಾಳಿಯಾಡುವಂತೆ ನೋಡಿಕೊಳ್ಳುತ್ತಾರೆ. ಎರಡು ದಿನಗಳಲ್ಲಿ ಬೀಜಗಳು ಮೊಳಕೆ ಬಂದಾಗ, ಹದವಾದ ಬೆಳಕಿನಲ್ಲಿ ಟ್ರೇಗಳನ್ನು ಇರಿಸುತ್ತಾರೆ.

ಏಳು ದಿನಗಳಲ್ಲಿ ಪುಟಾಣಿ ಸಸಿಗಳು ಮಾರಾಟಕ್ಕೆ ಸಿದ್ಧ. ಆಗ ಅವುಗಳಲ್ಲಿ ತೀರಾ ತೆಳುವಾದ ಕಾಂಡ ಮತ್ತು ಒಂದು ಜೊತೆ ಎಲೆಗಳು ಇರುತ್ತವೆ. ಈ ಬೀಜದಳಗಳು (ಮೊಳಕೆ ಎಲೆಗಳು, ಕೊಟಿಲಿಡನ್ಸ್) ಮೂಡಿದ ಕೂಡಲೇ ಪುಟಾಣಿ ಸಸಿಗಳನ್ನು ಬೇರಿನಿಂದ ತುಸು ಮೇಲಕ್ಕೆ ಕತ್ತರಿಸಿ ಪ್ಯಾಕ್ ಮಾಡುತ್ತಾರೆ. ಪ್ರತಿ ದಿನ ಸುಮಾರು 10 ಕಿಗ್ರಾ ಪುಟಾಣಿ ಸಸಿಗಳನ್ನು ಕೊಯ್ಲು ಮಾಡುವ ಅಜಯ್, ಅವನ್ನು 100 ಗ್ರಾಮ್‌ಗೆ ರೂ.150 ದರದಲ್ಲಿ ಮಾರುತ್ತಾರೆ. ಗ್ರೋ ಗ್ರೀನ್ಸ್ ಎಂಬ ಬ್ರಾಂಡ್ ಹೆಸರಿನಲ್ಲಿ ಕೇರಳದ ಹಲವು ನಗರಗಳಲ್ಲಿ ಮತ್ತು ಚೆನ್ನೈ ಹಾಗೂ ಬೆಂಗಳೂರಿನಲ್ಲಿ ಮಾರಾಟ. ಸೂಪರ್-ಮಾರ್ಕೆಟುಗಳಿಗೆ, ಹೋಟೆಲುಗಳಿಗೆ, ಆಸ್ಪತ್ರೆಗಳಿಗೆ ಮತ್ತು ಆನ್-ಲೈನಿನಲ್ಲಿ ಮಾರಾಟ ಮಾಡುತ್ತಾರೆ.

# ಕತ್ತರಿಘಟ್ಟದಲ್ಲಿ ಅದ್ದೂರಿ ದಂಡಿನ ಜಾತ್ರಾ ಮಹೋತ್ಸವ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ದಂಡಿಗನಹಳ್ಳಿ ಹೋಬಳಿ ಕತ್ತರಿಘಟ್ಟದಲ್ಲಿ ದ್ಯಾವಮ್ಮ ಹಾಗು ಮೂಡಲಗಿರಿಯಪ್ಪ ಅವರ 413ನೇ ದಂಡಿನ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನೆರವೇರಿತು.

ಅಕ್ಕಪಕ್ಕದ ಗ್ರಾಮಗಳಾದ ಕತ್ತರಿಘಟ್ಟ, ಯಲಿಯೂರು, ಊಪಿನಹಳ್ಳಿ, ಗೆಜ್ಜಗಾರನಹಳ್ಳಿ, ಬಳದರೆ, ಮಡಬ ಸೇರಿ ಎಂಟತ್ತು ಗ್ರಾಮಗಳಲ್ಲಿ ಆಚರಿಸುವುದು ವಿಶೇಷ. ಗೌರಿ–ಗಣೇಶ ಹಬ್ಬದ ತರುವಾಯದ ಎರಡನೇ ಶನಿವಾರ ಜಾತ್ರೆ ಈ ಜಾತ್ರೆ ಜರುಗುತ್ತದೆ. ಮೂರು ದಿನಗಳ ಕಾಲ ನಡೆಯುವ ಜಾತ್ರೆಯಲ್ಲಿ ಶುಕ್ರವಾರ ಗ್ರಾಮದಲ್ಲಿ ಲಕ್ಷ್ಮೀದೇವಿಯನ್ನು ಉತ್ಸವ ನಡೆಸಿ ನಂತರ ಅಲಂಕೃತಗೊಂಡ ರಥದಲ್ಲಿ ಪ್ರತಿಷ್ಠಾಪಿಸಿ ಗ್ರಾಮದ ಹೊರವಲಯದಲ್ಲಿರುವ ದೇವಸ್ಥಾನದ ಆವರಣಕ್ಕೆ ತಂದು ರಾತ್ರಿ ರಥೋತ್ಸವ ನಡೆಸಲಾಯಿತು.

ಶನಿವಾರ ಬೆಳಿಗ್ಗೆ ಹರಕೆ ಹೊತ್ತ ಭಕ್ತರಿಂದ ಬಾಯಿಬೀಗ, ಮುಡಿ ಅರ್ಪಣೆ, ಸಿಡಿ ಉತ್ಸವ ನೆರವೇರಿತು. ಅಕ್ಕಪಕ್ಕದ ಜಿಲ್ಲೆಗಳಿಂದ ದಂಡು ದಂಡಾಗಿ ಆಗಮಿಸಿದ ಭಕ್ತರು ತಮ್ಮ ಶಕ್ತಿಯನುಸಾರ ಸನ್ನಿಧಿಯ ಆವರಣದಲ್ಲಿ ಕೋಳಿ, ಕುರಿ



ಬಲಿ ನೀಡಿ ಮಾಂಸದೂಟ ಸಿದ್ಧಪಡಿಸಿ ದಾಸಯ್ಯನಿಗೆ ನೈವೇದ್ಯ ಅರ್ಪಿಸಿ ನೆಂಟರಿಷ್ಟರು, ಸ್ನೇಹಿತರೊಡಗೂಡಿ ಬಾಡೂಟ ಸವಿಯುವ ಮೂಲಕ ಭಕ್ತಿ ಸಮರ್ಪಿಸಿದರು.

ಸ್ಥಳೀಯ ಶಾಸಕ ಹೆಚ್.ಡಿ.ರೇವಣ್ಣನವರು ಭಕ್ತರ ಅನುಕೂಲಕ್ಕಾಗಿ ದೇವಸ್ಥಾನದ ಸುತ್ತ ಕಾಂಕ್ರೀಟ್ ರಸ್ತೆ, ದೇವಸ್ಥಾನಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳ ಅಭಿವೃದ್ಧಿ, ತಂಗುದಾಣ, ನೀರಿನ ವ್ಯವಸ್ಥೆ, ಮುಡಿ ಕೊಠಡಿ ಸೇರಿ ಅಗತ್ಯ ಮೂಲಭೂತ ಸೌಲಭ್ಯ ಕಲ್ಪಿಸಿದ್ದಾರೆ. ಕಾಚೇನಹಳ್ಳಿ ಏತನೀರಾವರಿ ಯೋಜನೆಯಡಿ ದೇವಸ್ಥಾನದ ಆವರಣದಲ್ಲಿರುವ ಕೆರೆ ತುಂಬಿರುವ ಹಿನ್ನಲೆಯಲ್ಲಿ ಜಾತ್ರೆ ಆಚರಣೆಯ ಭಕ್ತರಿಗೆ ಅನುಕೂಲತೆಗೆ ಕಾರಣವಾಗಿದೆ. ಇನ್ನೂ ಅಡುಗೆ ತಯಾರಿಕೆಗೆ ಆಗಮಿಸುವ ಸಾವಿರಾರು ಜನರಿಗೆ ಅಕ್ಕಪಕ್ಕದ ಕೃಷಿಕರು ತಮ್ಮ ಕೊಳವೆ ಬಾವಿ, ಜಾಗ ನೀಡಿ ಸಹಕರಿಸುತ್ತಾರೆ.



ಗ್ರಾಮದ ಮೆಳಿಯಮ್ಮ ಆಧ್ಯಾತ್ಮಿಕ ಕೇಂದ್ರದ ಚಂದ್ರಶೇಖರ್ ಗುರೂಜಿ ಅವರು ಮಾತನಾಡಿ, ಮಲೆನಾಡು ಸೀಮೆಯಿಂದ ದಂಡು ದಂಡಾಗಿ ಭಕ್ತರು ಕಾಲ್ನಡಿಗೆಯಲ್ಲಿ ಸಾಗುತ್ತಿದ್ದ ವೇಳೆ ಕತ್ತಲೆಯಾದ ಹಿನ್ನಲೆಯಲ್ಲಿ ಇಲ್ಲಿನ ಅಧಿದೇವತೆ ಲಕ್ಷ್ಮೀದೇವಿ ಭಕ್ತರನ್ನು ತಡೆದು ಕತ್ತಲು ಸಮೀಪಿಸುತ್ತಿದೆ. ಇಲ್ಲಿ ಉಳಿದು ಬೆಳಿಗೆ ಪ್ರಯಾಣ ಮುಂದುವರೆಸುವಂತೆ ತಿಳಿಸಿದ ಹಿನ್ನಲೆಯಲ್ಲಿ ಭಕ್ತರು ತಾವು ತಂಗಿದ ಕಡೆಯಲ್ಲಿ ಮಾಂಸದೂಟ ಮಾಡಿ ದಾಸಪ್ಪನಿಗೆ ನೈವೇದ್ಯ ಅರ್ಪಿಸಿದರು. ಅದೇ ಸಂಪ್ರದಾಯ ಇಂದಿಗೂ ಮುಂದುವರಿದಿದೆ ಎಂದರು.

# ಬ್ರಹ್ಮಶ್ರೀ ನಾರಾಯಣ ಗುರು ಆದರ್ಶ ಪಾಲಿಸಿ

• ಪ್ರಜೋದಯ ವರದಿ

**ಸಕಲೇಶಪುರ:** ಸಮಾಜ ಸುಧಾರಣೆಗಾಗಿ ಹೋರಾಟ ಮಾಡಿದ್ದ ನಾರಾಯಣ ಗುರುಗಳ ಹಾದಿಯಲ್ಲಿ ನಾವೆಲ್ಲರೂ ಸಾಗಬೇಕೆಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ಭಾನುವಾರ ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ಬ್ರಹ್ಮಶ್ರೀ ನಾರಾಯಣ ಗುರುಗಳ 171ನೇ ಜಯಂತಿ ಉದ್ಘಾಟಿಸಿ ಮಾತನಾಡಿ, ಇಂದಿನ ಯುವ ಪೀಳಿಗೆಗೆ ನಾರಾಯಣ ಗುರುಗಳ ಮಾರ್ಗದರ್ಶನ ಅತ್ಯಗತ್ಯ. ಅವರ ತತ್ವಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಂಡು ಯಶಸ್ವಿಯಾಗಬೇಕು. ಜಾತಿ, ಧರ್ಮ, ವರ್ಣ ಬೇಧವಿಲ್ಲದೆ ಎಲ್ಲರೂ ಸಮಾನರೆಂದು ಬೋಧಿಸಿದ ನಾರಾಯಣ ಗುರುಗಳ ತತ್ವಗಳು ಇಂದಿಗೂ ಸಮಾನ ಪ್ರಸ್ತುತತೆಯನ್ನು ಹೊಂದಿವೆ. ಸಮಾಜದಲ್ಲಿ ಸಮಾನತೆ, ಶಿಕ್ಷಣ ಮತ್ತು ಸ್ವಾಭಿಮಾನ ಬೆಳೆಸುವ ಕೆಲಸದಲ್ಲಿ ಅವರು ಮಾಡಿದ ಶ್ರಮ ನಮಗೆ ದಾರಿದೀಪವಾಗಿದೆ ಎಂದು ಹೇಳಿದರು.

ಸಮುದಾಯದವರ ಬೇಡಿಕೆಯಂತೆ ಇತರೆ ನಾಯಕರುಗಳ ಜಯಂತಿಯ ದಿನದಂದು ಸಾರ್ವತ್ರಿಕ ರಜೆ ನೀಡುತ್ತಿದ್ದು, ಅದರಂತೆ ನಾರಾಯಣ ಗುರು ಜಯಂತಿ ದಿನದಂದು ಸಹ ರಜೆ ನೀಡಬೇಕೆಂದು ಬೇಡಿಕೆ ಸಲ್ಲಿಸಲಾಗಿದೆ. ಈ ಕುರಿತಂತೆ ಮುಂದಿನ ವಿಧಾನಸಭಾ ಅಧಿವೇಶನ ದಲ್ಲಿ ಪ್ರಸ್ತಾಪಿಸುತ್ತೇನೆ ಎಂದರು.



ತಾಲ್ಲೂಕಿನಲ್ಲಿ ಬಿಲ್ಲವ ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ ಮುಂದಾಗುವುದಾಗಿ ಭರವಸೆ ನೀಡಿದರು.

ತಾಲ್ಲೂಕು ಅಧ್ಯಕ್ಷ ಭಾಸ್ಕರ್ ಅವರು ಮಾತನಾಡಿ, ನಾರಾಯಣ ಗುರು ಅವರು ಒಂದು ಸಮುದಾಯಕ್ಕೆ ಸೇರಿದ ವ್ಯಕ್ತಿಯಲ್ಲ. ಸಮಾಜದಲ್ಲಿರುವ ಅಸ್ಪೃಶ್ಯತೆ ವಿರುದ್ಧ ಹೋರಾಡಿದವರು. ರಾಜ್ಯದ ಹಲವಾರು ವಿಧಾನ ಸಭಾ ಕ್ಷೇತ್ರಗಳಲ್ಲಿ ನಾರಾ ಯಣ ಗುರುಗಳ ಪುತ್ಥಳಿ ನಿರ್ಮಾಣವಾಗಿದ್ದು, ತಾಲ್ಲೂಕಿನಲ್ಲಿಯೂ ನಾರಾಯಣ ಗುರುಗಳ ಪುತ್ಥಳಿ ನಿರ್ಮಾಣ ಕಾರ್ಯಕ್ಕೆ ಶಾಸಕರು ಮುಂದಾಗಬೇಕೆಂದು ಮನವಿ ಮಾಡಿದರು.

ಕುನಿಗನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಪ್ರಕಾಶ್, ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಗೋಪಿನಾಥ್, ಕರವೇ ತಾಲ್ಲೂಕು ಅಧ್ಯಕ್ಷ ರಮೇಶ್ ಪೂಜಾರಿ ಅವರನ್ನು ಸನ್ಮಾನಿಸಲಾಯಿತು.

ಉಪ ತಹಶೀಲ್ದಾರ್ ಮೋಹನ್, ತಾಲ್ಲೂಕು ಚುನಾವಣಾ ಶಿರಸ್ತೇದಾರ್ ಶ್ವೇತಾ, ತಾಲ್ಲೂಕು ಪಶು ವೈದ್ಯಾಧಿಕಾರಿ ವೆಂಕಟೇಶ್, ಸಮುದಾಯದ ಮುಖಂಡರಾದ ಉಮಾನಾಥ್ ಸುವರ್ಣ, ಸಮುದಾಯದ ಮಹಿಳಾ ಘಟಕದ ಅಧ್ಯಕ್ಷೆ ಕವಿತಾ ಉಪಸ್ಥಿತರಿದ್ದರು.

# ಮೋದಿ ಅಹಂಕಾರವೇ ಸುಂಕಾಸ್ತ್ರಕ್ಕೆ ಕಾರಣ: ಖರ್ಗೆ ಕಿಡಿ

• ಪ್ರಜೋದಯ ವರದಿ

**ಕಲಬುರಗಿ:** ಪ್ರಧಾನಿ ನರೇಂದ್ರ ಮೋದಿ ಅವರಿಗೆ ತಾನು ಏನು ಮಾಡಿದರೂ ನಡೆಯುತ್ತ ದೆಂಬ ಅಹಂಕಾರವಿದೆ. ಅವರ ಅಹಂಕಾರವೇ ಅವರಿಗೆ ಮುಳುವಾಗಿ ಸುಂಕಾಸ್ತ್ರ ಎದುರಿಸು ವಂತಾಗಿದೆಯೆಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕಿಡಿಕಾರಿದರು.



ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, ಜಿಎಸ್‌ಟಿ ಇಳಿಕೆಯಿಂದ ಬಡವರಿಗೆ ಅನುಕೂಲವಾಗಲಿದೆ. ಇದನ್ನು ಟೀಕಿಸಲ್ಲ. ಆದರೆ, ಜಿಎಸ್‌ಟಿ ಇಳಿಸುವಂತೆ ನಾವು ಎಂಟು ವರ್ಷಗಳ ಹಿಂದೆಯೇ ಹೇಳಿದ್ದೆವು. ಆಗ ಅವರು ಪರಿಷ್ಕರಿಸಲಿಲ್ಲವೆಂದು ಈಗ ದಿಢೀರ್ ಆಗಿ ಯಾವ ಕಾರಣಕ್ಕೆ ಪರಿಷ್ಕರಿಸುತ್ತಿದ್ದಾರೋ ಮೋದಿ ಅವರಿಗೆ ಗೊತ್ತು. ನಾವು ಎಂದಿಗೂ ಜನ ಪರವಾದ ಸಮಸ್ಯೆಗಳನ್ನು ಎತ್ತಿಹಿಡಿದು ಸರ್ಕಾರಕ್ಕೆ ಹೇಳುತ್ತೇವೆ. ಆದರೆ ಅವರು ಯಾವಾಗಲೂ ನಿರ್ಲಕ್ಷ್ಯಿಸುತ್ತಾರೆಂದರು. ವಿದೇಶಾಂಗ ನೀತಿಯಲ್ಲಿ ಭಾರತ ದಶಕಗಳಿಂದ ಅನುಸರಿಸಿದ್ದ ಅಲಿಪ್ತ ನೀತಿ ನಿರ್ಲಕ್ಷ್ಯಿಸಿದರು. ಮೋದಿ ವಿದೇಶದಲ್ಲಿ ಹೋಗಿ ಯಾವುದೇ ರಾಜಕೀಯ ನಾಯಕರ ಪರ ಪ್ರಚಾರ ಮಾಡಬಾರದೆಂದು ಹೇಳಿದರೂ ಕೇಳದೇ ಟ್ರಂಪ್ ಪರ ಪ್ರಚಾರ ಮಾಡಿದರು. ತನ್ನ ಆತ್ಮೀಯ ಸ್ನೇಹಿತ ಎಂದು ಹೇಳಿಕೊಂಡರು. ಈ ನಡೆ ಭವಿಷ್ಯದಲ್ಲಿ ಬೇರೆ ರಾಷ್ಟ್ರಗಳ ನಾಯಕರು ಭಾರತಕ್ಕೆ ಬಂದು ಪ್ರಚಾರ ಮಾಡಲು ಮೇಲ್ಪಂಕ್ತಿಯಿಂದ ಹಾಕಿದಂತಾಗಲ್ಲವೇ ಎಂದು ಕೇಳಿದರು.

ಪ್ರಧಾನಿ ಮೋದಿ ಬಳಿ ದೂರದೃಷ್ಟಿಯಿಲ್ಲ. ದೂರದೃಷ್ಟಿವುಳ್ಳವರು ದೇಶಕ್ಕಾಗಿ ಏನು ಮಾಡ ಬೇಕು ಎಂಬುದನ್ನು ಯೋಚಿಸಿ ಮಾಡುತ್ತಾರೆ. ಈ ಭಾಗದ ಜನರು ಹನಿರಕ್ತ ಸುರಿಸದೇ, ಕೇಂದ್ರ ಸರ್ಕಾರಕ್ಕೆ ಒತ್ತಾಯವನ್ನೂ ಮಾಡದಂಥ ಸಂದರ್ಭದಲ್ಲಿ ನಾವು ದೂರದೃಷ್ಟಿಯಿಂದ ಕಲ್ಯಾಣ ಕರ್ನಾಟಕಕ್ಕೆ 371(ಜೆ) ಕಲಂ ಜಾರಿಗೊಳಿಸಿದೆವು. ನಾವು ಇರಬಹುದು, ಹೋಗ ಬಹುದು. ಆದರೆ, ಮುಂದಿನ ಪೀಳಿಗೆಗೆ ಸಹಾಯವಾಗಲಿ ಬಹುಮತ ಇಲ್ಲದಿದ್ದರೂ ಸರ್ವಾನುಮತದಿಂದ ಈ ಕಾಯ್ದೆ ಜಾರಿಗೆ ಶ್ರಮಿಸಿದ್ದೆ ಎಂದರು.

ನಮಗೆ ದೇಶ ಮುಖ್ಯವಾಗಬೇಕೇ ಹೊರತು, ಪಕ್ಷ, ವ್ಯಕ್ತಿ ಮುಖ್ಯವಾಗಬಾರದು. ಆದರೆ, ಬಿಜೆಪಿಯವರು ಮೋದಿ ಇರುವ ತನಕ ಅದು ಮಾಡುತ್ತೇವೆ. ಇದು ಮಾಡುತ್ತೇವೆ ಎಂದೆಲ್ಲ ಮಾತನಾಡುತ್ತಾರೆ. 1952ರಿಂದಲೂ ಈ ತನಕದ ಯಾವ ಪ್ರಧಾನಿ ಹೀಗೆ ಮಾತನಾಡಿಲ್ಲ. ಪ್ರಧಾನಿ ನರೇಂದ್ರ ಮೋದಿ ತಮ್ಮ ಅಹಂ ಬಿಡಬೇಕು. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ದೇಶದ ಅಭಿವೃದ್ಧಿಗೆ ದುಡಿಯಬೇಕು ಎಂದು ಆಗ್ರಹಿಸಿದರು.

**ಮತಪತ್ರ ಬಳಕೆ ನಿರ್ಧಾರ ಸ್ವಾಗತಾರ್ಹ**

15–16 ವರ್ಷಗಳಿಂದ ಈಚೆಗೆ ಬಳಸುತ್ತಿರುವ ಇವಿಎಂಗಳನ್ನೇ ನೀವೆಲ್ಲ ನಂಬುವುದಾದರೆ, 50 ವರ್ಷಗಳ ಕಾಲ ಬಳಸಿದ್ದ ಮತಪತ್ರಗಳನ್ನು ಯಾಕೆ ನಂಬಬಾರದು. ಯಾವುದೇ ವ್ಯವಸ್ಥೆಯ ಆಗು–ಹೋಗುಗಳನ್ನು ನೋಡಿಕೊಂಡು ಬದಲಾವಣೆ ತರಲಾಗುತ್ತದೆ. ಅಂತಹ ಬದಲಾವಣೆ ಕರ್ನಾಟಕ ಸರ್ಕಾರ ತರಲು ನಿರ್ಧರಿಸಿದೆ. ಬ್ಯಾಲೆಟ್ ಮುಂಬರುವ ಚುನಾವಣೆಯಲ್ಲಿ ಮತ ಪತ್ರ ಬಳಕೆಗೆ ಕರ್ನಾಟಕ ಸರ್ಕಾರ ಮುಂದಾಗಿರುವ ಒಳ್ಳೆಯ ಕೆಲಸ ಎಂದರು.

ನೀವು ಇವಿಎಂ ಬದಲಾಯಿಸುತ್ತೀರಿ, ಮತಗಳನ್ನೂ ಕಳ್ಳತನ ಮಾಡುತ್ತೀರಿ. ಇದು ಕಲಬುರಗಿ, ಕರ್ನಾಟಕ ಹಾಗು ಬಿಹಾರದಲ್ಲೂ ಇದನ್ನು ನೋಡಿದ್ದೇವೆ. 2019ರ ಲೋಕಸಭಾ ಚುನಾವಣೆಯಲ್ಲಿ ಕಲಬುರಗಿ ಲೋಕಸಭಾ ಮತಕ್ಷೇತ್ರದ ಐದಾರು ಕಡೆ 20 ಸಾವಿರದಷ್ಟು ಮತಗಳ ಅಂತರ ಹೇಗೆ ಬರಲು ಸಾಧ್ಯವಾಯಿತು. ಹೀಗಾದರೆ ಇವಿಎಂ ಮೇಲೆ ನಂಬಿಕೆ ಹೇಗೆ ಬರಬೇಕೆಂದು ಪ್ರಶ್ನಿಸಿದರು.

## ಕರಾಟೆ–ಸ್ವಯಂ ರಕ್ಷಣಾ ತರಬೇತಿದಾರರಿಂದ ಅರ್ಜಿ ಆಹ್ವಾನ

**ಹಾಸನ:** ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಎ.ಪಿ.ಜೆ.ಅಬ್ದುಲ್ ಕಲಾಂ ವಸತಿ ಶಾಲೆ, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಾಗೂ ಕಾಲೇಜುಗಳಲ್ಲಿ 2025–26ನೇ ಸಾಲಿಗೆ ವ್ಯಾಸಂಗ ಮಾಡುತ್ತಿರುವ 6,7,8,9 ಮತ್ತು 11ನೇ ತರಗತಿಯ ವಿದ್ಯಾರ್ಥಿನಿಯರಿಗೆ ಕರಾಟೆ–ಸ್ವಯಂ ರಕ್ಷಣಾ ಕೌಶಲ್ಯ ತರಬೇತಿ ನೀಡಲು ನುರಿತ ಕರಾಟೆ ಮಹಿಳಾ ತರಬೇತಿ ದಾರರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ಅಭ್ಯರ್ಥಿಗಳು ಕರಾಟೆ ತರಗತಿಯ ಪ್ರಮಾಣ ಪತ್ರ ಹಾಗೂ ಅಗತ್ಯ ದಾಖಲೆಗಳನ್ನು ಅರ್ಜಿ ಯೊಂದಿಗೆ ಸೆ.15ರೊಳಗೆ ಜಿಲ್ಲಾ ಕಚೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೌಲಾನಾ ಆಜಾದ್ ಭವನ, ಆಕಾಶವಾಣಿ ಹಿಂಭಾಗ, ಸಾಲಗಾಮೆ ಮುಖ್ಯರಸ್ತೆ, ಹಾಸನ ಇಲ್ಲಿಗೆ ಕಚೇರಿ ವೇಳೆಯಲ್ಲಿ ಸಲ್ಲಿಸಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಆಕಾಶವಾಣಿ ಹಿಂಭಾಗ, ಹಾಸನ. ದೂರವಾಣಿ ಸಂಖ್ಯೆ: 08172–268373/08172– 267373 ಗೆ ಸಂಪರ್ಕಿಸಬಹುದಾಗಿದೆ.

# ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿಗೆ 20 ಲ.ರೂ.: ಹೆಚ್.ಕೆ.ಸುರೇಶ್

• ಪ್ರಜೋದಯ ವರದಿ

**ಬೇಲೂರು:** ಪತ್ರಕರ್ತರ ಆರೋಗ್ಯ ಚಿಕಿತ್ಸೆಗಾಗಿ ತಾಲ್ಲೂಕು ಪತ್ರಕರ್ತರ ಸಂಘದ ಕ್ಷೇಮಾಭಿವೃದ್ಧಿಗೆ 20 ಲಕ್ಷಕ್ಕೂ ಹೆಚ್ಚು ಹಣವನ್ನು ಕ್ರೂಢೀಕರಿಸಿ ಕೊಡುವುದಾಗಿ ಶಾಸಕ ಹೆಚ್.ಕೆ. ಸುರೇಶ್ ಅವರು ಹೇಳಿದರು.



ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಮಾಧ್ಯಮ ದಿನಾಚರಣೆ ಅಂಗವಾಗಿ ಪತ್ರಿಕಾ ಮಿತ್ರರಿಗೆ ಅಭಿನಂದನೆ ಸಲ್ಲಿಸಿ ಮಾತನಾಡಿದ ಅವರು, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಹೆಚ್.ಬಿ.ಮದನಗೌಡರು ಪತ್ರಕರ್ತರ ಆರೋಗ್ಯ ಹಾಗೂ ಚಿಕಿತ್ಸೆಗೆ ಶಾಸಕರು ಸ್ಪಂದಿಸಿ ಆರೋಗ್ಯ ವಿಮೆಗೆ ಸಹಾಯಧನ ನೀಡಬೇಕೆಂದು ಮನವಿ ಮಾಡಿದ್ದು, ಹಗಲಿರುಳು ತಾಲ್ಲೂಕಿನ ಅಭಿವೃದ್ಧಿಗೆ ಶ್ರಮಿಸುವ ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿಗೆ 20 ಲಕ್ಷ ಕ್ಕೂ ಹೆಚ್ಚು ಹಣವನ್ನು ತಮ್ಮ ಹಾಗೂ ಇತರೆ ಮೂಲಗಳಿಂದ ಸಂಗ್ರಹಿಸಿ ಕೊಡುವುದಾಗಿ ಹೇಳಿದರು.

ನಿವೇಶನ ರಹಿತ ಪತ್ರಕರ್ತರಿಗೆ ಆಶ್ರಯ ಯೋಜನೆಯಡಿ ನಿವೇಶನ ನೀಡಲು ತಾವು ಈಗಲೂ ಬದ್ಧರಾಗಿದ್ದೇವೆ. ಕೆಲ ಪ್ರಭಾವಿ ರಾಜಕಾರಣಿಗಳು ತಮ್ಮ ಸ್ವಾರ್ಥದಿಂದ ನಿವೇಶನ ನೀಡಲು ಅಡ್ಡಗಾಲು ಹಾಕಿದ್ದಾರೆ. ನಿವೇಶನ ಹಂಚಿಕೆ ವಿಚಾರದಲ್ಲಿ ಸೇಡಿನ ರಾಜಕೀಯ ಮಾಡಬಾರದು. ಇಂತಹ ಭೂಮಾಫಿಯಾ ಮಾಡುವರಿಗೆ ಅವಕಾಶ ನೀಡುವುದಿಲ್ಲವೆಂದು ಸ್ಪಷ್ಟಪಡಿಸಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಹೆಚ್.ಬಿ.ಮದನಗೌಡ ಅವರು ಮಾತನಾಡಿ, ಆಧುನಿಕ ಆಹಾರ ಪದ್ಧತಿ ಹಾಗೂ ಮಾನಸಿಕ ಒತ್ತಡ ದಿಂದ ಪತ್ರಕರ್ತರಲ್ಲಿ ಕಾಯಿಲೆಗಳು ಹೆಚ್ಚಾಗುತ್ತಿದೆ. ಪತ್ರಕರ್ತರ ಆರೋಗ್ಯ ಚಿಕಿತ್ಸೆಗಾಗಿ ನೆರವಾಗಲು ಕ್ಷೇಮಾಭಿವೃದ್ಧಿ ನಿಧಿಗೆ ಶಾಸಕರು 20 ಲಕ್ಷಕ್ಕೂ ಹೆಚ್ಚು ಹಣವನ್ನು ನೀಡಲು ಮುಂದಾಗಬೇಕು. ಈಗಾಗಲೇ ಮಾಜಿ ಶಾಸಕರಾದ ಕೆ.ಎಸ್.ಲಿಂಗೇಶ್ ಅವರು 2 ಲಕ್ಷವನ್ನು ಕ್ಷೇಮಾಭಿವೃದ್ಧಿಗೆ ನೀಡಿದ್ದಾರೆ. ಶಾಸಕರು ತಮ್ಮ ಸಹಕಾರವನ್ನು ನೀಡಬೇಕು. ತಾಲ್ಲೂಕು ಪತ್ರಕರ್ತರ ಸಂಘ ತನ್ನದೇ ಛಾಪನ್ನು ರಾಜ್ಯದಲ್ಲಿ ಮೂಡಿಸಿದ್ದು, ಮುಂದಿನ ದಿನಗಳಲ್ಲಿ ಸದೃಢ ಸಂಘ ಕಟ್ಟಲು ಪ್ರತಿಯೊಬ್ಬ ಪತ್ರಕರ್ತರು ಕ್ರಿಯಾಶೀಲತೆಯಿಂದ ಕೆಲಸ ಮಾಡಬೇಕು ಎಂದರು.

ಹೆಚ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಎಂ.ಎ.ನಾಗರಾಜ್ ಅವರು ಮಾತನಾಡಿ, ತಾಲ್ಲೂಕು ಪತ್ರಕರ್ತರ ಸಂಘವು ಉತ್ತಮ ಸುದ್ದಿಗಳನ್ನು ಬಿತ್ತರಿಸುವ ಮೂಲಕ ಜನಮನ್ನಣೆಗಳಿಸಿದೆ. ಪತ್ರಕರ್ತರ ಆರೋಗ್ಯ ನಿಧಿಗೆ ತಾವು 1ಲಕ್ಷ ರೂ.ನೀಡುವುದಾಗಿ ಹೇಳಿದರು.

ಪತ್ರಕರ್ತರಾದ ರವಿಹೊಳ್ಳ, ದಿನೇಶ ಬೆಳ್ಳವಾರ, ಎಂ.ರಮೇಶ್, ಸುನಿ ಪಡುವಳಲು, ಬಿ.ಕೆ.ರಮೇಶ್, ಬಿ.ಆರ್.ಮಹೇಶ್, ವಿತರಕರಾದ ಸಚಿನ್ ಮತ್ತು ಪ್ರವೀಣ್‌ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಮಾಜಿ ಶಾಸಕ ಕೆ.ಎಸ್.ಲಿಂಗೇಶ್, ಪುರಸಭಾ ಅಧ್ಯಕ್ಷರಾದ ಉಷಾ ಸತೀಶ್, ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಎಲ್.ರಾಜೇಗೌಡ, ಪತ್ರಕರ್ತರ ಸಂಘ ಅಧ್ಯಕ್ಷ ರಘುನಾಥ್, ತಹಶೀಲ್ದಾರ್ ಶ್ರೀಧರ ಕಂಕಣವಾಡಿ, ಎಸ್.ಪಿ.ಶಿವಾನಂದ ಪಾಟೀಲ್, ಜಿಲ್ಲಾ ಉಪಾಧ್ಯಕ್ಷ ಡಿ.ಬಿ.ಮೋಹನ್ ಕುಮಾರ್, ಅಧ್ಯಕ್ಷ ಹೆಬ್ಬಾಳು ಹಾಲಪ್ಪ, ಪ್ರಧಾನ ಕಾರ್ಯದರ್ಶಿ ಬಿ.ಬಿ.ಶಿವರಾಜ್, ನಿರ್ದೇಶಕ ಮಲ್ಲೇಶ, ಖಜಾಂಚಿ ಎನ್.ಅನಂತು ಇತರರು ಇದ್ದರು.

## ಅರಿನಾ ಸಬಲೆಂಕಾಗೆ ಸತತ 2ನೇ ಕಿರೀಟ



**ನ್ಯೂಯಾರ್ಕ್:** ಬೆಲಾರೂಸ್ ದೇಶದ ಅರಿನಾ ಸಬಲೆಂಕಾ ಸತತ ಎರಡನೇ ಬಾರಿ ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಮಹಿಳಾ ಸಿಂಗಲ್ಸ್ ಕಿರೀಟ ಧರಿಸಿದರು.

ಆದರೆ ಈ ಸಲ ಅವರಿಗೆ ಕಿರೀಟವು ಸುಲಭವಾಗಿ ಒಲಿಯಲಿಲ್ಲ. ಪ್ರಶಸ್ತಿ ಗೆಲುವಿನಿಂದ ಸಬಲೆಂಕಾ ಎರಡು ಪಾಯಿಂಟ್‌ಗಳಿಂದ ದೂರ ಇದ್ದರು. ಅವರ ಅನುಭವ ಮತ್ತು ಕೌಶಲ್ಯಕ್ಕೆ ಸತತ ಎರಡು ಅಂಕ ಗಳಿಸಿ ಜಯಿ ಸುವುದು ಕಷ್ಟವೇನೂ ಆಗಿರಲಿಲ್ಲ. ಆದರೆ ತಮ್ಮೆದುರಿಗೆ ಬಂದ ಚೆಂಡನ್ನು ಓವರ್ ಹೆಡ್ ಸ್ಮ್ಯಾಷ್ ಮಾಡುವ ಬದಲು ಬ್ಯಾಕ್ ಪೆಡ್ಲಿಂಗ್ ಮಾಡಿದರು. ಚೆಂಡು ನೆಟ್‌ನೊಳಗೇ ಬಿತ್ತು. ಅದ ರಿಂದಾಗಿ ಅವರ ಎದುರಾಳಿ ಅಮಂಡಾ ಅನಿಸಿಮೊವಾ ಅವರಿಗೂ ಒಂದು ಬ್ರೇಕ್ ಸಿಗುವ ಅವಕಾಶ ಲಭಿಸಿತು. ಜನವರಿಯಲ್ಲಿ ಆಸ್ಟ್ರೇಲಿಯನ್ ಓಪನ್ ಮತ್ತು ಜೂನ್‌ನಲ್ಲಿ ಫ್ರೆಂಚ್ ಓಪನ್ ಫೈನಲ್‌ಗಳಲ್ಲಿ ಸೋತಿದ್ದ ನೆನಪು ಗಳು ಅವರ ಮನದಲ್ಲಿ ಹಾದುಹೋಗಿರ ಬಹುದು. ನಿಧಾನವಾಗಿ ಸಾವರಿಸಿ ಕೊಂಡ ಅವರು 15 ನಿಮಿಷಗಳಲ್ಲಿ ವಿಜಯದ ಸಂಭ್ರಮ ಆಚರಿಸಿದರು. 6–3, 7–6 (3)ರಿಂದ ಅನಿಸಿಮೊವಾ ವಿರುದ್ಧ ಗೆದ್ದರು.

# ಹಿಂದೂ ಬದಲು ವೀರಶೈವ-ಲಿಂಗಾಯತ ಎಂದು ದಾಖಲಿಸಿ

• ಪ್ರಜೋದಯ ವರದಿ

**ಬೆಂಗಳೂರು:** ಜಾತಿವಾರು ಸಮೀಕ್ಷೆ ವೇಳೆ ಲಿಂಗಾಯತ–ವೀರಶೈವ ಸಮುದಾಯದ ಯಾರೂ ಧರ್ಮದ ಕಾಲಂನಲ್ಲಿ ಹಿಂದೂ ಎಂದು ನಮೂದಿಸಬಾರದು. ಬದಲಿಗೆ ವೀರಶೈವ–ಲಿಂಗಾಯತ ಎಂದು ಬರೆಸಬೇಕೆಂದು ಅಖಿಲ ಭಾರತ ವೀರಶೈವ – ಲಿಂಗಾಯತ ಮಹಾಸಭಾ ಕರೆ ನೀಡಿದೆ.

ಮಹಾಸಭಾದ ಮಹಾಪ್ರಧಾನ ಕಾರ್ಯದರ್ಶಿ ಈಶ್ವರ್ ಬಿ. ಖಂಡ್ರೆ ಅವರು ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವೀರಶೈವ–ಲಿಂಗಾಯತರು ಹಿಂದೂ ಎಂದು ಬರೆಸಬಾರದು. ಹಿಂದೂ ಸನಾತನ ಧರ್ಮಕ್ಕೂ, ವೀರಶೈವ – ಲಿಂಗಾಯತ ಧರ್ಮಕ್ಕೂ ಸಂಬಂಧವಿಲ್ಲ. ಹೀಗಾಗಿ ನಮ್ಮ ಸಮುದಾಯದ ಎಲ್ಲರೂ, ತಾವು ವೀರಶೈವ–ಲಿಂಗಾಯತ ಧರ್ಮದವರು ಎಂದೇ ಬರೆಸಬೇಕೆಂದು ಉತ್ತರಿಸಿದರು.

ಇದು ಜಾತಿ ಪ್ರಮಾಣ ಪತ್ರಕ್ಕಾಗಿ ನಡೆಸುತ್ತಿರುವ ಸಮೀಕ್ಷೆ ಅಲ್ಲ. ಬದಲಿಗೆ ರಾಜ್ಯದ ಜನರ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಯ ಬಗ್ಗೆ ಅರಿತುಕೊಳ್ಳಲು ಮತ್ತು ಅದರ ಆಧಾರದಲ್ಲಿ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಲು ನಡೆಸುತ್ತಿರುವ ಸಮೀಕ್ಷೆ. ಹೀಗಾಗಿ ವೀರಶೈವ ಲಿಂಗಾಯತ ಸಮುದಾಯದ ಎಲ್ಲರೂ ಸಮೀಕ್ಷೆಯಲ್ಲಿ ಕಡ್ಡಾಯವಾಗಿ ಭಾಗಿಯಾಗಬೇಕೆಂದರು.

ಸಮೀಕ್ಷೆಯಲ್ಲಿ ಭಾಗವಹಿಸುವಾಗ ಬಹಳ ಎಚ್ಚರಿಕೆಯಿಂದ ವಿವರ ನೀಡಬೇಕು. ಜಾತಿಯ ಕಾಲಂನಲ್ಲಿ ಉಪಜಾತಿಯ ಹೆಸರು ಬರೆಸ ಬಾರದು. ಬದಲಿಗೆ ಲಿಂಗಾಯತ ಅಥವಾ ವೀರಶೈವ ಅಥವಾ ವೀರಶೈವ –ಲಿಂಗಾಯತ ಎಂದು ಬರೆಸಬೇಕು. ಉಪಜಾತಿ ಕಾಲಂನಲ್ಲಿ ತಮ್ಮ ಉಪ ಜಾತಿಗಳ ಸರಿಯಾದ ಹೆಸರನ್ನು ಬರೆಸಬೇಕು. ಗಣತಿದಾರರು ಸರಿ ಯಾಗಿ ಮಾಹಿತಿ ದಾಖಲಿಸಿದ್ದಾರೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕೆಂದು ವಿವರಿಸಿದರು.

**ಪ್ರತ್ಯೇಕ ಧರ್ಮದ ಮಾನ್ಯತೆ ಪರಿಗಣಿಸಿ :** ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಶಂಕರ ಬಿದರಿ ಅವರು ಮಾತ ನಾಡಿ, ಈ ಹಿಂದಿನ ಸಮೀಕ್ಷೆಗಳಲ್ಲಿ ವೀರಶೈವ ಮತ್ತು ಲಿಂಗಾಯತರನ್ನು ಒಂದು ಜಾತಿ ಎಂದು ಪರಿಗಣಿಸಲಾಗಿದೆ. ಪ್ರತ್ಯೇಕ ಧರ್ಮದ ಮಾನ್ಯತೆಯನ್ನು ಅಧಿಕೃತವಾಗಿ ನೀಡಿಲ್ಲ. ಅದನ್ನು ಪರಿಗಣಿಸುವ ಅಗತ್ಯವಿದೆ ಎಂದು ಹೇಳಿದರು.

ನಮ್ಮ ಸಮಾಜದಲ್ಲಿ ಹಿಂದುಳಿದವರು ಅತಿ ಹಿಂದುಳಿದವರು ಮತ್ತು ಅತ್ಯಂತ ಹಿಂದುಳಿದವರಿದ್ದಾರೆ. ಸಮುದಾಯದ ಬಡವ ಮತ್ತು ಕಡು ಬಡವರಿಗೆ ಸರ್ಕಾರವು ಪ್ರಾಮಾಣಿಕವಾಗಿ ಅಂಕ ನೀಡಿ ಸೂಕ್ತ ಪ್ರವರ್ಗಕ್ಕೆ ಸೇರಿಸಬೇಕೆಂದು ಒತ್ತಾಯಿಸಿದರು.



## ದೇಶಕ್ಕೆ ಅನ್ನ ನೀಡುವ ರೈತರು ದೇಶದ ಆಸ್ತಿ



• ಪ್ರಜೋದಯ ವರದಿ

**ಸಕಲೇಶಪುರ:** ದೇಶಕ್ಕೆ ಅನ್ನ ನೀಡುವ ರೈತರು ಹಾಗೂ ಕಾರ್ಮಿಕರು ಈ ದೇಶದ ನಿಜವಾದ ಆಸ್ತಿ ಎಂದು ರೋಟರಿ ವಿದ್ಯಾ ಸಂಸ್ಥೆಯ ಅಧ್ಯಕ್ಷ ವಿಜಯಶಂಕರ್ ಅವರು ಹೇಳಿದರು.

ಪಟ್ಟಣದ ಮಳಲಿ ಗ್ರಾಮದ ಪಂಕಜ ಹಾಗೂ ವಿಜಯ್ ಶಂಕರ್ ಅವರ ಭತ್ತದ ಗದ್ದೆಯಲ್ಲಿ ಭಾನುವಾರ ರೋಟರಿ ಸಂಸ್ಥೆ ವತಿಯಿಂದ ಹಮ್ಮಿಕೊಂಡಿದ್ದ ರೈತ ಮಿತ್ರ ಕಾರ್ಯಕ್ರಮದಲ್ಲಿ ಭತ್ತದ ಸಸಿ ನಾಟಿ ಮಾಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮಾಹಿತಿ ಮತ್ತು ತಂತ್ರಜ್ಞಾನ ವ್ಯವಸ್ಥೆಯಲ್ಲಿ ಎಷ್ಟೇ ಅಭಿವೃದ್ಧಿ ಹೊಂದಿರಬಹುದು. ವಿಜ್ಞಾನ ಮತ್ತು ತಂತ್ರ ಜ್ಞಾನದಲ್ಲಿ ಮನುಷ್ಯ ಸಾಧನೆ ಮಾಡಿರಬಹುದು, ಇನ್ನೂ ಮಾಡಬಹುದು. ತಿನ್ನುವ ಅನ್ನವನ್ನೆ ಬೆಳೆಯುವ ರೈತನಿಗೆ ಮೊದಲ ಸ್ಥಾನ ಹಾಗೂ ಗೌರವ ಸಲ್ಲಿಸಬೇಕು ಎಂದರು.

ದೇಶದ ಎಲ್ಲಾ ಕಡೆ ರೋಟರಿ ಸಂಸ್ಥೆಗಳು ಪ್ರತಿ ವರ್ಷ ರೈತರ ಗದ್ದೆ, ಹೊಲಗಳಿಗೆ ಹೋಗಿ ರೈತರೊದಿಗೆ ನಾಟಿ, ಬಿತ್ತನೆಗೆ ಕೈ ಜೋಡಿಸಿ, ಪ್ರಗತಿ ಪರ ರೈತರು ಹಾಗೂ ಕಾರ್ಮಿಕರನ್ನು ಸನ್ಮಾನ ಮಾಡುವಂತಹ ಕೆಲಸ ಶ್ಲಾಘನೀಯ ಎಂದರು.

ರೋಟರಿ ಟ್ರಸ್ಟ್ ಅಧ್ಯಕ್ಷ ಎನ್.ಸಿ. ಸ್ವಾಮಿ ಅವರು ಮಾತನಾಡಿ, ಅಭಿವೃದ್ಧಿಯ ಹೆಸರಿನಲ್ಲಿ ಇಂದು ಕೃಷಿ ಭೂಮಿಯನ್ನೆಲ್ಲಾ ವಾಣಿಜ್ಯ ಬಳಕೆಗೆ ಪರಿವರ್ತನೆ ಮಾಡಲಾಗುತ್ತಿದೆ. ಪರಿವರ್ತನೆ ಇದೇ ರೀತಿ ಮುಂದುವರೆದರೆ ಮುಂದಿನ ದಿನಗಳಲ್ಲಿ ಆಹಾರಕ್ಕಾಗಿ ಅಂಗಲಾಚ ಬೇಕಾಗುತ್ತದೆಂದರು.

ಸರ್ಕಾರಗಳು ಭತ್ತ ಬೆಳೆಯುವ ಗದ್ದೆಗಳು, ಧಾನ್ಯ ಹಾಗೂ ಇನ್ನಿತರ ಬೆಳೆಗಳನ್ನು ಬೆಳೆಯುವ ಹೊಲಗಳನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡದಂತೆ ಕಟ್ಟುನಿಟ್ಟಿನ ಕಾನೂನು ಜಾರಿಗೆ ತರಬೇಕು ಎಂದರು.

ಕಾರ್ಮಿಕರಾದ ರವಿ ಹಾಗೂ ಲಕ್ಷ್ಮಿ ಅವರನ್ನು ಸನ್ಮಾನಿಸಲಾಯಿತು. ರೋಟರಿ ಸದಸ್ಯರು, ರೋಟರಿ ಮಹಿಳೆಯರು, ಮಕ್ಕಳು ಸಹ ಭತ್ತದ ಸಸಿ ನಾಟಿ ಮಾಡಿದರು. ರೋಟರಿ ಸಂಸ್ಥೆಯ ಅಧ್ಯಕ್ಷ ಕೆ.ಜಿ.ಚಂದ್ರಶೇಖರ್, ಚನ್ನವೇಣಿ ಎಂ.ಶೆಟ್ಟಿ, ಆಶಾ ಶಿವಪ್ರಸಾದ್, ಶಿವಪ್ರಸಾದ್ ಇದ್ದರು.

# ನ್ಯಾಯ ಸಮ್ಮತ ಚುನಾವಣೆಗೆ ಆದ್ಯತೆ

» ಮೊದಲನೇ ಪುಟದಿಂದ

ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳು ಹೆಚ್ಚಾಗಿರುವುದರಿಂದ ಈಗಾಗಲೇ 2023ರಲ್ಲಿ ಕ್ಷೇತ್ರ ಪುನರ್ ವಿಂಗಡಣೆಯಾಗಿರುವುದರಿಂದ ಈ ಎಲ್ಲಾ ಕ್ಷೇತ್ರಗಳಿಗೆ ಮೀಸಲು ಪಟ್ಟಿಯನ್ನು ಸರ್ಕಾರ ನೀಡಬೇಕಾಗಿದೆ. ಹೊಸದಾಗಿ ಸೃಷ್ಟಿಯಾಗಿರುವ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳಲ್ಲಿ ಹಳೆಯ ಮೀಸಲು ಆಧರಿಸಿ ಚುನಾವಣೆ ನಡೆಸಲಾಗುವುದಿಲ್ಲ. ಉಳಿದಂತೆ 192 ನಗರಸಭೆ ಮತ್ತು ಪುರಸಭೆಗಳಿಗೆ ಹೊಸ ಮೀಸಲು ಪಟ್ಟಿ ನೀಡದಿದ್ದಲ್ಲಿ ಹಳೆಯ ಮೀಸಲಿನಂತೆಯೇ ಚುನಾವಣೆ ನಡೆಸಲಾಗುತ್ತದೆಂದು ವಿವರಿಸಿದರು.

ಕ್ಷೇತ್ರ ಮರು ವಿಂಗಡಣೆ ಅರ್ಜಿ ವಿಚಾರಣೆ ಸುಪ್ರಿಂ ಕೋರ್ಟ್‌ನಲ್ಲಿ ಬಾಕಿ ಇದೆ. ಸರ್ಕಾರ ನವೆಂಬರ್ 1ಕ್ಕೆ ಕ್ಷೇತ್ರ ವಿಂಗಡಣೆ ವರದಿ ಸಲ್ಲಿಸಬೇಕು. ನ.30ರೊಳಗೆ ಚುನಾವಣಾ ಆಯೋಗಕ್ಕೆ ಮೀಸಲಾತಿ ಪಟ್ಟಿ ಕೊಡಬೇಕು. ಸರ್ಕಾರ ಮೀಸಲಾತಿ ಪಟ್ಟಿ ಕೊಟ್ಟ ನಂತರ ಚುನಾವಣೆ ನಡೆಸಲು 3 ತಿಂಗಳು ಕಾಲಾವಕಾಶ ಬೇಕು. ಅದನ್ನು ಸುಪ್ರೀಂ ಕೋರ್ಟ್ ಗಮನಕ್ಕೆ ತಂದಿದ್ದು ಅದು ಸಮ್ಮತಿಸಿದೆ. ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗಾಗಿ ಕ್ಷೇತ್ರ ಮರು ವಿಂಗಡಣೆಗೆ ಸರ್ಕಾರ 3 ತಿಂಗಳ ಕಾಲಾವಕಾಶ ಕೇಳಿದೆ ಎಂದು ಹೇಳಿದರು.

**ಹಾಸನದ ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗು ಪದನಿಮಿತ್ತ ಭೂ ದಾಖಲೆಗಳ ಉಪನಿರ್ದೇಶಕರ ನ್ಯಾಯಾಲಯದಲ್ಲಿ**

ಮೇಲ್ಮನವಿ ಸಂಖ್ಯೆ : 296/2025

**ಅಪೀಲುದಾರರು** : ತೆರೇಜಮ್ಮ ಬಿನ್ ಅಂತಪ್ಪ (ಪೌತಿ)
ವಾರಸುದಾರರು
ಪ್ರಕಾಶ್ ಎ.ಎಂ. ಬಿನ್ ಮರಿಯಪ್ಪ,
ಚೌರಿಕೊಪ್ಪಲು ಗ್ರಾಮ,
ಮೆಳಗೋಡು ದಾಖಲೆ,
ದುದ್ದ ಹೋಬಳಿ, ಹಾಸನ ತಾಲ್ಲೂಕು.

**ವಿರುದ್ಧ**

**ಎದುರುದಾರರು** : ವಿನ್ಸೆಂಟ್ ಜಾನ್ ಪೀಟರ್ ಬಿನ್
ಜೋಸೆಫ್ ಮತ್ತು ಇತರರು
3) ಚಿಣ್ಣಪ್ಪ ಬಿನ್ ಮರಿಯಪ್ಪ
6) ಚಿಣ್ಣಪ್ಪ ಬಿನ್ ಜೋಸೆಫ್
3, 6ನೇ ಎದುರುದಾರರ ವಿಳಾಸ
ಚೌರಿಕೊಪ್ಪಲು ಗ್ರಾಮ,
ಮೆಳಗೋಡು ದಾಖಲೆ,
ದುದ್ದ ಹೋಬಳಿ, ಹಾಸನ ತಾಲ್ಲೂಕು

**ಪ್ರಕಟಣೆ**

ಹಾಸನ ಜಿಲ್ಲೆ, ಹಾಸನ ತಾಲ್ಲೂಕು ದುದ್ದ ಹೋಬಳಿ ಮೆಳಗೋಡು ಗ್ರಾಮದ ಸ.ನಂ.406/2 ರಲ್ಲಿ 406/2ಎ, 2ಬಿ,2ಸಿ ಎಂದು, 8ನೇ ಎದುರುದಾರರಾದ ಭೂದಾಖಲೆಗಳ ಸಹಾಯಕ ನಿರ್ದೇಶಕರು, ಹಾಸನ ತಾಲ್ಲೂಕು, ರವರು ಮಾಡಿರುವ ತಪ್ಪು ದುರಸ್ತಿಯನ್ನು ಪ್ರಶ್ನಿಸಿ ಈ ಅಪೀಲನ್ನು ಸಲ್ಲಿಸಲಾಗಿರುತ್ತವೆ. ಸದರಿ ಪ್ರಕರಣ ಸಂಬಂಧ ದಿ: 21–08–2025, 02–09–2025ರ ವಿಚಾರಣೆಯಂದು ಮೇಲ್ಕಂಡ 3, 6 ನೇ ಎದುರುದಾರರಾದ ತಮಗೆ ನೋಟೀಸ್ ಜಾರಿಯಾಗದೆ ಇರುವುದರಿಂದ ತಾವು ಗೈರು ಹಾಜರಾಗಿರುತ್ತೀರಿ.

ಪ್ರಕರಣದ ಮುಂದಿನ ವಿಚಾರಣೆಯನ್ನು ದಿ: 08–09–2025ರಂದು ಅಪರಾಹ್ನ 3.00 ಗಂಟೆಗೆ ಮಾನ್ಯ ಭೂದಾಖಲೆಗಳ ಉಪ ನಿರ್ದೇಶಕರ ಕಚೇರಿ, ಜಿಲ್ಲಾಧಿಕಾರಿಗಳ ಕಚೇರಿ ಆವರಣ ಹಾಸನ ಜಿಲ್ಲೆ, ಹಾಸನ ಇಲ್ಲಿ ನಿಗದಿಪಡಿಸಿದ್ದು, ಸದರಿ ದಿನದಂದು ಮೇಲ್ಕಂಡ 3, 6 ನೇ ಎದುರುದಾರರಾದ ತಾವು ಖುದ್ದಾಗಿ ಅಥವಾ ವಕೀಲರ ಮೂಲಕ ವಿಚಾರಣೆಗೆ ಹಾಜರಾಗಿ ಪ್ರಕರಣ ಸಂಬಂಧ ತಮ್ಮ ಅಹವಾಲನ್ನು ಸಲ್ಲಿಸತಕ್ಕದ್ದು. ಒಂದು ವೇಳೆ ವಿಚಾರಣೆಗೆ ಹಾಜರಾಗದಿದ್ದಲ್ಲಿ ಸದರಿ ಅಪೀಲನ್ನು ಏಕಪಕ್ಷೀಯವಾಗಿ ವಿಚಾರಣೆ ಮಾಡಲಾಗುವುದು ಹಾಗು ತೀರ್ಮಾನಿಸಲಾಗುವುದು ಎಂದು ಈ ಮೂಲಕ ತಿಳಿಯುವುದು.

ನ್ಯಾಯಾಲಯದ ಮೊಹರು ಮತ್ತು ನನ್ನ ಸಹಿಯೊಂದಿಗೆ ದಿನಾಂಕ : 02–09–2025 ರಂದು ನೀಡಲಾಗಿದೆ.

ನ್ಯಾಯಾಲಯದ ನಡವಳಿಯ ಮೇರೆಗೆ

ಅಪೀಲುದಾರರು
(ಪ್ರಕಾಶ್ ಎ.ಎಂ. ಬಿನ್ ಪರಿಯಪ್ಪ
ದಿನಾಂಕ : 02–09–2025
ಸ್ಥಳ : ಹಾಸನ

ಜಿಲ್ಲಾಧಿಕಾರಿಗಳ ತಾಂತ್ರಿಕ
ಸಹಾಯಕರು ಹಾಗು ಪದನಿಮಿತ್ತ ಭೂ
ದಾಖಲೆಗಳ ಉಪ ನಿರ್ದೇಶಕರು,
ಹಾಸನ ಜಿಲ್ಲೆ, ಹಾಸನ.

# ಗಣೇಶ ಮೂರ್ತಿ ವಿಸರ್ಜನೆ: ಹತ್ತಕ್ಕೂ ಅಧಿಕ ಜನರ ಸಾವು

• ಪ್ರಜೋದಯ ವರದಿ

**ಮುಂಬೈ:** ವಾರಾಂತ್ಯದಲ್ಲಿ ನಡೆದ ಗಣೇಶ ಮೂರ್ತಿ ವಿಸರ್ಜನೆ ವೇಳೆ ಮಹಾರಾಷ್ಟ್ರದಾದ್ಯಂತ 10ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದು ಐವರು ಗಾಯಗೊಂಡಿದ್ದಾರೆ. ಅನೇಕರು ನಾಪತ್ತೆಯಾಗಿದ್ದಾರೆ.

ರಾಜ್ಯದಾದ್ಯಂತ ನಡೆದ ಪ್ರತ್ಯೇಕ ಘಟನೆಗಳಲ್ಲಿ ಹೆಚ್ಚಿನವರು ನೀರಲ್ಲಿ ಮುಳುಗಿ ಮೃತ ಪಟ್ಟಿದ್ದು, ಮುಂಬೈಯಲ್ಲಿ ವಿದ್ಯುತ್ ಅಘಾತದಿಂದಾಗಿ ದುರಂತ ಸಂಭವಿಸಿರುವ ಉದಾಹರಣೆ ಗಳೂ ಇವೆ. ಮುಂಬೈನ ಕುರ್ಲಾದ ಖೈರಾನಿ ರಸ್ತೆಯಲ್ಲಿ ನೇತಾಡುತ್ತಿದ್ದ ತಂತಿಯು ಗಣೇಶ ಮೂರ್ತಿಗೆ ತಗುಲಿ ಆರು ಜನರಿಗೆ ವಿದ್ಯುದಾಘಾತವಾಗಿದೆ. ಘಟನೆ ಯಲ್ಲಿ ಸುಕುಮಾರನ್ ಕುಮಾರನ್ (36) ಮೃತಪಟ್ಟಿದ್ದು, ಇಬ್ಬರು ಬಾಲಕರು ಸೇರಿ ಐವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮತ್ತೊಂದು ದುರಂತವು ಠಾಣೆ ಜಿಲ್ಲೆಯ ಶಹಾಪುರ ತಾಲ್ಲೂಕಿನಲ್ಲಿ ಗಣೇಶ ವಿಸರ್ಜನೆ ಸಂದರ್ಭ ಭಾರಂಗಿ ನದಿಯಲ್ಲಿ ಸಂಭವಿಸಿದೆ. ಐವರು ನೀರಿನಲ್ಲಿ ಮುಳುಗಿದ್ದು, ಪ್ರತೀಕ್ ಮುಂಡೆ ಎಂಬವವರು ಮೃತಪಟ್ಟಿದ್ದಾರೆ. ಇಬ್ಬರನ್ನು ರಕ್ಷಿಸಲಾಗಿದ್ದು,



ಇನ್ನಿಬ್ಬರ ಶೋಧ ಕಾರ್ಯ ನಡೆಯುತ್ತಿದೆ.

ಪುಣೆ ಜಿಲ್ಲೆಯಲ್ಲಿ ಸಂಭವಿಸಿದ ಪ್ರತ್ಯೇಕ ಘಟನೆಗಳಲ್ಲಿ ನಾಲ್ವರು ನೀರುಪಾಲಾಗಿದ್ದು, ಇಬ್ಬರ ಮೃತ ಶರೀರ ಪತ್ತೆಯಾಗಿದೆ. ಇನ್ನಿಬ್ಬರ ಪತ್ತೆಗೆ ಶೋಧ ಕಾರ್ಯ ನಡೆಯುತ್ತಿದೆ. ನಾಂದೇಡ್ ಜಿಲ್ಲೆಯಲ್ಲಿ ಗಡೇಗಾಂವ್‌ನ ನದಿಯೊಂದರಲ್ಲಿ ಮೂವರು ಕೊಚ್ಚಿಕೊಂಡು ಹೋಗಿದ್ದು, ಒಬ್ಬರನ್ನು ರಕ್ಷಿಸಲಾಗಿದೆ. ಉಳಿದ ಇಬ್ಬರ ಪತ್ತೆ ಕಾರ್ಯ ಮುಂದುವರೆದಿದೆ. ನಾಸಿಕ್ ಜಿಲ್ಲೆಯಲ್ಲಿ ನಾಲ್ವರು ಕೊಚ್ಚಿಕೊಂಡು ಹೋಗಿದ್ದು, ಒಬ್ಬರ ಮೃತದೇಹ ಪತ್ತೆಯಾಗಿದೆ. ಜಲಗಾಂವ್‌ನಲ್ಲಿ ನಡೆದ ಪತ್ಯೇಕ ಘಟನೆಗಳಲ್ಲಿ ಮೂವರು ಕೊಚ್ಚಿಕೊಂಡು ಹೋಗಿದ್ದು, ಶೋಧ ಕಾರ್ಯ ನಡೆಯುತ್ತಿದೆ.

# ಚಾಕಲೇಟ್ ತಯಾರಿಕೆ ಘಟಕಕ್ಕೆ ಆರೋಗ್ಯಾಧಿಕಾರಿ ಭೇಟಿ

• ಪ್ರಜೋದಯ ವರದಿ

**ಆಲೂರು:** ಒಂದು ವಾರದೊಳಗೆ ಹೋಟೆಲ್, ಆಹಾರ ಬಳಕೆ ತಯಾರು ಮಾಡಿ ಮಾರಾಟ ಮಾಡುವ ಮಾಲೀಕರು, ಅಂಕಿತ ಅಧಿಕಾರಿಗಳ ಕಚೇರಿಯಿಂದ ಪರವಾನಗಿ ಪಡೆದು ಹಾಜರುಪಡಿಸಬೇಕೆಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ॥ನಿಸಾರ್‌ಫಾತಿಮ ಅವರು ಸೂಚನೆ ನೀಡಿದ್ದಾರೆ.

ಪಾಳ್ಯ ಹೋಬಳಿ ಕೇಂದ್ರದಲ್ಲಿ ತೆರೆದಿರುವ ಎರಡು ಶಾಖಾಹಾರಿ ಹೋಟೆಲ್‌ಗಳು ಮತ್ತು ಚಾಕಲೇಟ್ ತಯಾರಿಕೆ ಘಟಕಕ್ಕೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂದರ್ಭದಲ್ಲಿ ಅಂಕಿತ ಕಚೇರಿಯಿಂದ ಪಡೆದಿರುವ ಪರವಾನಗಿ ಹಾಜರುಪಡಿಸಲು ಮಾಲೀಕರು ವಿಫಲರಾದರು. ಹೋಟೆಲ್‌ನಲ್ಲಿ ಸ್ವಚ್ಛತೆ ಮರೀಚಿಕೆಯಾಗಿತ್ತು. ಆಹಾರ ತಯಾರು ಮತ್ತು ಗ್ರಾಹಕರಿಗೆ ಸರಬರಾಜು ಮಾಡುವ ಸಿಬ್ಬಂದಿಗಳು ಯಾವುದೇ ಶುಚಿತ್ವವಿಲ್ಲದೆ ತಲೆ, ಕೈಗಳಿಗೆ ಗ್ಲೌಸ್ ಹಾಕದಿರುವುದು, ಅವಧಿ ಮೀರಿದ ಪದಾರ್ಥಗಳನ್ನು ಮಾರಾಟಕ್ಕೆ ಇಟ್ಟಿರುವು ದನ್ನು ಕಂಡು ಮಾಲೀಕರನ್ನು ತರಾಟೆಗೆ ತೆಗೆದುಕೊಂಡರು. ಚಾಕಲೇಟ್ ತಯಾರು ಘಟಕದಲ್ಲಿ ವಾಯಿದೆ ಮೀರಿದ ವಸ್ತುಗಳು ಗೋಚರಗೊಂಡವು. ಅಡುಗೆ ಮಾಡುವವರು, ಬಡಿಸುವವರು ಕೈ ಮತ್ತು ತಲೆಗೆ ರಕ್ಷಾ ಕವಚಗಳನ್ನು ಅಳವಡಿಸ ಬೇಕು. ವಾರ್ಷಿಕ ವಹಿವಾಟು 12 ಲಕ್ಷದೊಳಗಿದ್ದರೆ ತಾಲ್ಲೂಕು ಆಹಾರ ಸುರಕ್ಷಿತ ಅಧಿಕಾರಿಗ ಳಿಂದ ಪರವಾನಗಿ ಪಡೆಯಬೇಕು. 12 ಲಕ್ಷ ರೂ. ದಾಟಿದರೆ ಜಿಲ್ಲಾ ಅಂಕಿತ ಅಧಿಕಾರಿಗಳಿಂದ ಪರವಾನಗಿ ಪಡೆಯಬೇಕು. ಘಟಕಗಳಲ್ಲಿ ಕೆಲಸ ಮಾಡುವ ಕಾರ್ಮಿಕರು, ಸಿಬ್ಬಂದಿಗಳು ಪ್ರತಿ ಮೂರು ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆಗೊಳಪಟ್ಟು ವೈದ್ಯಕೀಯ ಪ್ರಮಾಣ ಪತ್ರ ಹೊಂದಿರಬೇಕು ಎಂದರು.




ಆಹಾರ ಪದಾರ್ಥಗಳನ್ನು ತಯಾರಿಸುವವರು ವೈಯಕ್ತಿಕ ಶುಚಿತ್ವ ಹೊಂದಿರಬೇಕು. ತಯಾರಿಕೆ ಸ್ಥಳ, ಪರಿಸರ ನೈರ್ಮಲ್ಯದಿಂದ ಕೂಡಿರಬೇಕು. ತ್ಯಾಜ್ಯ ವಸ್ತುಗಳನ್ನು ಸೂಕ್ತವಾಗಿ ಸಂಗ್ರಹಿಸಿ ಸಮರ್ಪಕವಾಗಿ ವಿಲೇವಾರಿ ಮಾಡಬೇಕು. ಅಡುಗೆ ಎಣ್ಣೆಯನ್ನು ಪದೆ ಪದೆ ಬಳಕೆ ಮಾಡಬಾರದು. ಮರುಬಳಕೆ ಮಾಡಿದರೆ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಇಡ್ಲಿ ತಯಾರಿಕೆಯಲ್ಲಿ ಪ್ಲಾಸ್ಟಿಕ್ ಪೇಪರ್ ಬಳಕೆ ಮಾಡಬಾರದು. ಕರಿದ ಆಹಾರ ಪದಾರ್ಥಗಳನ್ನು ಪೊಟ್ಟಣ ಮಾಡಲು ಮುದ್ರಣ ಪೇಪರ್ ವತ್ತು ಪ್ಲಾಸ್ಟಿಕ್ ವಸ್ತುಗಳನ್ನು ಬಳಸಬಾರದು. ಶುದ್ಧ ನೀರನ್ನು ಬಳಸಬೇಕೆಂದು ಸೂಚಿಸಿ, ಒಂದು ವಾರದಲ್ಲಿ ಪರವಾನಗಿ ಪಡೆದು ಹಾಜರುಪಡಿಸದಿದ್ದರೆ ಶಿಸ್ತು ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಸಿದರು.

ಆರೋಗ್ಯ ಇಲಾಖೆ ಮತ್ತು ಆಹಾರ ಸುರಕ್ಷತೆ ಅಧಿಕಾರಿಗಳು, ಸಿಬ್ಬಂದಿಗಳು ಹಾಜರಿದ್ದರು.

## ವಿದೇಶದಿಂದ ಬಂದಿದ್ದ ಸ್ನೇಹಿತನ ಭೇಟಿಗೆ ಬಂದಿದ್ದವ ಅಪಘಾತದಲ್ಲಿ ಸಾವು

• ಪ್ರಜೋದಯ ವರದಿ

**ಸಕಲೇಶಪುರ:** ವಿದೇಶದಿಂದ ಬಂದಿದ್ದ ಸ್ನೇಹಿತನನ್ನು ಭೇಟಿಯಾಗಲು ಕೊಪ್ಪಳದಿಂದ ಬಂದಿದ್ದ ವ್ಯಕ್ತಿ ಅಪಘಾತದಲ್ಲಿ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಮೂಗಲಿ ಸಮೀಪ ನಡೆದಿದೆ.

ಸೆ.5ರ ಮಧ್ಯರಾತ್ರಿ ವಿದ್ಯುತ್ ಕಂಬಕ್ಕೆ ಕಾರು ಡಿಕ್ಕಿಯಾಗಿ ವ್ಯಕ್ತಿಯೊಬ್ಬರು ಮೃತಪಟ್ಟು, ಮತ್ತೊಬ್ಬ ಗಾಯಗೊಂಡಿದ್ದ. ಕೊಪ್ಪಳ ಜಿಲ್ಲೆ ಕುಷ್ಟಗಿಯ ಶರಣಗೌಡ (30) ಎಂಬಾತ ಸಾವನ್ನಪ್ಪಿದ್ದಾರೆ. ನಾಗರಾಜು ಗಾಯಗೊಂಡಿದ್ದಾರೆ. ಜರ್ಮನಿಯಿಂದ ಬಂದಿದ್ದ ಗೆಳೆಯ ಶಿವದೀಪ್ ಅವರನ್ನು ಮಾತನಾಡಿಸಲು ಶರಣಗೌಡ ಹಾಗು ನಾಗರಾಜು ತಾಲ್ಲೂಕಿನ ಮೂಗಲಿ ಸಮೀಪದ ರೆಸಾರ್ಟ್‌ಗೆ ಬಂದಿದ್ದರು. ಬೈರಾಪುರದಿಂದ ಊಟ ಪಾರ್ಸೆಲ್ ಮಾಡಿಕೊಂಡು ರೆಸಾರ್ಟ್‌ಗೆ ತೆರಳುತ್ತಿದ್ದಾಗ ನಾಗರಾಜು ವೇಗವಾಗಿ ಕಾರು ಓಡಿಸಿ ರಸ್ತೆ ಪಕ್ಕದ ವಿದ್ಯುತ್ ಕಂಬಕ್ಕೆ ಡಿಕ್ಕಿ ಮಾಡಿದ್ದಾರೆ. ಅಪಘಾತದ ರಭಸಕ್ಕೆ ಕಾರು ಸಂಪೂರ್ಣ ಜಖಂಗೊಂಡಿದ್ದು, ಗಂಭೀರ ಗಾಯಗೊಂಡಿದ್ದ ಇಬ್ಬರನ್ನೂ ಹಿಮ್ಸ್‌ಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಿಸದೆ ಶರಣಗೌಡ ಮೃತಪಟ್ಟಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಪ್ರತ್ಯೇಕ ಅಪಘಾತದಲ್ಲಿ ಇಬ್ಬರ ಸಾವು**

ಥಾರ್ ಜೀಪ್ ಅಪಘಾತವಾಗಿ ಚಾಲಕ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಬೈಕೆರೆ ವೃತ್ತದಲ್ಲಿ ಶನಿವಾರ ನಡೆದಿದೆ. ಆಲೂರು ತಾಲ್ಲೂಕು ರಾಮನಹಳ್ಳಿ ಗ್ರಾಮದ ಅನಿಲ್ ಮೃತರು. ಸ್ನೇಹಿತ ಪ್ರಜ್ವಲ್ ಹಾಗು ಅನಿಲ್ ಮೂಡಿಗೆರೆಯಿಂದ ಥಾರ್ ಜೀಪ್‌ನಲ್ಲಿ ಬರುತ್ತಿದ್ದಾಗ ಚಾಲಕನ ನಿಯಂತ್ರಣ ತಪ್ಪಿ ವಾಹನ ರಸ್ತೆ ಪಕ್ಕದ ಕಡಿದ ಮರದ ಬುಡಕ್ಕೆ ಡಿಕ್ಕಿಯಾಗಿದೆ. ಅಪಘಾತದಲ್ಲಿ ಇಬ್ಬರೂ ಗಂಭೀರ ಗಾಯಗೊಂಡಿದ್ದು, ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸ ಲಾಗಿತ್ತು. ಎದೆಗೆ ಪೆಟ್ಟು ಬಿದ್ದ ಹಿನ್ನಲೆ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖ ಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಬೈಕ್ ಡಿಕ್ಕಿಯಾಗಿ ಪಾದಚಾರಿ ಮೃತಪಟ್ಟಿರುವ ಘಟನೆ ಬೇಲೂರು ತಾಲ್ಲೂಕಿನ ಹೆಬ್ಬಾಳು-ಹುಣಸಿನಕೆರೆ ಮಾರ್ಗ ಮಧ್ಯೆ ನಡೆದಿದೆ. ಎಂ.ಹುಣಸಿನಕೆರೆ ಗ್ರಾಮದ ನಾಗರಾಜು (50) ಮೃತರು. ಕೂಲಿ ಕೆಲಸ ಮುಗಿಸಿ ಕೊಂಡು ಮನೆಗೆ ತೆರಳುತ್ತಿದ್ದಾಗ ಎದು ರುಗಡೆಯಿಂದ ವೇಗವಾಗಿ ಬಂದ ಬೈಕ್ ಸವಾರ ಡಿಕ್ಕಿ ಮಾಡಿದ್ದಾನೆ. ತಲೆಗೆ ಬಲವಾದ ಗಾಯವಾಗಿ ತೀವ್ರ ರಕ್ತಸ್ರಾವವಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

# ಧಾರ್ಮಿಕ ಆಚರಣೆಗೆ ವೈಜ್ಞಾನಿಕ ಕಾರಣವಿದೆ

## ಬ್ರಹ್ಮಶ್ರೀ ನಾರಾಯಣಗುರು ಜಯಂತಿಯಲ್ಲಿ ಅಪರ ಜಿಲ್ಲಾಧಿಕಾರಿ ಮಂಜುನಾಥ್

• ಪ್ರಜೋದಯ ವರದಿ



**ಹಾಸನ:** ಭಾರತೀಯ ಇತಿಹಾಸದಲ್ಲಿ ಪ್ರತಿಯೊಂದು ಧಾರ್ಮಿಕ ಆಚರಣೆಗೆ ತನ್ನದೇಯಾದ ವೈಜ್ಞಾನಿಕ ಕಾರಣವಿದೆ. ಅದಕ್ಕೆ ಭದ್ರ ಬುನಾದಿ ಹಾಕಿ ಕೊಟ್ಟವರು ಬ್ರಹ್ಮಶ್ರೀ ನಾರಾಯಣ ಗುರು ಎಂದು ಅಪರ ಜಿಲ್ಲಾಧಿಕಾರಿ ಮಂಜುನಾಥ್ ಅವರು ಹೇಳಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಭಾನುವಾರ ಏರ್ಪಡಿಸಿದ್ದ ಬ್ರಹ್ಮಶ್ರೀ ನಾರಾಯಣಗುರು ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಆಚರಣೆ, ವಿಚಾರಗಳು ಎಲ್ಲವೂ ಸಂಸ್ಕಾರಗಳಿಂದ ಕೂಡಿದವು. ಸಮಾಜದ ಪ್ರತಿಯೊಂದು ಸಮುದಾಯದಲ್ಲಿಯೂ ಸಂಸ್ಕಾರವಿದೆ. ಈ ಸಂಸ್ಕಾರದ ಬುನಾದಿಯನ್ನು ನಾರಾಯಣಗುರು ಹಾಕಿಕೊಟ್ಟಿದ್ದಾರೆ. ನಾರಾಯಣಗುರು ಜಯಂತಿಯನ್ನು ಭಾರತದಾದ್ಯಂತ ಆಚರಿಸಲಾಗುತ್ತದೆ. ಸಮ ಸಮಾಜ ನಿರ್ಮಾಣಕ್ಕೆ ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲರೂ ಸಾಗಬೇಕೆಂದರು.

ಮೌಢ್ಯ, ಕಂದಾಚಾರ ಹಾಗು ಅಸ್ಪೃಶ್ಯತೆ ವಿರುದ್ಧ ಅವರು ಪ್ರಬಲ ಹೋರಾಟ ನಡೆಸಿದರು. ಭಾರತದ ಸಂಸ್ಕೃತಿ ಎಂದರೆ ಅದು ಸಂಸ್ಕಾರಾಧಾರಿತ. ಸಂಸ್ಕಾರದ ಪ್ರಾರಂಭವು ಮನೆಯ ಹೆಣ್ಣುಮಕ್ಕಳಿಂದಲೇ ಆಗುತ್ತದೆ. ಅವರಿಲ್ಲದೆ ಯಾವ ಆಚರಣೆಗಳೂ ನಡೆಯುವುದಿಲ್ಲ, ಅಂತರಂಗ ಶುದ್ಧಿ ಹಾಗು ಬಹಿರಂಗ ಶುದ್ಧಿ ಎರಡೂ ಅಗತ್ಯ. ಅವುಗಳ ಸಮತೋಲನವೇ ನಿಜವಾದ ಸಂಸ್ಕೃತಿ ಎಂದರು.

ಅನ್ಯಾಯ, ಅಸ್ಪೃಶ್ಯತೆ, ಅಂಕು-ಡೊಂಕುಗಳನ್ನು ಹೋಗಲಾಡಿಸಲು ನಾರಾಯಣಗುರು ಮುಂದಾದರು. ಅದೇ ದಾರಿಯಲ್ಲಿ ಜಗಜ್ಯೋತಿ ಬಸವಣ್ಣ ವಚನ ಕ್ರಾಂತಿಗೆ ಮುನ್ನುಡಿ ಬರೆದರು. ವಚನ ಸಂಸ್ಕೃತಿ ಸಮಾಜ ದಲ್ಲಿ ಜಾಗೃತಿ ಮೂಡಿಸಿದವು ಎಂದರು.

ಆಧುನಿಕತೆ ಬೆಳೆದಂತೆ ಮನುಷ್ಯನ ಆಲೋಚನಾ ಶಕ್ತಿಯೂ ಬದಲಾಗುತ್ತಿದೆ. ಪರಸ್ಪರ ನಂಬಿಕೆ, ವಿಶ್ವಾಸ, ಪ್ರಾಮಾಣಿಕತೆ ಎಂಬುದು ಮಾಯವಾಗುತ್ತಿದೆ. ಸಂಕುಚಿತ ಮನೋಭಾವ, ಸ್ವಾರ್ಥದಿಂದ ಸ್ವಾಸ್ಥ್ಯ ಹದಗೆಡುತ್ತಿದೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಹೆಚ್.ಪಿ. ತಾರಾನಾಥ್, ತಾಲ್ಲೂಕು ಆರ್ಯ ಈಡಿಗರ ಸಂಘದ ಅಧ್ಯಕ್ಷ ಬಿ.ಎನ್. ಮಹಂತೇಶ್, ಹೊಂಬೇಗೌಡ, ಮಲ್ಲೇಗೌಡ, ಮಹೇಶ್, ನಾಗರಾಜು ಮತ್ತಿತರರಿದ್ದರು.


## ಧರ್ಮಸ್ಥಳ ವಿರುದ್ಧ ಷಡ್ಯಂತ್ರಕ್ಕಾಗಿ ಯಾರೂ ದುಡ್ಡು ಕೊಟ್ಟಿಲ್ಲ

» ಮೊದಲನೇ ಪುಟದಿಂದ

ಆಗ ಯೂಟ್ಯೂಬ್‌ನಿಂದಲೂ ಹಣ ಸಂಪಾದಿಸ ಬಹುದೆಂಬುದನ್ನು ತಿಳಿದು ಯೂಟ್ಯೂಬರ್ ವೃತ್ತಿಯಲ್ಲಿ ಸಂಪೂರ್ಣವಾಗಿ ತೊಡಗಿಸಿ ಕೊಂಡಿದ್ದ. ಸೌಜನ್ಯ ಪ್ರಕರಣ ವಿಚಾರದಲ್ಲಿ ಧರ್ಮಸ್ಥಳಕ್ಕೆ ಹೋದಾಗ ಹೋರಾಟಗಾರ ಮಹೇಶ ಶೆಟ್ಟಿ ತಿಮರೋಡಿ ಹಾಗು ಗಿರೀಶ್ ಮಟ್ಟಣ್ಣನವರ್ ಅವರ ಪರಿಚಯವಾಗಿತ್ತು. ಅಭಿ ಸಹ ತಿಮರೋಡಿ ಸಂಬಂಧಿಕರ ಮನೆಯಲ್ಲಿ ತಂಗಿದ್ದ. ಅವನಿಗೆ ಯಾರೂ ಹಣದ ಆಮಿಷ ಒಡ್ಡಿರಲಿಲ್ಲ. ಹೆಣ್ಣು ಮಗಳ ಸಾವಿಗೆ ನ್ಯಾಯ ದೊರಕಿಸಿ ಕೊಡಬೇಕೆಂಬುದಷ್ಟೇ ಉದ್ದೇಶವಾಗಿತ್ತು. ಈಗ ಬೇರೆ ಹಂತಕ್ಕೆ ಬಂದು ನಿಂತಿದೆ. ಈ ಪ್ರಕರಣದಲ್ಲಿ ನನ್ನ ಮಗ ಯಾವ ತಪ್ಪು ಮಾಡಿಲ್ಲ. ತನಿಖೆ ಬಳಿಕ ಸತ್ಯಹೊರಬರುತ್ತದೆ ಎಂದರು.

ತಾಯಿ ಹೇಮಲತಾ ಅವರು ಮಾತನಾಡಿ, ನನ್ನ ಮಗ ಇಂಜಿನೀಯರಿಂಗ್ ನಂತರ ಯೂಟ್ಯೂ ಬರ್ ಆಗಿ ಸಮಾಜಮುಖಿ ವಿಡಿಯೋಗಳನ್ನು ಮಾಡುತ್ತಿದ್ದ. ಮಂಡ್ಯದ ಚಂದನ್‌ಗೌಡ, ಸುಮಂತ್ ಜೊತೆಗೆ ಒಡನಾಟ ಹೊಂದಿದ್ದ. ಧರ್ಮಸ್ಥಳಕ್ಕೆ ಹೋದಾಗ ಅಲ್ಲಿ ಈ ಹೋರಾಟಗಾರರ ಪರಿಚಯವಾಗಿರ ಬಹುದು. ನನ್ನ ಮಗ ಯಾವ ತಪ್ಪು ಮಾಡಿಲ್ಲ, ಅವನ ಮೇಲೆ ಸುಳ್ಳು ಆರೋಪ ಮಾಡಲಾಗುತ್ತಿದೆ. ಎಸ್‌ಐಟಿ ತನಿಖೆಯಲ್ಲಿ ಸತ್ಯ ಹೊರ ಬರ ಲಿದೆ, ಅವನು ದೋಷ ಮುಕ್ತನಾಗಿ ಬರುವುದು ಖಚಿತವೆಂದು ವಿಶ್ವಾಸ ವ್ಯಕ್ತಪಡಿಸಿದರು.

## ಮೈಸೂರು ವಿವಿಗೆ ಹಾಸನದ ಸಿಂಚನ ಟಾಪರ್



ಮೈಸೂರು: ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿ ಕ್ಯಾಂಪಸ್ ಕಾನೂನು ಶಾಲೆಯಲ್ಲಿ 2020-2025ನೇ ಅವಧಿಯ ಐದು ವರ್ಷದ (ಬಿಕಾಂ ಎಲ್‌ಎಲ್‌ಬಿ ) ಸಂಯುಕ್ತ ಕೋರ್ಸ್‌ನಲ್ಲಿ ಹಾಸನದ ಕೆ.ಎಲ್.ಸಿಂಚನ ಅವರು ಡಿಸ್ಟಿಂಕ್ಷನ್ ಪಡೆಯುವ ಮೂಲಕ ವಿಶ್ವ ವಿದ್ಯಾಲಯಕ್ಕೆ ಟಾಪರ್ ಆಗಿ ಹೊರ ಹೊಮ್ಮಿದ್ದಾರೆ.

ತೀವ್ರ ಸ್ಪರ್ಧೆಯ ಜೊತೆಗೆ ಶಿಸ್ತು, ಪರಿಶ್ರಮ ಮತ್ತು ನಿರಂತರ ವಿದ್ಯಾಭ್ಯಾಸದ ಮೂಲಕ ಸಿಂಚನ ಸಾಧನೆಗೆ ಪಾತ್ರರಾಗಿದ್ದಾರೆ. ಗುರುಗಳ ಮಾರ್ಗದರ್ಶನ, ಕುಟುಂಬದ ಬೆಂಬಲ ಮತ್ತು ಸ್ನೇಹಿತರ ಸಹಕಾರದಿಂದ ಉತ್ತಮ ಫಲಿತಾಂಶ ಸಾಧ್ಯವಾಗಿದೆ ಎಂದು ಸಿಂಚನ ಹೇಳಿದರು.

## ಹುಂಡಿ ಹಣ ಕಳವು

• ಪ್ರಜೋದಯ ವರದಿ

**ಬೇಲೂರು:** ದೇವಾಲಯ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು ಹುಂಡಿಯಲ್ಲಿದ್ದ 30 ಸಾವಿರ ರೂ. ನಗದು, 30 ಸಾವಿರ ರೂ. ಮೌಲ್ಯದ ಸಾಮಾಗ್ರಿ ಕದ್ದಿರುವ ಘಟನೆ ತಾಲ್ಲೂಕಿನ ಮತಿ ಘಟ್ಟ ಗ್ರಾಮದ ಕೋಡಿಮಲ್ಲೇಶ್ವರ ದೇವಸ್ಥಾನ ದಲ್ಲಿ ನಡೆದಿದೆ.

ಸೆ.5ರ ರಾತ್ರಿ ದೇಗುಲಕ್ಕೆ ಬಂದಿರುವ ಕಳ್ಳರು ಬೀಗ ಒಡೆದು 7 ಹಿತ್ತಾಳೆ ಗಂಟೆ, 1 ತಾಮ್ರದ ಬಿಂದಿಗೆ, 1 ಜೊತೆ ಹಿತ್ತಾಳೆ ದೀಪಾಲೆ ಕಂಬ, ಒಂದು ಮೈಕ್ ಸೆಟ್ ಸ್ಪೀಕರ್, ಹಾರನ್ ಮೈಕ್ ಮತ್ತು ಸ್ಟಾಂಡ್, ಯುಪಿಎಸ್ ಬ್ಯಾಟರಿ, ಹುಂಡಿ ಯಲ್ಲಿದ್ದ ಸುಮಾರು 30 ಸಾವಿರ ರೂ. ನಗದು ಕದ್ದಿದ್ದಾರೆ. ಹಳೇಬೀಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಚಿನ್ನಾಭರಣ ಕಳವು

• ಪ್ರಜೋದಯ ವರದಿ

**ಹಾಸನ:** ಮನೆ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು ನಗದು ಸೇರಿ 1 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕದ್ದಿರುವ ಘಟನೆ ಚನ್ನಪಟ್ಟಣ ಬಡಾವಣೆಯಲ್ಲಿ ನಡೆದಿದೆ. ಲಲಿತಾ ಎಂಬುವವರು ಮನೆಗೆ ಬೀಗ ಹಾಕಿ ಕಾರ್ಯನಿಮಿತ್ತ ಬೆಂಗಳೂರಿಗೆ ತೆರಳಿದ್ದರು. ಸಂಜೆ ವಾಪಾಸ್ ಬಂದು ನೋಡಿದಾಗ ಕಳ್ಳತನವಾಗಿರುವುದು ತಿಳಿದಿದೆ. ಬಲವಾದ ಆಯುಧ ದಿಂದ ಬಾಗಿಲು ಮುರಿದಿರುವ ಕಳ್ಳರು ಬೀರುವಿನ ಲ್ಲಿಟ್ಟಿದ್ದ 12 ಗ್ರಾಂ ತೂಕದ ಹಳೆಯ ಚಿನ್ನದ ಓಲೆ, 40 ಗ್ರಾಂ ತೂಕದ ಬೆಳ್ಳಿಯ ಕಾಲು ಚೈನು, 12 ಸಾವಿರ ರೂ. ನಗದು ದೋಚಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ನಂಜುಂಡಸ್ವಾಮಿ ವ್ಯಂಗ್ಯಚಿತ್ರಕಾರರ ಸಂಘದ ಅಧ್ಯಕ್ಷ

• ಪ್ರಜೋದಯ ವರದಿ




**ಹಾಸನ:** ಕರ್ನಾಟಕ ವ್ಯಂಗ್ಯಚಿತ್ರಕಾರರ ಅಧ್ಯಕ್ಷರಾಗಿ ವೈ.ಎಸ್. ನಂಜುಂಡ ಸ್ವಾಮಿ ಅವರನ್ನು ಆಯ್ಕೆ ಮಾಡಲಾಗಿದೆ.

ಬೆಂಗಳೂರಿನ ಭಾರತೀಯ ವ್ಯಂಗ್ಯ ಚಿತ್ರ ಗ್ಯಾಲರಿಯಲ್ಲಿ ಇತ್ತೀಚೆಗೆ ನಡೆದ ಕರ್ನಾಟಕ ವ್ಯಂಗ್ಯಚಿತ್ರಕಾರರ ಸಂಘದ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಆಯ್ಕೆ ಘೋಷಿಸಲಾಯಿತು. ಪ್ರಧಾನ ಕಾರ್ಯದರ್ಶಿಗಳಾಗಿ ಬಾಬು ಜತ್ತಕರ್, ಜೆ.ಎಸ್.ನಾಗನಾಥ್, ಜಂಟಿ ಕಾರ್ಯದರ್ಶಿಗಳಾಗಿ ಎಂ.ವಿ.ಶಿವರಾಂ, ಸಂಕೇತ್ ಗುರುದತ್ತ, ಮಹಾ ಪೋಷಕರಾಗಿ ಬಿ.ಜಿ.ಗುಜ್ಜಾರಪ್ಪ, ವಿ.ಆರ್.ಸಿ. ಶೇಖರ್ ಹಾಗು ಹೆಚ್.ಬಿ.ಮಂಜುನಾಥ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ.

ಕಾರ್ಯಾಕಾರಿ ಸಮಿತಿ ಸದಸ್ಯರಾಗಿ ಹೆಚ್.ಎಸ್.ವಿಶ್ವನಾಥ್, ರಘುಪತಿ ಶೃಂಗೇರಿ, ಚಂದ್ರ ಗಂಗೊಳ್ಳಿ, ಡಾ.ಜೆ.ಬಾಲಕೃಷ್ಣ, ಎಂ.ಎನ್.ಸುಬ್ರಹ್ಮಣ್ಯ, ವೆಂಕಟ್‌ಭಟ್ ಎಡನೀರು, ಸಿ.ಎಂ. ನಾಡಿಗೇರ್, ಅರುಣ್ ಕುಮಾರ್, ಬದರಿ ಪುರೋಹಿತ್ ಆಯ್ಕೆಯಾಗಿದ್ದಾರೆ. ಈ ಸಂದರ್ಭದಲ್ಲಿ ಹೊಸದಾಗಿ ಯುವ ವ್ಯಂಗ್ಯಚಿತ್ರಕಾರರ ಪಡೆ ರಚಿಸಲಾಗಿದ್ದು ಅದರಲ್ಲಿ ಎಂ.ಎನ್.ದತ್ತಾತ್ರಿ, ರವಿ ಪೂಜಾರಿ, ಪ್ರಸನ್ನ ಕುಮಾರ್, ವಿನೋದ್ ಆಚಾರ್ಯ, ಸುಮುಖ್ ಶಾನುಭೋಗ್, ಕೊರಲಕುಂಟೆ ದಯಾನಂದ್, ರೆಬೇಕಾ ಟೇಲರ್ ಸದಸ್ಯರಾಗಿ ಕಾರ್ಯ ನಿರ್ವಹಿಸಲಿದ್ದಾರೆ. ಹಿರಿಯ ವ್ಯಂಗ್ಯ ಚಿತ್ರಕಾರ ಉಡುಪಿಯ ಎಂ.ಜೀವನ್ ಶೆಟ್ಟಿ ಅವರನ್ನು ವ್ಯಂಗ್ಯ ಚಿತ್ರ ಕ್ಷೇತ್ರದಲ್ಲಿ ಜೀವಮಾನದ ಸೇವೆಗಾಗಿ ಸನ್ಮಾನಿಸಲಾಯಿತು.

## ಪಕ್ಷ ಸಂಘಟನೆ ಮುಖಂಡರು-ಕಾರ್ಯಕರ್ತರ ಆದ್ಯತೆಯಾಗಲಿ

• ಪ್ರಜೋದಯ ವರದಿ



ಶ್ರವಣಬೆಳಗೊಳ: ಪಕ್ಷ ಸಂಘಟನೆಯನ್ನು ಬಲಿಷ್ಟಗೊಳಿಸಲು ಎಲ್ಲಾ ಮುಖಂಡರು ಹಾಗು ಕಾರ್ಯಕರ್ತರು ಒಂದಾಗಿ ಕಾರ್ಯನಿರ್ವಹಿಸಬೇಕು. ಪಕ್ಷದ ತತ್ವ ಸಿದ್ಧಾಂತಗಳ ಪಾಲನೆಗಾಗಿ ವೈಯಕ್ತಿಕ ಹಿತಾಸಕ್ತಿ ಬದಿಗಿಟ್ಟು ಸಾಮೂಹಿಕ ನಾಯಕತ್ವದೊಂದಿಗೆ ಶ್ರಮಿಸಬೇಕೆಂದು ತಾಲ್ಲೂಕು ಬಿಜೆಪಿ ಅಧ್ಯಕ್ಷ ಪರಮ ಗಂಗಾಧರ್ ಅವರು ಹೇಳಿದರು.

ಶ್ರವಣಬೆಳಗೊಳದಲ್ಲಿ ಭಾನುವಾರ ನಡೆದ ಬಿಜೆಪಿ ಘರ್ ವಾಪಸಿ ಸಭೆಯಲ್ಲಿ ಮಾತನಾಡಿದ ಅವರು, ಪಕ್ಷದ ಯಶಸ್ಸು ಕಾರ್ಯಕರ್ತರ ಬದ್ಧತೆ, ಶ್ರಮ ಹಾಗು ಸಹಕಾರದ ಮೇಲೆ ಅವಲಂಬಿತವಾಗಿದೆ. ಸಂಘಟನೆಯಲ್ಲಿ ಏಕತೆ ಇಲ್ಲದಿದ್ದರೆ ಗುರಿ ಸಾಧನೆ ಸಾಧ್ಯವಿಲ್ಲ. ಪಕ್ಷವನ್ನು ಸದೃಢವಾಗಿ ಕಟ್ಟಿ ಗ್ರಾಮ ಮಟ್ಟದಿಂದಲೇ ಕಾರ್ಯಕರ್ತರನ್ನು ಒಗ್ಗೂಡಿಸಿ ಸಂಘಟನೆ ಮಾಡಬೇಕು. ತಾಲ್ಲೂಕು ಬಿಜೆಪಿ ರೈತ ಮೋರ್ಚಾ ಮಾಜಿ ಉಪಾಧ್ಯಕ್ಷ ಪೂಮಡಿಹಳ್ಳಿ ನಟರಾಜ್ ಪಕ್ಷದ ತತ್ವ ಸಿದ್ಧಾಂತಗಳನ್ನು ಒಪ್ಪಿ ಘರ್ ವಾಪಸಿ ಆಗಿರುವುದು ಸಂತಸ ತಂದಿದೆ. ಅವರೊಂದಿಗೆ ನಾವೆಲ್ಲಾ ಒಟ್ಟಾಗಿ ಇರುತ್ತೇವೆ. ಈಗಾಗಲೇ ಸ್ಥಳೀಯ ಚುನಾವಣೆ ಸಮೀಪಿಸುತ್ತಿದ್ದು ಅವರವರು ಕಾರ್ಯಕರ್ತರೊಂದಿಗೆ ಕೆಲಸ ಮಾಡಲು ಆರಂಭಿಸಿರುವುದು ಪಕ್ಷಕ್ಕೆ ಬಲ ತಂದಿದೆ ಎಂದರು.

ಪೂಮಡಿಹಳ್ಳಿ ನಟರಾಜ್ ಅವರು ಮಾತನಾಡಿ, ಕೆಲವು ಭಿನ್ನಾಭಿಪ್ರಾಯಗಳಿಂದ ಕಳೆದ ವಿಧಾನಸಭೆ ಚುನಾವಣೆಯಲ್ಲಿ ಪಕ್ಷೇತರವಾಗಿ ಸ್ಪರ್ಧಿಸಬೇಕಾಯಿತು. ಮುಂದಿನ ದಿನಗಳಲ್ಲಿ ಬಿಜೆಪಿ ಸಂಘಟನೆಯ ಚಟುವಟಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಕಾರ್ಯಕರ್ತರೊಂದಿಗೆ ಜೊತೆಯಾಗಿ ಕೆಲಸ ಮಾಡುತ್ತೇನೆಂದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗಿರೀಶ್ ನಂಬಿಹಳ್ಳಿ, ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಹಿರಿಬಿಳ್ತಿ ನಾಗೇಶ್ ಮಾತನಾಡಿದರು. ಸಭೆಯಲ್ಲಿ ಎಸ್.ಜೆ. ಭಾಸ್ಕರಾಚಾರ್, ತಾಲ್ಲೂಕು ಯುವಮೋರ್ಚಾ ಮುಖಂಡರಾದ ವಡ್ಡರಳ್ಳಿ ಪ್ರಸನ್ನ, ಕಾರ್ಯದರ್ಶಿ ಜಿ. ಶ್ರವಣ್, ಹೋಬಳಿ ಯುವ ಮೋರ್ಚಾ ಅಧ್ಯಕ್ಷ ಮನುಗೌಡ, ಸುಂಡಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯ ಕುಂಭೇನಹಳ್ಳಿ ಮಂಜುಶೆಟ್ಟಿ, ಹೊಸಹಳ್ಳಿ ಸತೀಶ್, ನಾಗರಾಜ್, ಹಾಲುಮತ್ತಿಘಟ್ಟ ಆನಂದ್ ಇತರರಿದ್ದರು.

## ಗಾಯತ್ರಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಸಭೆ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಕಳೆದ 20 ವರ್ಷಗಳಿಂದ ಪಟ್ಟಣದ ಗಾಯತ್ರಿ ಪತ್ತಿನ ಸಹಕಾರ ಸಂಘ ಯಶಸ್ವಿನ ಹಾದಿಯಲ್ಲಿ ಸಾಗುತ್ತಿದೆಯೆಂದು ಅಧ್ಯಕ್ಷ ಸಿ.ಆರ್.ನಾಗರಾಜ್ ಅವರು ಹೇಳಿದ್ದಾರೆ.

ಪಟ್ಟಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 2024-25ನೇ ಸಾಲಿನ ಸರ್ವ ಸದಸ್ಯರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಷೇರುದಾರರಿಗೆ ನಿರಂತರವಾಗಿ ಡಿವಿಡೆಂಟ್ ನೀಡುತ್ತಿರುವ ಸಹಕಾರಿ ಸಂಘ ಇದಾಗಿದ್ದು, ಈ ಸಾಲಿನಲ್ಲಿ ಶೇ.25ರಷ್ಟು ಡಿವಿಡೆಂಟ್ ವಿತರಣೆಯಾಗಲಿದೆ. ಸಹಕಾರ ಸಂಘದಲ್ಲಿ ಮರಣ ನೀತಿ ಸ್ಥಾಪನೆ ಮಾಡಿದ್ದು, 10 ರಿಂದ 25 ಸಾವಿರ ರೂ. ಏರಿಕೆ ಮಾಡಲಾಗಿದೆ. ಸಾರ್ವಜನಿಕರಿಂದ 12 ಕೋಟಿ ರೂ. ಸಂಗ್ರಹ ಮಾಡಿದ್ದು, 16 ಕೋಟಿ ರೂ. ಸಾಲ ವಿತರಿಸಿರುವುದು ಸಂಘಟನೆ ವೈಶಿಷ್ಟ್ಯವೆಂದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ನಿರ್ದೇಶಕರಾಗಿ ಆಯ್ಕೆಯಾದ ಬ್ರಾಹ್ಮಣ ಮಹಾಸಭಾ ತಾಲ್ಲೂಕು ಕಾರ್ಯದರ್ಶಿ ವೆಂಕಟರಮಣ, ಹೊಳೆನರಸೀಪುರದ ಹೆಚ್.ವಿ.ಭಗವಾನ್, ಸಂಘಟನಾಕಾರರಾದ ಕುಮಾರ್, ರಾಜ್ಯ ಪ್ರಶಸ್ತಿ ಪುರಸ್ಕೃತ ಡಿ.ಗೋಪಾಲ್ ರಾವ್, ತಾಲ್ಲೂಕು ಬ್ರಾಹ್ಮಣ ಮಹಾಸಭಾ ನೂತನ ಅಧ್ಯಕ್ಷ ರಘು, ಷೇರುದಾರರಾದ ವೇದಾ ವತಿ, ಲಕ್ಷ್ಮೀನಾರಾಯಣ್, ಎನ್.ಕೆ.ಸೋಮಶೇಖರ್, ವೆಂಕಟೇಶ್, ಪ್ರಭಾ ಮುಚ್ಚನ್ನಾಯ ಇತರರಿದ್ದರು.

## ಆರಿಫ್ ಜಾನ್ ಅವಿರೋಧ ಆಯ್ಕೆ



• ಪ್ರಜೋದಯ ವರದಿ

**ಬಾಣಾವರ:** ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಆರಿಫ್ ಜಾನ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಧರ್ಮಣ್ಣ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಆರಿಫ್ ಜಾನ್ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾ ಅಧಿಕಾರಿ ದೇವರಾಜ್ ಅವರು ಘೋಷಿಸಿದರು.

ಅಧ್ಯಕ್ಷ ಆರಿಫ್ ಜಾನ್ ಅವರು ಮಾತನಾಡಿ, ಸಹಕಾರ ಸಂಘದ ಎಲ್ಲಾ ಸದಸ್ಯರ ಒಮ್ಮತ ಹಾಗು ಸಹಕಾರದಿಂದ ಸಂಘದ ಏಳಿಗೆಗಾಗಿ ಶ್ರಮಿಸುವುದರ ಜೊತೆಗೆ ಈ ಭಾಗದ ರೈತರಿಗೆ ಸಂಘದಿಂದ ದೊರೆಯ ಬೇಕಾದ ಸವಲತ್ತುಗಳನ್ನು ಸಮರ್ಪಕವಾಗಿ ಒದಗಿಸುವ ಪ್ರಯತ್ನ ಮಾಡುತ್ತೇನೆ. ರೈತರ ಸಂಕಷ್ಟಗಳಿಗೆ ಸ್ಪಂದಿಸುತ್ತಾ, ಸಂಘವನ್ನು ಇನ್ನಷ್ಟು ಉತ್ತಮ ಮಟ್ಟಕ್ಕೆ ಕೊಂಡೊಯ್ಯುವ ಸಂಕಲ್ಪ ಮಾಡಿದ್ದೇನೆಂದು ಹೇಳಿದರು.

ನೂತನ ಅಧ್ಯಕ್ಷರಿಗೆ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಬಿ.ಎಸ್. ಅಶೋಕ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಸಿ.ಶ್ರೀನಿವಾಸ್, ಕೃಷಿ ಪತ್ತಿನ ಸಂಘದ ಮಾಜಿ ಅಧ್ಯಕ್ಷ ಟಿ.ಆರ್. ಕೃಷ್ಣ ಮೂರ್ತಿ, ಟಿ.ಜಿ.ಚಂದ್ರಪ್ಪ, ಧರ್ಮಣ್ಣ, ರಾಜನಾಯಕ್, ವೀಣಾ ವಿಶ್ವನಾಥ್, ರಮೇಶ್, ಜ್ಯೋತಿ, ರಾಮಕೃಷ್ಣ, ಬಿ.ಟಿ.ಗಣೇಶ್, ಕೆಂಚಪ್ಪ, ಈಶ್ವರಪ್ಪ ಹಾಜರಿದ್ದರು.

# ಸಾಲ ಮನ್ನಾ ಭಾವನೆ ಬಿಟ್ಟು ಮರುಪಾವತಿ ಮಾಡಿ

• ಪ್ರಜೋದಯ ವರದಿ

**ಆಲೂರು:** ಸರ್ಕಾರಗಳು ಸಾಲ ಮನ್ನಾ ಮಾಡುತ್ತವೆಂಬ ಮನೋಭಾವನೆಯಿಂದ ರೈತರು ಹೊರಬಂದು ಸಹಕಾರಿ ಬ್ಯಾಂಕುಗಳ ಪ್ರಗತಿಗೆ ಸಹಕರಿಸಬೇಕೆಂದು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷ ಬಿ.ಕೆ.ಲಿಂಗರಾಜು ಅವರು ತಿಳಿಸಿದರು.

ಪಟ್ಟಣದಲ್ಲಿರುವ ಪಿ.ಎಲ್.ಡಿ.ಬಿ. ಬ್ಯಾಂಕಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಸಹಕಾರ ಬ್ಯಾಂಕುಗಳು ರೈತರಿಗೆ ಅತ್ಯಂತ ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯವನ್ನು ನೀಡುತ್ತಿವೆ. ಕಳೆದ ವರ್ಷ 50 ಲಕ್ಷ ನಿವ್ವಳ ಲಾಭದಲ್ಲಿದ್ದ ಬ್ಯಾಂಕು, ಪ್ರಸ್ತುತ ವರ್ಷದಲ್ಲಿ ಸುಮಾರು 70 ಲಕ್ಷ ರೂ.ಗಳ ನಷ್ಟದಲ್ಲಿದೆ. ಸಾಲ ತೆಗೆದುಕೊಂಡ ರೈತರು ಸರಿಯಾದ ಸಮಯಕ್ಕೆ ಮರುಪಾವತಿ ಮಾಡದೆ ಇರುವುದು ಹಾಗೂ ಸರ್ಕಾರಗಳು ಬದಲಾದಂತಹ ಸಂದರ್ಭದಲ್ಲಿ ಸಾಲ ಮನ್ನಾ ಮಾಡುತ್ತವೆಂಬ ಭಾವನೆಯನ್ನು ಇಟ್ಟುಕೊಂಡು ಹಲವು ರೈತರು ಸಾಲವನ್ನು ಮರುಪಾವತಿ ಮಾಡುವ ಗೋಜಿಗೆ ಹೋಗುವುದಿಲ್ಲ. ಇದು ಬ್ಯಾಂಕಿನ ನಷ್ಟಕ್ಕೆ ಪ್ರಮುಖ ಕಾರಣವಾಗಿದೆ ಎಂದರು.

ಸಾಲವನ್ನು ಸರಿಯಾದ ಸಮಯಕ್ಕೆ ಮರುಪಾವತಿ ಮಾಡಿದಾಗ ಮಾತ್ರ ನಮ್ಮ ಬ್ಯಾಂಕಿನ ಅಸ್ತಿತ್ವ ಉಳಿಯುತ್ತದೆ. ಇಲ್ಲದಿದ್ದರೆ ಬ್ಯಾಂಕಿನ ಸ್ಥಿತಿ ಚಿಂತಾಜನಕವಾಗುತ್ತದೆ. ಈ ವರ್ಷ ಸಾಲ ಕೋರಿ ರೈತರಿಂದ ಸುಮಾರು 100ಕ್ಕೂ ಹೆಚ್ಚು ಅರ್ಜಿಗಳು ಬಂದಿದ್ದು, ನಮ್ಮಲ್ಲಿ ಮರು ವಸು ಲಾತಿಯ ಪ್ರಮಾಣ ಕಡಿಮೆ ಇರುವುದರಿಂದ ಆ ರೈತರಿಗೆ ಸಾಲವನ್ನು ವಿಸ್ತರಿಸಲು ಜಿಲ್ಲಾ ಮತ್ತು ಕೇಂದ್ರ ಬ್ಯಾಂಕುಗಳು ಯಾವುದೇ ಅನುದಾನ ವನ್ನು ನೀಡಿರುವುದಿಲ್ಲ. ಸಾಲ ಪಡೆದಿರುವ ರೈತರು ನಿಗದಿತ ಅವದಿಯೊಳಗೆ ತಮ್ಮ ಸಾಲ ವನ್ನು ಮರುಪಾವತಿಸುವಂತೆ ಮನವಿ ಮಾಡಿದರು.

ಮಾಜಿ ಅಧ್ಯಕ್ಷ ಹೆಚ್.ಸಿ.ಶಾಂತಕೃಷ್ಣ ಅವರು ಮಾತನಾಡಿ, ಈಗಾಗಲೇ ಸುಮಾರು ಮೂರು ಕೋಟಿಯಷ್ಟು ಸಾಲ ನೀಡಲಾಗಿದೆ ಆದರೆ ಮರುಪಾವತಿಯಾಗುತ್ತಿಲ್ಲ. ಸಾಲ ತಗೆದು ಕೊಂಡ ರೈತರು ಸಾಬೂಬು ಹೇಳದೆ ಮರು ಪಾವತಿಸಿ ಸಂಘದ ಏಳಿಗೆಗೆ ಸಹಕರಿಯಾಗಬೇಕು ಎಂದರು.

ಬ್ಯಾಂಕಿನ ಮಾಜಿ ನಿರ್ದೇಶಕ ಬಿ.ಸಿ. ಶಂಕರಾಚಾರ್ ಅವರು ಮಾತನಾಡಿ, ರೈತರು ಖಾಸಗಿ ಲೇವಾದೇವಿಗಾರರಿಂದ ಹೆಚ್ಚಿನ ಬಡ್ಡಿಗೆ ಸಾಲವನ್ನು ಪಡೆದು ಸಾಲದ ಸುಳಿಯಲ್ಲಿ ಸಿಲುಕು ವುದನ್ನು ತಪ್ಪಿಸುವ ಉದ್ದೇಶದಿಂದ ಸರ್ಕಾ ರವು ಸಹಕಾರ ಬ್ಯಾಂಕುಗಳಲ್ಲಿ ಕೇವಲ ಶೇ.3ರ ಬಡ್ಡಿ ದರದಲ್ಲಿ ರೈತರಿಗೆ ತಮ್ಮ ಕೃಷಿ ಚಟುವಟಿ ಕೆಗಳಿಗೆ ಸಂಬಂಧಿಸಿದಂತೆ ಸಾಲವನ್ನು ನೀಡುತ್ತಿದೆ ಎಂದರು.

ಬ್ಯಾಂಕಿನ ಉಪಾಧ್ಯಕ್ಷರಾದ ತುಳಸಮ್ಮ ನಿರ್ದೇಶಕರಾದ ಎಂ.ಹೆಚ್.ರಂಗೇಗೌಡ, ಜಿ.ಆರ್.ರಾಮೇಗೌಡ, ರಂಗಯ್ಯ, ನಿಂಗಮ್ಮ, ರಾಧಮ್ಮ, ಎಂ.ಕೆ.ಜಗದೀಶ್, ಜಾರ್ಜ್ ಡಿ.ಕಾಸ್ಟ, ಎಂ.ಎ.ನಿಂಗರಾಜು, ಬಿ.ಸಿ.ಸುನಿಲ್ ಕುಮಾರ್, ಸಿ.ಪಿ.ಧರಣೇಶ್, ಐ.ಎನ್. ನಿರಂಜನ್, ವ್ಯವಸ್ಥಾಪಕ ಯಲ್ಲಪ್ಪ ಮಾದರ, ಜಿ.ಎಸ್.ಶಕುಂತಲಾ, ರಾಜಪ್ಪಗೌಡ, ಮಂಜೇ ಗೌಡ, ನಿವೃತ್ತ ಶಿಕ್ಷಕ ರಾಮ ಚಂದ್ರ, ಯೋಗೇಶ್, ಕೆ.ವಿ.ಮಲ್ಲಿಕಾರ್ಜುನ್, ಸಿಬ್ಬಂದಿಗ ಳಾದ ಎನ್.ಕುಮಾರ್, ರಾಜು, ತನುಜ, ಸೌಮ್ಯ ಸೇರಿ ರೈತರು ಮತ್ತು ಷೇರುದಾರರು ಉಪಸ್ಥಿತರಿದ್ದರು.



## ಬಸವ ಸಾಂಸ್ಕೃತಿಕ ಅಭಿಯಾನ ಯಶಸ್ವಿಗೆ ಸಲಹೆ



• ಪ್ರಜೋದಯ ವರದಿ

**ಅರಸೀಕೆರೆ:** ಜಿಲ್ಲೆಗೆ ಸೆ.21ರಂದು ಆಗಮಿಸುತ್ತಿರುವ ಬಸವ ಸಾಂಸ್ಕೃತಿಕ ಅಭಿಯಾನ ರಥವನ್ನು ಅರ್ಥಪೂರ್ಣವಾಗಿ ಸ್ವಾಗತಿಸಿ ಬಸವ ತತ್ವವನ್ನು ಜಗತ್ತಿಗೆ ಸಾರುವ ಕೆಲಸ ಮಾಡೋಣವೆಂದು ಹಳೇಬೀಡು ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ ಹೇಳಿದರು.

ನಗರದ ವಿವೇಕಾನಂದ ಬಿಇಡಿ ಕಾಲೇಜು ಸಭಾಂಗಣದಲ್ಲಿ ಶನಿವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, 12ನೇ ಶತಮಾನದಲ್ಲಿ ಬಸವಾದಿ ಶರಣರು ವಚನ ಕ್ರಾಂತಿ ಮಾಡಿದ್ದಾರೆ. ಪ್ರಸ್ತುತ ಸಮಾಜ ಶರಣರ ತತ್ವಗಳನ್ನು ಅಳವಡಿಸಿಕೊಳ್ಳಬೇಕಾದ ಅವಶ್ಯಕತೆ ಹೆಚ್ಚಿದೆ ಎಂದರು.

ಬಸವಣ್ಣ ಅವರನ್ನು ಭಕ್ತಿ ಭಂಡಾರಿ, ಜಗಜ್ಯೋತಿ ಎಂಬ ಹೆಸರಿನಲ್ಲಿ ಕರೆಯಲಾಗುತ್ತದೆ. ಜೊತೆಗೆ ರಾಜ್ಯ ಸರ್ಕಾರ ಬಸವಣ್ಣನನ್ನು ಸಾಂಸ್ಕೃತಿಕ ನಾಯಕನೆಂದುಬಿರುದು ನೀಡಿದ್ದು ಸಂಭ್ರಮಿಸಬೇಕಾದ ವಿಷಯವೆಂದರು.

ಮೂರು ಕಳಸ ಮಠದ ಜ್ಞಾನಪ್ರಭು ಸಿದ್ದರಾಮದೇಶಿ ಕೇಂದ್ರ ಸ್ವಾಮೀಜಿ, ಮಾಡಾಳು ನಿರಂಜನ ಮಠದ ರುದ್ರಮುನಿ ಸ್ವಾಮೀಜಿ, ಕೋಳಗುಂದ ಕೆದಿಗೆ ಮಠದ ಚಂದ್ರಶೇಖರ ಸ್ವಾಮೀಜಿ, ಡಿ.ಎಂ.ಕುರ್ಕೆ ವಿರಕ್ತಮಠದ ಚಂದ್ರಶೇಖರಸ್ವಾಮೀಜಿ, ಮಾರಗೊಂಡನಹಳ್ಳಿ ವಿರಕ್ತ ಮಠದ ಅಭಿನಂದನ ಬಸವಲಿಂಗ ಸ್ವಾಮೀಜಿ ಮಾತನಾಡಿದರು.

ಸಮಾಜದ ಮುಖಂಡರಾದ ಶಶಿಧರ್, ಜಿವಿಟಿ ಬಸವರಾಜ್, ದಿವಾಕರ್ ಬಾಬು, ಬಿ.ಜಿ.ನಿರಂಜನ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಸ್ವಾಮಿ, ದೇಶಾಣಿ ಆನಂದ್, ಅರುಣ್ ಕುಮಾರ್, ಮಂಜುನಾಥ್, ಮಹೇಂದ್ರ ಮುರುಂಡಿ ಶಿವಯ್ಯ, ಸಹಕಾರ ರತ್ನ ಸಿದ್ದಪ್ಪ ಓಂಕಾರ ಮೂರ್ತಿ ಇತರರಿದ್ದರು.

## ಎಸ್.ಹೊಸಹಳ್ಳಿ ಅದ್ದೂರಿ ಗಣೇಶೋತ್ಸವ ವಿಸರ್ಜನೆ



• ಪ್ರಜೋದಯ ವರದಿ

**ಶ್ರವಣಬೆಳಗೊಳ:** ಹೋಬಳಿಯ ಎಸ್.ಹೊಸಹಳ್ಳಿ ಗ್ರಾಮದ ಶ್ರೀ ಭಜರಂಗಿ ವಿನಾಯಕ ಗೆಳೆಯರ ಬಳಗದ ವತಿಯಿಂದ ಪ್ರತಿಷ್ಠಾಪಿಸಲಾಗಿದ್ದ ಶ್ರೀ ಗಣಪತಿ ಮೂರ್ತಿಯ ಮೆರವಣಿಗೆ ಶುಕ್ರವಾರ ಅದ್ದೂರಿಯಾಗಿ ನೆರವೇರಿತು. ರಾತ್ರಿ ಪುಷ್ಪಾಲಂಕಾರ, ಗಣಪತಿ ಹೋಮ, ಮಹಾ ಮಂಗಳಾರತಿಯೊಂದಿಗೆ ಪೂಜಾ ಕೈಂಕರ್ಯಗಳು ಹಾಗೂ ಅನ್ನ ಸಂತರ್ಪಣೆ ನೆರವೇರಿಸಲಾಯಿತು. ವಿಶೇಷವಾಗಿ ಅತ್ತಿಹಳ್ಳಿಯ ಅಮೃತಲಿಂಗೇಶ್ವರ ಮಹಿಳಾ ಕಲಾ ತಂಡದವರಿಂದ ಜಾನಪದ ಕೋಲಾಟ ಕಾರ್ಯಕ್ರಮ ಗಮನ ಸೆಳೆಯಿತು.

ಶ್ರೀ ವೀರಭದ್ರೇಶ್ವರ ಕಲಾ ತಂಡದವರಿಂದ ವೀರಗಾಸೆ ನೃತ್ಯ, ಮಂಗಳವಾದ್ಯ, ಕೆಂಕೆರೆ ಬ್ಯಾಂಡ್ ಸೆಟ್ ಸೇರಿ ವಿವಿಧ ಕಲಾ ತಂಡಗಳು ಹಾಗೂ ಹೊಸಹಳ್ಳಿ ಮತ್ತು ಅಕ್ಕಪಕ್ಕದ ಗ್ರಾಮದ ರೈತರು ಸಾಕಿರುವ ಹಳ್ಳಿಕಾರ್ ಎತ್ತುಗಳ ವಿಶೇಷ ಮೆರವಣಿಗೆಯೊಂದಿಗೆ ಊರಿನ ಪ್ರಮುಖ ಬೀದಿಗಳಲ್ಲಿ ಉತ್ಸವ ನೆರವೇರಿಸಿ ಹೊಸಹಳ್ಳಿಯ ದೊಡ್ಡಕೆರೆಯಲ್ಲಿ ವಿಸರ್ಜಿಸಲಾಯಿತು.

## ಇಂದಿನಿಂದ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟ

**ಹಾಸನ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ವತಿಯಿಂದ ಸೆ.8 ಮತ್ತು ಸೆ.9ರಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ 2025-26ನೇ ಸಾಲಿನ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟ ಏರ್ಪಡಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಕಾರ್ಯಕ್ರಮ ಉದ್ಘಾಟಿಸು ವರು. ಕರ್ನಾಟಕ ರಾಜ್ಯ ಗೃಹ ಮಂಡಳಿ ಅಧ್ಯಕ್ಷರಾದ ಕೆ.ಎಂ.ಶಿವಲಿಂಗೇಗೌಡ ಅವರು ಗೌರವ ಉಪಸ್ಥಿತಿ ವಹಿಸಲಿದ್ದಾರೆ, ಶಾಸಕ ಸ್ವರೂಪ್ ಪ್ರಕಾಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಸಂಸದ ಶ್ರೇಯಸ್ ಎಂ.ಪಟೇಲ್, ಶಾಸಕರಾದ ಹೆಚ್.ಡಿ.ರೇವಣ್ಣ, ಡಾ.ಸಿ.ಎನ್. ಬಾಲಕೃಷ್ಣ, ಎ.ಮಂಜು, ಹೆಚ್.ಕೆ.ಸುರೇಶ್, ಸಿಮೆಂಟ್ ಮಂಜು, ವಿಧಾನ ಪರಿಷತ್ ಶಾಸಕರಾದ ಮಧು ಜಿ.ಮಾದೇಗೌಡ, ಕೆ. ವಿವೇಕಾನಂದ, ಡಾ|| ಸೂರಜ್‌ರೇವಣ್ಣ ಹಾಗೂ ಮಹಾನಗರ ಪಾಲಿಕೆ ಪ್ರಭಾರಿ ಮೇಯರ್ ಹೇಮಾಲತಾ ಕಮಲಕುಮಾರ್ ಭಾಗವಹಿಸಲಿದ್ದಾರೆ. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ನವೀನ್ ರಾಜ್ ಸಿಂಗ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತ ಆರ್.ಚೇತನ್ ಭಾಗವಹಿಸಲಿದ್ದಾರೆ.

# ಎಂ.ಶಿವರ ಕೆರೆ ಭರ್ತಿ ಬಾಗಿನ ಅರ್ಪಿಸಿದ ಬಾಲಕೃಷ್ಣ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಕಲ್ಲೇ ಸೋಮನ ಹಳ್ಳಿ ಏತ ನೀರಾವರಿ ಯೋಜನೆಯಿಂದ ಎಂ.ಶಿವರ ಸೇರಿ 18 ಗ್ರಾಮದ ಕೆರೆಗಳು ಭರ್ತಿಯಾಗಲಿದ್ದು ಕಾಮಗಾರಿಗಾಗಿ 35 ಕೋಟಿ ರೂ. ವೆಚ್ಚ ಮಾಡಲಾಗಿದೆಯೆಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ಹೋಬಳಿಯ ಎಂ.ಶಿವರ ಗ್ರಾಮದ ಕೆರೆಕೋಡಿ ಬಿದ್ದ ಹಿನ್ನಲೆಯಲ್ಲಿ ಗ್ರಾಮಸ್ಥರು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಶನಿವಾರ ಕೆರೆಗೆ ಬಾಗಿನ ಅರ್ಪಿಸಿ ಮಾತನಾಡಿ, ಈ ಯೋಜನೆಯಿಂದ ತಗಡೂರು, ಎಂ.ಶಿವರ, ಕೆಂಬಾಳು ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಸುಮಾರು 18ಕ್ಕೂ ಹೆಚ್ಚು ಕೆರೆಗಳು ಬರಲಿದ್ದು, ಯೋಜನೆಗೆ 2019ರಲ್ಲಿ ಹೆಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಅನುದಾನ ಬಿಡುಗಡೆ ಮಾಡಿದ್ದರು. ಕಳೆದ ವರ್ಷದ ಬೇಸಿಗೆಯಲ್ಲಿ ತಾಂತ್ರಿಕವಾಗಿ ಚಾಲನೆ ನೀಡಲಾಗಿತ್ತು. ಈ ವರ್ಷದ ಪೂರ್ವ ಹಂಗಾಮಿನಲ್ಲಿ ನವಿಲೆ ಬಳಿಯಿರುವ ಜಾಕ್‌ವೆಲ್‌ನಲ್ಲಿ ಯೋಜನೆಗೆ ಚಾಲನೆ ನೀಡಲಾಗಿತ್ತು. ಈ ಏತ ನೀರಾವರಿ ಯೋಜನೆಯಲ್ಲಿ ಪ್ರಥಮವಾಗಿ ಎಂ.ಶಿವರ ಕೆರೆ ಸಂಪೂರ್ಣವಾಗಿ ತುಂಬಿ ಕೋಡಿ ಬಿದ್ದಿದೆ. ಈ ಭಾಗದ ರೈತರ ದಶಕಗಳ ಕನಸು ನನಸಾಗಿದೆಯೆಂದರು.

ಈ ಯೋಜನೆ ಪೂರ್ಣಗೊಳಿಸುವಷ್ಟರಲ್ಲಿ ಅನೇಕ ಕಷ್ಟ ಎದುರಿಸಿದ್ದೇನೆ. ನನಗೆ ರೈತರ ಹಿತ ಮುಖ್ಯವಾಗಿದ್ದು, ಮುಂಬರುವ ದಿನಗಳಲ್ಲಿ ಬಿದರೆ, ಕೆಂಬಾಳು, ಮಾದಗೌಡನಹಳ್ಳಿ ಸೇರಿ ಎಲ್ಲಾ ಕೆರೆಗಳನ್ನು ತುಂಬಿಸಲು ಆದ್ಯತೆ ನೀಡುತ್ತೇನೆಂದು ತಿಳಿಸಿದರು.

ಈ ಏತ ನೀರಾವರಿ ಯೋಜನೆಗೆ ಪೈಪ್‌ಲೈನ್ ಮೂಲಕ ನೀರು ಹರಿಸಲಾಗುತ್ತಿದ್ದು, ಬಲ ಮತ್ತು ಎಡ ಭಾಗದ ಕೆರೆಗಳಿಗೆ ಅನುಗುಣವಾಗಿ ಸ್ವಲ್ಪವೂ ನೀರು ಪೋಲಾಗದೆ ಕೆರೆಗಳಿಗೆ ನೀರು ಹರಿಸಲಾಗುತ್ತಿದೆ. ಈ ಯೋಜನೆನೂರಕ್ಕೆ ನೂರರಷ್ಟು ಸಂಪೂರ್ಣ ಯಶಸ್ವಿಯಾಗಿದೆಯೆಂದರು.

ದಿಡಗ ಭಾಗದ ಕೆರೆಗಳನ್ನು ತುಂಬಿಸುವ ಯೋಜನೆಗೆ ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅನುದಾನ ನೀಡಿದ್ದಾರೆಂದರು.

ಹಿರಿಯರಾದ ರಾಯಪ್ಪ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಕುಸುಮ ಬಾಲಕೃಷ್ಣ, ಟಿಎಪಿಎಂಎಸ್ ಅಧ್ಯಕ್ಷ ಮರಗೂರು ಅನಿಲ್, ಉದ್ಯಮಿ ಭುವನಹಳ್ಳಿ ಯೋಗೇಶ್, ಗ್ರಾಮ ಪಂಚಾಯಿತಿ ಅಧ್ಯಕ್ಷೆ ನಯನ ಮಧು, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಓಬಳಾಪುರ ಬಸವರಾಜು, ಕುಂಬಾರಹಳ್ಳಿ ರಮೇಶ್, ವಿ.ಎನ್. ಮಂಜುನಾಥ್, ವಿಎಸ್‌ಎಸ್ ಮಾಜಿ ಅಧ್ಯಕ್ಷ ಪುರುಷೋತ್ತಮ್, ಮುಖಂಡ ರಾದ ನಂಜೇಶ್‌ಗೌಡ, ರಾಜು, ನವೀನ್, ಬಾಬು ಇತರರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK